Sri R. M. PATIL.—Sir, I beg to move:

"That the Mysore Prohibition of Smoking in Show Houses and Public Halls Bill, 1963, as passed by the Legislative Council, be passed."

Mr. SPEAKER.—The question is:

"That the Mysore Prohibition of Smoking in Show Houses and Public Halls Bill, 1963, as passed by the Legislative Council, be passed."

The motion was adopted.

BUDGET ESTIMATES OF THE MYSORE STATE ELECTRICITY BOARD FOR 1960-61 TO 1963-64.

Motion to consider.

Sri S. NIJALINGAPPA (Chief Minister).—Sir, I beg to move:

"That the Budget Estimates of the Mysore State Electricity Board for the years 1960-61, 1961-62, 1962-63 and 1963-64 laid on the Table of the House, be taken into consideration."

Mr. SPEAKER.—Motion moved:

"That the Budget Estimates of the Mysore State Electricity Board for the years 1960-61, 1961-62, 1962-63 and 1963-64 laid on the Table of the House, be taken into consideration."

Sri V. S. PATIL.—I want to know why the Budget Estimates for four years have been placed at one time instead of placing year after year.

Sri S. NIJALINGAPPA.—I cannot say why it is done; but it is being done. I will wait for the constructive criticism and constructive proposals from Hon'ble Members.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ಈ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಮೈಸೂರು ದೇಶದ ವಿದ್ಯುಚ್ಛಕ್ತಿ ಮಂಡಲಿಯ ಅಯವ್ಯಯದ ಪಟ್ಟಿಯನ್ನು ಚರ್ಚೆ ಮಾಡುವುದಕ್ಕೋಸ್ಕರ ಇಟ್ಟಿದ್ದಾರೆ. ಒಂದಾನೊಂದು ಕಾಲದಲ್ಲಿ ಈ ವಿದ್ಯುಚ್ಛಕ್ತಿಮಂಡಲಿ ಇಡೀ ಭಾರತ ದೇಶದಲ್ಲೆಲ್ಲಾ ಹೆಸರಾದಂಥ ಇಲಾಖೆಯಾಗಿತ್ತು. ವಿದ್ಯುಚ್ಛಕ್ತಿ ಉತ್ಪತ್ತಿಯಲ್ಲೂ ಕೂಡ ಮೈಸೂರು ದೇಶ ಭಾರತದಲ್ಲಿ ಪ್ರಥಮಸ್ಥಾನವನ್ನು ಪಡೆದಂಥ ಕಾಲವಾಗಿತ್ತು. ಈಗ ಇದು ವಿದ್ಯುಚ್ಛಕ್ತಿ ಉತ್ಪತ್ತಿಯಲ್ಲಿ ಅಕ್ಕಪಕ್ಕದ ದೇಶಗಳಿಗಿಂತ ಮುಂದೆ ಇದ್ದಂಥಾದ್ದು ಇವತ್ತು ಹತ್ತನೆಯ ಸ್ಥಾನಕ್ಕೆ ಇಳಿದಿದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

The Electricity Board was constituted except the Hydro-electric project of Sharavathi, Bhadra, Left Bank of Tungabhadra and investigation of Hydro-electric projects, these having been retained with the Government." ಎಂಬುದಾಗಿ ಇದರಲ್ಲೊಂದು ಕಡೆ ನಮೂದು ಮಾಡಿದ್ದಾರೆ.

ಇನ್ನು ವಿದ್ಯುಚ್ಛಕ್ತಿ ಉತ್ಪತ್ತಿ ಬಗ್ಗೆ ಆಡಳಿತದಲ್ಲಿ ಎಷ್ಟರಮಟ್ಟಿನ ಲಾಭ ಇದೆಯೆಂಬುದನ್ನು ನಾವು ಇದರಿಂದ ನೋಡಬೇಕಾಗಿದೆ. ಇವತ್ತು ವಿದ್ಯುಚ್ಛಕ್ತಿ ಇಲಾಖೆಯು ಆಡಳಿತದಲ್ಲಿ ಎಲೆಕ್ಟ್ರಿಸಿಟಿ ಬೋರ್ಡ್ ಅಂದರೆ ವಿದ್ಯುಚ್ಛಕ್ತಿ ಮಂಡಲಿ ಒಂದು ಅಧಿಕೃತ ಸಂಸ್ಥೆಯಾಗಿ 1948ನೆಯ ಎಲೆಕ್ಟ್ರಿಸಿಟಿ ಅಕ್ಟ್ ಪ್ರಕಾರವಾಗಿ ಸ್ಥಾಪನೆಯಾದಮೇಲೆ ಈ ವಿದ್ಯುಚ್ಛಕ್ತಿ ಆಡಳಿತವನ್ನು ಮೈಸೂರು ದೇಶದಲ್ಲಿ ಒಂದು ಮಂಡಲಿಗೆ ವಹಿಸಿದ್ದಾರೆ. ಆ ಮಂಡಲಿಗೆ ಅದರ ಆಡಳಿತವನ್ನು ವಹಿಸಿದಂಥ ಕಾಲದಲ್ಲಿ

ಇವರ ಹೇಳಿಕೆಯ ಪ್ರಕಾರವಾಗಿ ಮೈಸೂರುದೇಶದ ವಿದ್ಯುಚ್ಛಕ್ತಿ ಮಂಡಲಿಯ ಕಾರ್ಯಕಲಾಪಗಳು 1957ನೆಯ ಅಕ್ಟೋಬರ್ 1ನೆಯ ತಾರೀಖಿನಿಂದ ಪ್ರಾರಂಭವಾದುವು. ಆದರೆ ವಿದ್ಯುಚ್ಛಕ್ತಿ ಮಂಡಲಿ ರಚನೆಯಾದ ಉದ್ದೇಶ ಈ ದೇಶದಲ್ಲಿ ವಿದ್ಯುಚ್ಛಕ್ತಿ ಉತ್ಪತ್ತಿ, ವಿದ್ಯುಚ್ಛಕ್ತಿ ಹಂಚಿಕೆ ಬಗ್ಗೆ ಎಲ್ಲರೂ ಹೊಂಬಾಣಿಕೆಯಿಂದ ಕೆಲಸಮಾಡಬೇಕು, ಅವುಗಳ ಅಭಿವೃದ್ಧಿಯಾಗಬೇಕು, ಅದಕ್ಕಾಗಿ ಒಂದು ಸ್ವಯಂ ಆಡಳಿತ ಸಂಸ್ಥೆ ಇರಬೇಕೆಂಬುದಾಗಿಯೇ ಈ ವಿದ್ಯುತ್ ಮಂಡಲಿಯನ್ನು ರಚನೆ ಮಾಡಲಾಯಿತು. ಆದರೆ ಆ ರೀತಿ ರಚನೆಮಾಡಿಯೂ ಅದರ ಆಡಳಿತಕ್ಕೆ ವಿದ್ಯುಚ್ಛಕ್ತಿಯನ್ನು ವಿಶೇಷವಾಗಿ ಉತ್ಪತ್ತಿಮಾಡುವ ದೊಡ್ಡ ದೊಡ್ಡ ಕೇಂದ್ರವಾಗಿರತಕ್ಕ ಶರಾವತಿ ಮತ್ತು ಇತರೇ ಕೆಲವು ಕಾಮಗಾರಿಗಳನ್ನು ಇನ್ನೂ ವಿದ್ಯುಚ್ಛಕ್ತಿ ಮಂಡಲಿಯ ಅಧೀನಕ್ಕೆ ಕೊಡದೇ ಇರುವುದು ನನಗಂತೂ ಅರ್ಥವಾಗಲಿಲ್ಲ. ಈ ದೇಶದಲ್ಲಿ ವಿದ್ಯುಚ್ಛಕ್ತಿ ಉತ್ಪತ್ತಿ ಮತ್ತು ಹಂಚಿಕೆ ಸರ್ವೇ ಸಾಮಾನ್ಯವಾಗಿ ಸ್ವಯ ಆಡಳಿತದವರ ಅಧಿಕಾರಕ್ಕೊಳಪಟ್ಟಿರಬೇಕು. ಅವರು ನೇರವಾಗಿ ಹೆಚ್ಚಿನ ಜವಾಬ್ದಾರಿಯಿಂದ ಕೆಲಸ ಮಾಡಿ ಈ ದೇಶದಲ್ಲಿ ವಿದ್ಯುಚ್ಛಕ್ತಿ ಉತ್ಪತ್ತಿಯನ್ನು ಹೆಚ್ಚು ಮಾಡಬೇಕು. ಮೈಸೂರುದೇಶ ವಿದ್ಯುಚ್ಛಕ್ತಿ ಉತ್ಪತ್ತಿಯಲ್ಲಿ ಮೊದಲಿನಿಂದಲೂ ಮುಂದಿದ್ದು ಈಗ ಹಿಂದುಳಿದಿದೆ ಯೆಂದರೆ ಬಹಳ ಶೋಚನೀಯವಾದ ಪರಿಸ್ಥಿತಿ ಎಂಬುದಾಗಿ ನಾನು ಹೇಳುತ್ತೇನೆ. ಈ ಬಗ್ಗೆ ಏನು ತಪ್ಪುಗಳಿದ್ದರೂ ಸರ್ಕಾರದವರು ಸರಿಪಡಿಸಿಕೊಂಡು ಆದಷ್ಟು ಜಾಗ್ರತೆಯಾಗಿ ವಿದ್ಯುಚ್ಛಕ್ತಿ ಉತ್ಪತ್ತಿಯನ್ನು ಈ ದೇಶದಲ್ಲಿ ಹೆಚ್ಚು ಮಾಡುತ್ತಾರೆಂಬ ಭರವಸೆ ಜನತೆಗೆ ಇದ್ದರೂ ಕೂಡ ಇವತ್ತಿನ ವರೆಗೂ ವಿದ್ಯುಚ್ಛಕ್ತಿ ಕೊರತೆ ನೀಗಿಸುವ ಪ್ರಯತ್ನವಾಗಲೀ ಮತ್ತು ವಿದ್ಯುಚ್ಛಕ್ತಿ ಇಲಾಖೆಯ ಆಡಳಿತ ದಲ್ಲಿರುವ ಲೋಪದೋಷಗಳ ನಿವಾರಣೆಯ ಪ್ರಯತ್ನವಾಗಲೀ ಇನ್ನೂ ಪರಿಪೂರ್ಣವಾಗಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ.

ವಿದ್ಯುಚ್ಛಕ್ತಿ ಮಂಡಳಿಯ ಆಯವ್ಯಯ ಪಟ್ಟಿ ಚಿತ್ರ ವಿಚಿತ್ರವಾಗಿದೆ. 750 ಲಕ್ಷ ರೂಪಾಯಿ ಆದಾಯ ಅಂದಾಜು ಮಾಡಿದ್ದರೆ ಖರ್ಚು ಸುಮಾರು 7771 ಲಕ್ಷ ರೂಪಾಯಿ ಅಷ್ಟು ಅಂದಾಜು ಇದೆ. ವರ್ಷ ವರ್ಷ ಖರ್ಚಿನ ಅಂದಾಜು ಜಾಸ್ತಿಯಾಗುತ್ತಿದೆ. 1962-63ರಲ್ಲಿ ಆರೂವರೆ ಕೋಟಿ ಆದಾಯ ಬಂದಿದೆ, 619 ಲಕ್ಷ ಖರ್ಚು ಮಾಡಿದ್ದಾರೆ. ಈಗ ಅದು 771 ಲಕ್ಷಕ್ಕೆ ಏರಿದೆ. ಇದರಲ್ಲಿ ಬಹು ಭಾಗ ಹಣ ಬಡ್ಡಿ ಕೊಡುವುದಕ್ಕೆ ಇದೆ. ಹೋದ ವರ್ಷಕ್ಕಿಂತ ಈ ವರ್ಷ ಒಂದೂವರೆ ಕೋಟಿ ರೂಪಾಯಿ ಖರ್ಚು ತೋರಿಸಿದ್ದಾರೆ. ಆಸ್ತಿ ವಿಲೇವಾರಿ ಬಗ್ಗೆ ಐದನೇ ಪಟ್ಟಿಯಲ್ಲಿ ಹೇಳುತ್ತಾರೆ.

Write-off capital to the extent of 207 lakhs being the value of assets either non-existing or not in useful service has to be considered.

ಬಂಡವಾಳ ಟ್ರಾನ್ಸ್‌ಫರ್ ಮಾಡಿದ ಕಾಲದಲ್ಲಿ ಈ 207 ಲಕ್ಷ ರೂಪಾಯಿಗಳಿಗೆ ಯಾರು ಜವಾಬ್ದಾರರು ಎಂಬ ದನ್ನು ಸರ್ಕಾರ ನಿಷ್ಕರ್ಷೆ ಮಾಡಿಲ್ಲ. ಇದೊಂದು ವಿಚಿತ್ರ ಸಮಸ್ಯೆಯಾಗಿದೆ. ಎಲ್ಲಿ ರೈಟ್ ಆಫ್ ಮಾಡಬೇಕು ಇದಕ್ಕೆ ಯಾರು ಜವಾಬ್ದಾರು ಎಂಬುದು ತಿಳಿಯದೇ ಇರುವುದರಿಂದ ಇದು ವಿಚಿತ್ರವೂ ವಿಸ್ಮಯಕಾರಿಯೂ ಆಗಿದೆ. ಇದಕ್ಕೆ ತೀವ್ರ ಗಮನ ಕೊಟ್ಟು ಯಾರು ಜವಾಬ್ದಾರರು ಎಂಬುದನ್ನ ಕಂಡು ಹಿಡಿಯಬೇಕು, ಅದನ್ನು ದೀರ್ಘವಾಗಿ ಯೋಚನೆ ಮಾಡಿ ಕಟ್ಟುನಿಟ್ಟಾಗಿ ಕ್ರಮ ಸರ್ಕಾರ ತೆಗೆದುಕೊಳ್ಳಬೇಕೆಂದು ನಾನು ಇವತ್ತಿನ ದಿವಸ ಸರಕಾರದಲ್ಲಿ ಕೇಳಿಕೊಳ್ಳುತ್ತೇನೆ. ಅಪಾರವಾಗಿ ಬಂಡವಾಳ ಹಾಕಿರತಕ್ಕಂಥ ವಿದ್ಯುಚ್ಛಕ್ತಿ ಕೇಂದ್ರಗಳನ್ನು ಅವರಿಗೆ ವಹಿಸಿ ಕೊಟ್ಟಿದ್ದೀರಿ. ಮೊದಲನೆ ಹಂತದಲ್ಲಿ ಅದು 34 ಕೋಟಿ ರೂಪಾಯಿ ಅಷ್ಟು ಇದೆ. ಅದು ವರ್ಷ ವರ್ಷ ಹೆಚ್ಚುತ್ತಾ ಈಗ 54 ಕೋಟಿ 98 ಲಕ್ಷ ರೂಪಾಯಿಯಷ್ಟು ಆಗಿದೆ. ಬಂಡವಾಳ ಹೆಚ್ಚು ಮಾಡುತ್ತಿರುವುದು ಪ್ರಶಂಶನೀಯವಾದ ವಿಚಾರ. ಹಣ ಖರ್ಚು ಮಾಡತಕ್ಕಂಥ ಯೋಜನೆಯಲ್ಲಿ ಸರ್ಕಾರ ಬಂಡವಾಳ ಕೊಡದೇ ಇರುವುದರಿಂದ ಸಾರ್ವಜನಿಕರಿಂದ ಸಾಲ ಪಡೆದು ಬಂಡವಾಳ ಸರಿ ಮಾಡಿಕೊಳ್ಳ ತಕ್ಕಂಥ ಸ್ಥಿತಿ ಬಂದಿದೆ. ಇಂಥ ಸಾಲದ ಮೇಲೆ ಬಡ್ಡಿ ಜಾಸ್ತಿಯಾಗುತ್ತಿದೆ. ಸರ್ಕಾರ ನೇರವಾಗಿ ಸಾಲ ಕೊಟ್ಟರೆ ಬಡ್ಡಿ ಕಡಿಮೆಯಾಗುತ್ತದೆ. ಆದ್ದರಿಂದ ಸರ್ಕಾರ ನೇರವಾಗಿ ಸಾಲ ಕೊಡಬೇಕು ಅವರ ಕಷ್ಟ ನಿವಾರಣೆ ಮಾಡಬೇಕಾದುದು ಸರ್ಕಾರದ ಕರ್ತವ್ಯ ಎಂದು ನನ್ನ ಭಾವನೆ.

ಇನ್ನು ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಅನೇಕ ಲೋಪ ದೋಷಗಳು ಇವೆ. ಮೂರು ಜನ ಸದಸ್ಯರಲ್ಲಿ ಒಬ್ಬರು ಅಧ್ಯಕ್ಷರು, ಇನ್ನಿಬ್ಬರು ಗೌರವ ಸದಸ್ಯರು ಆಗಿದ್ದಾರೆ. ಈ ಸಂದರ್ಭದಲ್ಲಿ ಒಂದು ಅಂಶವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಸುಮಾರು ಐದು ಕೋಟಿ ರೂಪಾಯಿ ಸಾಲ ತೆಗೆದುಕೊಂಡಿದ್ದಾರೆ. ಸಾಲ ತೆಗೆದುಕೊಂಡ ಹಣದಿಂದ ಯಾವ ರೀತಿ ವ್ಯವಹಾರ ಮಾಡುತ್ತಿದ್ದಾರೆ ಎಂಬುದು ಮುಖ್ಯ. ಈ ಮಂಡಳಿಯ ಲೆಕ್ಕ ಪತ್ರಗಳ ವ್ಯವಹಾರ ಎರಡು ಬ್ಯಾಂಕಿನಲ್ಲಿ ಮಾತ್ರ ನಡೆಯುತ್ತಿದೆ. ಈ ಎರಡು ಬ್ಯಾಂಕುಗಳಿಗೂ ಈ ಇಬ್ಬರು ಸದಸ್ಯರಿಗೂ ನಿಕಟವಾದ ಸಂಬಂಧ ಇದೆ ಎಂಬುದನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಈ ಎರಡು ಬ್ಯಾಂಕಿನಲ್ಲಿ ಹಣ ಡಿಪಾಜಿಟ್ ಇಟ್ಟಿದ್ದಾರೆ. ಸಾಲ ಕೇಳಿದ್ದಾಗ್ಗೆ ವಿದ್ಯುಚ್ಛಕ್ತಿ ಮಂಡಲಿಗೆ ಶೇಕಡ

(ಶ್ರೀ ಎಸ್. ಶಿವಪ್ಪ)

ನಾಲ್ಕೂವರೆ ಐದರಷ್ಟು ಬಡ್ಡೀ ದರಕ್ಕೆ ಸಾಲ ಕೊಟ್ಟಿದ್ದಾರೆ. ಕಾಲ್ ಡಿಪಾಜಿಟ್ ಇಟ್ಟಿರುವುದರ ಮೇಲೆ ಎರಡೂವರೆ ಅಥವಾ ಮೂರು ಪರ್ಸೆಂಟ್ ಬಡ್ಡಿ ಕೊಡುತ್ತಾರೆ. ಅಂದರೆ ನಮ್ಮ ಹಣದಿಂದ ಶೇಕಡ ಒಂದೂವರೆಯಷ್ಟು ಲಾಭ ಈ ಬ್ಯಾಂಕಿನವರು ತೆಗೆದುಕೊಳ್ಳುತ್ತಿದ್ದಾರೆ. ಜವಾಬ್ದಾರರಾಗಿರುವ ಈ ಇಬ್ಬರು ಸದಸ್ಯರು ಬ್ಯಾಂಕುಗಳಿಗೆ ನೇರವಾದ ಸಂಬಂಧ ಇಟ್ಟುಕೊಂಡಿದ್ದಾರೆ. ಕಾನೂನು ಪ್ರಕಾರ ಬೋರ್ಡ್ ಸದಸ್ಯರಿಗೆ ಈ ರೀತಿ ಸಂಬಂಧ ಇಟ್ಟುಕೊಳ್ಳುವುದಕ್ಕೆ ಹಕ್ಕು ಇಲ್ಲ. ಇದು ಒಂದು ಹೆಚ್ಚಿನ ದ್ರೋಹ ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಬೇಕಾಗಿದೆ. ಈ ಮಂಡಳಿಗೆ ಸಾಕಷ್ಟು ಹಣ ನೇರವಾಗಿ ಸರ್ಕಾರ ಕೊಡುತ್ತಿಲ್ಲ. ದೇಶದಲ್ಲಿ ಇಂದು ವಿದ್ಯುಚ್ಛಕ್ತಿ ಹೇರಳವಾಗಿ ಬೇಕಾಗಿದೆ. ಸಹಸ್ರಾರು ಪಂಪ್‌ಸೆಟ್ಟುಗಳನ್ನು ಕೊಡಲಾಗಿದೆ. ಆದರೆ ವಿದ್ಯುಚ್ಛಕ್ತಿ ಒದಗಿಸುವ ವ್ಯವಸ್ಥೆ ಇಲ್ಲ. ಸಾವಿರಾರು ಪಂಪ್‌ಸೆಟ್ಟುಗಳು ಕರೆಂಟ್ ಇಲ್ಲದೇ ಇರುವುದರಿಂದ ಏನೂ ಪ್ರಯೋಜನವಾಗಿಲ್ಲ ಎಂದು ಸರ್ಕಾರದ ಗಮನಕ್ಕೆ ತರಲು ಅಪೇಕ್ಷೆ ಪಡುತ್ತೇನೆ.

ವಿದ್ಯುಚ್ಛಕ್ತಿ ಮಂಡಲಿಯಲ್ಲಿ ದಕ್ಷತೆ ಹೆಚ್ಚಬೇಕಾದರೆ ಆ ಬೋರ್ಡ್‌ನಲ್ಲಿ ಪ್ರವೀಣರು ಡೈರೆಕ್ಟ ರಾಗಿರಬೇಕು. ಯಾವುದೇ ವ್ಯವಹಾರದಲ್ಲಿ ತನ್ನ ಸ್ವಂತ ಆಸಕ್ತಿ ಇದ್ದ ವ್ಯಕ್ತಿ ಇದ್ದರೆ ಅದರ ಕೆಲಸ ಕಾರ್ಯಗಳು ಕುಂಠಿತವಾಗಬಹುದೋ ಏನೋ ಎಂಬ ಶಂಕೆಯನ್ನು ಈ ಬ್ಯಾಂಕಿನ ವ್ಯವಹಾರ ಒಂದರಿಂದಲೇ ಹೇಳಬಯಸುತ್ತೇನೆ. ಮುಖ್ಯ ಮಂತ್ರಿಗಳಿಗೆ ನಾನಾದರೂ ಹೇಳ ಬಯಸುವುದೇನೆಂದರೆ ಈ ದೇಶದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಜಾಸ್ತಿಯಾಗಬೇಕು, ಹಿಂದೆ ಭಾರತ ದೇಶದಲ್ಲಿ ಯಾವ ಪ್ರಖ್ಯಾತಿಯನ್ನು ಹೊಂದಿದ್ದೆವೋ ಅದನ್ನು ಇವತ್ತು ಕೂಡ ಹೊಂದಬೇಕು. ವಿದ್ಯುಚ್ಛಕ್ತಿ ಉತ್ಪಾದನೆ ಮಾಡತಕ್ಕ ದೊಡ್ಡ ದೊಡ್ಡ ಕಾಮಗಾರಿಗಳನ್ನು ಸ್ವಯಂ ಆಡಳಿತ ಹೊಂದಿರತಕ್ಕ ಎಲೆಕ್ಟ್ರಿಸಿಟಿ ಬೋರ್ಡಿಗೆ ಕೊಡಲು ಏನು ಆತಂಕವಿದೆ ಎಂಬುದನ್ನು ಅನೇಕ ಸಾರಿ ಈ ಸಭೆಯ ಮುಂದೆ ಇಟ್ಟಿದ್ದೇನೆ. ಅವರಿಗೆ ಈ ಜವಾಬ್ದಾರಿಯನ್ನು ಕೊಟ್ಟ ಮೇಲೆ ಅವರನ್ನು ಕೇಳಬಹುದು. ಅದನ್ನು ಬಿಟ್ಟು ನೀವೇ ನೇರವಾದ ಜವಾಬ್ದಾರಿಯನ್ನು ತೆಗೆದುಕೊಂಡು ಶರಾವತಿ ಪ್ರಾಜೆಕ್ಟನ್ನು ನಡೆಸುತ್ತಾ ಇದ್ದೀರಿ, ತಮ್ಮ ಮುಖೇನ ನಡೆಯುತ್ತಾ ಇರತಕ್ಕ ಶರಾವತಿ ಬಗ್ಗೆ ದೇಶದಲ್ಲಿ ಅನೇಕ ಊಹಾಪೋಹಗಳು ನಡೆಯುತ್ತಾ ಇವೆ, ಸುಮಾರು ಹತ್ತು ಲಕ್ಷ ಕಿಲೋವಾಟ್ ವಿದ್ಯುಚ್ಛಕ್ತಿ ಕೊಡತಕ್ಕ ಉದ್ಯಮ ಸಕಾಲದಲ್ಲಿ ನಮ್ಮ ಕೈಗೆ ಬರಲಿಲ್ಲ. 1962ಕ್ಕೆ ಬರಬೇಕೆಂದು ಸರ್ಕಾರದವರೇ ನೇರವಾಗಿ ಕಟ್ಟಬೇಕೆಂದು ಬೊಂಬಾಯಿ ಮುಂತಾದ ಕಡೆಗಳಿಂದ ಕಂಟ್ರ್ಯಾಕ್ಟರುಗಳನ್ನು ಕರೆಸಿ 1962ರ ಡಿಸೆಂಬರ್ 31ರ ಮಧ್ಯ ರಾತ್ರಿಯ ಹೊತ್ತಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ ಎಂದು ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರು ಆಶ್ವಾಸನೆ ಕೊಟ್ಟರು. 62 ಆಯಿತು 63 ಡಿಸೆಂಬರ್‌ನಲ್ಲೂ ಸಹ ಕಾಣತಕ್ಕ ಪರಿಸ್ಥಿತಿ ಇಲ್ಲದಂತಾಗಿದೆ. 64ಕ್ಕೆ ಕೊಡುತ್ತೇವೆ ಎಂದು ಹೇಳುತ್ತಾ ಇದ್ದೀರಿ, ನೋಡಬೇಕು. ಒಟ್ಟಿನಲ್ಲಿ ಹೇಳುವುದಾದರೆ ವಿದ್ಯುಚ್ಛಕ್ತಿ ಉತ್ಪಾದನೆ ಮಾಡತಕ್ಕ ಮಹತ್ ಕೇಂದ್ರವಾದ ಶರಾವತಿಯ ಬಗ್ಗೆ ದೇಶದಲ್ಲಿರತಕ್ಕ ಒಂದು ದೊಡ್ಡ ಅನುಮಾನವನ್ನು ತೊಡೆದುಹಾಕಲು ಮಾನ್ಯ ಮುಖ್ಯ ಮಂತ್ರಿಗಳು ಫೈಲುಗಳನ್ನು ತರಿಸಿ ನೋಡುತ್ತೇನೆ ಎಂದು ಹೇಳುತ್ತಾ ಇದ್ದಾರೆ, ಬೇರೆಯವರ ಅಧೀನದಲ್ಲಿ ಇದು ಇದ್ದಿದ್ದ ಪಕ್ಷದಲ್ಲಿ ಆ ರೀತಿ ಹೇಳಬಹುದಾಗಿತ್ತು. ಆದರೆ ಅವರೇ ನೇರವಾಗಿ ಇದರ ಜವಾಬ್ದಾರಿಯನ್ನು ತೆಗೆದುಕೊಂಡಿರುವಾಗ ಫೈಲನ್ನು ತರಿಸಿ ನೋಡುತ್ತೇನೆ ಎಂದು ಹೇಳುವುದರ ಅರ್ಥವಾಗುವುದಿಲ್ಲ, ಆದ್ದರಿಂದ ಈ ದೋಷದಿಂದ ಅವರು ನಿವೃತ್ತರಾಗಬೇಕಾಗುತ್ತದೆ. ಶರಾವತಿಯ ಬಗ್ಗೆ ಅವರು ನ್ಯಾಯವಾದ ತನಿಖೆ ತಕ್ಷಣ ಮಾಡಿದರೆ ನೆಮ್ಮದಿ ಉಂಟಾದೀತು, ಇಲ್ಲದೇ ಇದ್ದ ಪಕ್ಷದಲ್ಲಿ ಈಗ ಏನೊಂದು ಅನುಮಾನವಿದೆ ಅದು ಬೆಳೆಯಲಿಕ್ಕೆ ಅವಕಾಶವಾಗುತ್ತದೆ ಎಂದು ಅನೇಕ ಸಾರಿ ಹೇಳಿದ್ದೇನೆ, ಇವತ್ತೂ ಕೂಡ ಅದನ್ನೇ ಹೇಳುತ್ತೇನೆ, ಬಹಳ ಚುರುಕಿನಿಂದ ಕೆಲಸ ಮಾಡಿ ಈ ಶಾಸನ ಸಭೆಯ ಅಧಿವೇಶನ ಮುಗಿಯುವುದರೊಳಗೆ ಇದನ್ನು ತೀರ್ಮಾನ ಮಾಡಿದರೆ ಖಂಡಿತ ನೆಮ್ಮದಿ ಉಂಟುಮಾಡುತ್ತದೆ.

ವಿದ್ಯುಚ್ಛಕ್ತಿ ಬೋರ್ಡಿನವರು ಅವರಿಗಿರತಕ್ಕ ರೂಲ್ಸ್ ಮತ್ತು ರೆಗ್ಯುಲೇಷನ್‌ಗಳನ್ನು ಕಟ್ಟುನಿಟ್ಟಾಗಿ ಪರಿಪಾಲಿಸಬೇಕಾಗಿದೆ. ಇದು ಒಂದು ದೊಡ್ಡ ಇಲಾಖೆ ಗೆಜಿಟೆಡ್ ಆಫೀಸರುಗಳನ್ನು ಮತ್ತು ಪ್ರವೀಣರನ್ನು ನೇಮಕ ಮಾಡಿಕೊಂಡಿದ್ದಾರೆ. ಆದರೂ ಕೂಡ ಅನೇಕ ಜನ ನಮ್ಮ ದೇಶದವರು ಇಂಜಿನಿಯರುಗಳು ಹೊರ ದೇಶಗಳಿಗೆ ಹೋಗುತ್ತಾ ಇದ್ದಾರೆ, ಕಾರಣವೇನೆಂದರೆ ನಮ್ಮ ದೇಶದಲ್ಲಿ ಪದವೀಧರರಿಗೆ ಕೊಡುತ್ತಿರುವ ಸಂಬಳ ಸಾರಿಗೆ ಬಹಳ ಕಡಿಮೆ ಎಂದು ಹೇಳಿ ಅಪಾರವಾದ ಸಂಖ್ಯೆಯಲ್ಲಿ ಹೊರ ದೇಶಗಳಿಗೆ ಹೋಗುತ್ತಿರುವ ಆ ಜನರ ಸೇವೆಯನ್ನು ನಮ್ಮ ದೇಶಕ್ಕೆ ಉಳಿಸಿಕೊಳ್ಳಬೇಕಾಗಿದೆ. ಆದ್ದರಿಂದ ರೂಲ್ಸ್ ಮತ್ತು ರಿಕ್ರೂಟ್‌ಮೆಂಟ್ ವಿಷಯದಲ್ಲಿ ಪರಿಶೀಲನೆ ಮಾಡಿ ಹೊರ ದೇಶಗಳವರಿಗೆ ಸರಿಸಮಾನವಾದ ರೀತಿಯಲ್ಲಿ ಅವರಿಗೆ ಒಂದು ಸ್ಥಾನಮಾನವನ್ನು

ಕೊಡುವುದು ಬಹಳ ಮುಖ್ಯ ಎಂದು ನಾನು ಭಾವನೆ ಮಾಡಿದ್ದೇನೆ. ನಮ್ಮ ಮೈಸೂರು ದೇಶದ ಅನೇಕ ಜನ ಎಲೆಕ್ಟ್ರಿಕಲ್ ಇಂಜಿನಿಯರುಗಳು ಹೊರ ದೇಶಗಳಿಗೆ ಹೋಗಿ ಬಹಳ ಉತ್ತಮವಾದ ಕಾರ್ಯಗಳನ್ನು ಮಾಡಿದ್ದಾರೆ. ಆದ್ದರಿಂದ ತಕ್ಷಣ ಈ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳ ಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ಹೇಳುತ್ತೇನೆ.

ವಿದ್ಯುಚ್ಛಕ್ತಿ ಆಕ್ಟ್ ಪ್ರಕಾರ ವಿದ್ಯುಚ್ಛಕ್ತಿ ಮಂಡಲಿಗೆ ಅಪಾರವಾದ ಅಧಿಕಾರವನ್ನು ಕೊಡ ಲಾಗಿದೆ, ಅವರಿಗೆ ಸ್ವಯಂ ಆಡಳಿತ ಇರಲಿ, ಕೆಲಸವನ್ನು ಬಹಳ ನಿಷ್ಠೆಯಿಂದ ವ್ಯಾಪಾರೋದ್ಯಮ ದಂತೆ ನಡೆಸಲಿ ಎಂಬ ದೃಷ್ಟಿಯಿಂದ ಆ ರೀತಿ ಮಾಡಲಾಗಿದೆ. ಇವತ್ತು ಮೈಸೂರು ದೇಶದಲ್ಲಿ ವಿದ್ಯುಚ್ಛಕ್ತಿ ರಾಷ್ಟ್ರೀಕರಣವಾಗಿರತಕ್ಕ ಒಂದು ಉದ್ಯಮವಾಗಿದೆ ಆದರೂ ಕೂಡ ಉತ್ತರ ಕರ್ಣಾಟಕ ದಲ್ಲಿ ಬೆಳಗಾಂ, ಬಿಜಾಪುರ ಇಂಥಾ ಕಡೆಗಳಲ್ಲಿ ಸ್ವಂತವಾಗಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡತಕ್ಕ ಸಂಸ್ಥೆಗಳು ಇನ್ನೂ ಇವೆ ಅವರು ಉತ್ಪಾದನೆ ಮಾಡಿದ ವಿದ್ಯುಚ್ಛಕ್ತಿಯನ್ನು ಕೊಡುವಾಗ ದರ ಜಾಸ್ತಿಯಾಗುತ್ತದೆ. ಅದರಿಂದಾಗಿ ಜನರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಎಲೆಕ್ಟ್ರಿಸಿಟಿ ಬೋರ್ಡ್ ಮತ್ತು ಸರ್ಕಾರದವರು ಕೂಡಲೇ ಮನಸ್ಸು ಮಾಡಿ ಪ್ರೈವೇಟ್ ಕಂಪನಿಗಳನ್ನು ರಾಷ್ಟ್ರೀ ಕರಣ ಮಾಡಿ ದೇಶದಲ್ಲೆಲ್ಲಾ ಒಂದೇ ಸಮನಾದ ಕಾನೂನು ಮತ್ತು ಒಂದೇ ವಿಧವಾದ ತೆರಿಗೆ ಮತ್ತು ಒಂದೇ ವಿಧವಾದ ದರ ಇರುವಂತೆ ಮಾಡಿದರೆ ಜನಗಳಿಗೆ ಬಹಳ ಅನುಕೂಲವಾಗುತ್ತದೆ ಎಂದು ನಾನು ಈ ದಿವಸ ಸಲಹೆ ಮಾಡುತ್ತಾ ಇದ್ದೇನೆ. ರೇಟ್ ರಿವೈಸ್ ಮಾಡಿದ್ದೀರಿ ಇದರಿಂದ ಜಾಸ್ತಿ ಆದಾಯ ಬರುತ್ತದೆ ಎಂದು ಹೇಳಿದ್ದೀರಿ. ಈ ದಿವಸ ವ್ಯವಸಾಯದ ಉತ್ಪನ್ನಕ್ಕೆ ವಿದ್ಯುಚ್ಛಕ್ತಿ ಬೇಕೆಂದು ಹೇಳುತ್ತಿರುವಾಗ ಅನ್ನ ಹೆಚ್ಚಾಗಬೇಕು, ಆ ಕೆಲಸಗಳಿಗೆ ಕೊಡತಕ್ಕ ದರವನ್ನು ಯಾವತ್ತೂ ಜಾಸ್ತಿ ಮಾಡಬೇಕು. ಸಣ್ಣ ಪುಟ್ಟ ಗೃಹ ಕೈಗಾರಿಕೆಗಳಿಗೆ 5 ಎಚ್. ಪಿ. ಕೊಡುತ್ತಾ ಇದ್ದೀರಿ, ಅದಕ್ಕೂ ಕೂಡ ಹೆಚ್ಚು ದರ ಹಾಕಬೇಡಿ, ಹಾಕುವಾಗಲೂ ಕೂಡ ಒಂದು ಸ್ಲ್ಯಾಬ್‌ರೇಟ್‌ನಂತೆ ಹಾಕಿ.

ಶ್ರೀ ಎಸ್. ನಿಜಲಿಂಗಪ್ಪ.—ಈಗ ಮಾಡುತ್ತಿರುವುದೂ ಕೂಡ ಅದೇ.

ಶ್ರೀ ಎಸ್. ಶಿವಪ್ಪ.—ಹಾಗಾದರೆ ಸರಿ ? ವ್ಯವಸಾಯಕ್ಕೆ ಬೇಕಾದ ಪಂಪುಸೆಟ್ಟುಗಳಿಗೆ ಕಡಿಮೆ ರೇಟ್ ಹಾಕುವುದರಿಂದ ಬಹಳ ಅನುಕೂಲವಾಗುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ. ಇವತ್ತು ವಿದ್ಯುಚ್ಛಕ್ತಿಯ ವಿಷಯದಲ್ಲಿ ಆಧುನಿಕ ರೀತಿಯಲ್ಲಿ ಮುಂದುವರಿಯಬೇಕಾಗಿದೆ. ಪ್ರಪಂಚ ದಲ್ಲಿ ಎಲ್ಲಾ ಕಡೆಯಲ್ಲೂ ವಿದ್ಯುಚ್ಛಕ್ತಿಯ ಆದುನಿಕ ಯುಗವೇ ಪ್ರಾರಂಭವಾಗಿದೆ. ನಾವು ಕೂಡ ಯಥೇಚ್ಛವಾಗಿ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡಿಕೊಳ್ಳಬೇಕೆಂದು ಹೇಳತಕ್ಕ ಕಾಲದಲ್ಲಿದ್ದೇವೆ. ಮೈಸೂರು ದೇಶಕ್ಕೆ ಶಿವನ ಸಮುದ್ರದಿಂದ ಒಂದು ಲಕ್ಷ 90 ಸಾವಿರ ಕಿಲೋ ವಾಟ್ ವಿದ್ಯುಚ್ಛಕ್ತಿ ಒದಗುತ್ತಾ ಇದೆ. ಇನ್ನೂ 2-3 ಲಕ್ಷ ಕಿಲೋ ವಾಟ್ ಬೇಕೆಂದು ಜನ ತಮ್ಮ ಬೇಡಿಕೆಯನ್ನು ತಮ್ಮ ಮುಂದೆ ಇಡುತ್ತಾ ಇದ್ದಾರೆ.

ಶ್ರೀ ಎಸ್. ನಿಜಲಿಂಗಪ್ಪ.—ಪ್ರಸ್ತುತ ಡಿಮ್ಯಾಂಡ್ 7-8 ಲಕ್ಷ ಕಿಲೋವಾಟ್ ಇದೆ.

ಶ್ರೀ ಎಸ್. ಶಿವಪ್ಪ.—ಹೀಗಿರುವಾಗ ತಾವು ಹೇಳಿರುವ ರೀತಿಯಲ್ಲಾದರೂ 1964ರ ಹೊತ್ತಿ ಗಾದರೂ ಇಷ್ಟು ದಿವಸವೂ ಉಗ್ರ ಟೀಕೆಗೆ ಗುರಿಯಾಗಿರುವ ಶರಾವತಿ ಯೋಜನೆಯನ್ನು ಪೂರೈಸಿ ಈ ದೇಶಕ್ಕೆ ವಿದ್ಯುಚ್ಛಕ್ತಿಯನ್ನೊದಗಿಸಿ ಕೈಗಾರಿಕಾ ಉತ್ಪಾದನೆಯಲ್ಲಿ ಭಾರತ ದೇಶಕ್ಕೇ ಹೆಸರಾ ದಂಥ ಒಂದು ಜಾಗವನ್ನು ನಮ್ಮ ಮೈಸೂರು ಆಕ್ರಮಿಸಿಕೊಳ್ಳತಕ್ಕ ಕಾರ್ಯವನ್ನು ಮಾಡಲು ಉದ್ಯುಕ್ತರಾಗಿರಿ. ಏನೇ ಕಷ್ಟ ಬರಲಿ ಮೈಸೂರು ದೇಶ ಹಿಂದೆ ಬಿದ್ದಿರತಕ್ಕ ಕೀರ್ತಿಹೋಗಲಿ, ಎಲ್ಲಾ ವಿಧದಲ್ಲಿಯೂ ಒಳ್ಳೆಯ ರೀತಿಯಲ್ಲಿ ಕೆಲಸ ಕಾರ್ಯಗಳು ಜರುಗುವಂತಾಗಲು ಒಂದು ಅವಕಾಶವನ್ನು ಕಲ್ಪಿಸಿಕೊಳ್ಳಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

2-30 P.M.

† **Sri R. K. PRASAD** (Anekal).—Mr. Speaker, while welcoming the various proposals under the Development programme that have been indicated in the Budget, I would like to confine myself to a few comments on the public loans that have been raised by the Electricity Board and the various investments that have been made by the Electricity Board.

Sir, I am one of those who by looking at the financial figures that are available with me, finds that there is no justification whatsoever for the Electricity Board to raise this public loan to the tune of nearly 9 crores at various rates of interest–$4\frac{1}{2}$ per cent to $3\frac{3}{4}$ per cent. From the

(SRI R. K. PRASAD)

figures that are available with me, I find there is a balance of nearly four crores invested by the Electricity Board and it is not being utilised. I can tell that the short-term and call deposits ranging from 3-to $4\frac{1}{4}$ per cent deposits there is nearly 315 lakhs with four or five banks. Four per cent investment is to the tune of Rs. 44 is 50 lakhs, long term $4\frac{1}{4}$ per cent investment amounts to 50 lakhs. The total investment made by the Electricity Board to the tune of 4 crores 95 lakhs. When such a heavy amount is being invested by the Electricity Board, I do not see any justification for the Board to raise these various loans.

Another point that I would like to mention at this stage is I find to my surprise that the entire loan has been subscribed to by only one or two banks; and it so happens that the people who have contributed to these loans happen to be very important people in this Board. For the latest loan that has been raised by the the Electricity Board, I find that nearly $1\frac{1}{2}$ crores out of 3 is contributed by one single Bank. I find from the various figures that are at my disposal, in one bank the Electricity Board has invested 132 lakhs at the rate of 3 per cent and 3 7/8 per cent. I do not see the justification for the Electricity Board to invest nearly one crore in three days call notice, that is at the rate of 3 per cent.

In this connection, I would like to point out that my information is in some of these Banks from 1961 onwards, accounts have not been operated at all and amounts have been invested heavily in these Banks at a very low rate of interest. It gives raise to lot of suspicion because it so happens that amounts that have been invested in these Banks is very heavy and they are important people in the Electricity Board. So I think there is a lot of room for suspicion and I very sincerely hope that our Chief Minister will kindly possibly look into this matter and do whatever is necessary.

There is another point which is very glaring. In one bank they have invested 12 lakhs at $4\frac{1}{4}$ per cent on 8th February 1963 which matures on 1st July 1963. In another Bank they have invested 76 lakhs at $3\frac{7}{8}$ per cent in between these dates. It so happens that the amounts have been invested in both banks on the same date but the rate of interest varies from one bank to the other Bank. I feel that an explanation must be given on this matter also. There is room for the Electricity Board to say that there is heavy investment of cash and they must have ready money because there are pending orders that may come at any time. I do not see any reason—I have got statement of stores purchased as on 16th September 1963. I find that stores that have been purchased in 1961-62 is to the tune of Rs. 362 lakhs; in 1962-63 it amounts to 402 lakhs and in 1963-64 up-to-date, 326 lakhs. I do not see what is the justification for investing such heavy amounts in these Banks. I do hope that the Government will look into these matters.

Another point that I have not been able to understand by looking into these figures Sir, is, the Electricity Board has invested some money in Government loans that we have raised. Here in the latest loan that

the Electricity Board has raised, I find that the Government of Mysore has contributed some money for this loan. I do not know whether the interest varies between the investment made by the Government of Mysore with the Electricity Board. The Electricity Board has invested in the Government of Mysore Development loan. This leads to a lot of confusion and a bit of suspicion too. I do hope that the Government will look into it in all its aspects and made necessary enquiries.

I also understand Sir, that on total, the Electricity Board has raised six crores of loan amount and there is six crores of money with them both in the current account as well as fixed deposits. I do not know why the Electricity Board should raise a loan at all and why it should keep in F. D. money at various rates of interest which is definitely less than the rates of interest which the Electricity Board has to pay ultimately.

Also Sir, I heard that the Electricity Board—of course the Electricity Department has got absolute necessity and it is essential for them to keep amounts in order to meet various development expenditure in respect of works that are done in the Electricity Board. But the Electricity Board which consists of varied interests, are not sanctioning all plans that the technical people are asking, because they do not want that the money that has been invested by these banks in the Development loan should be utilised by the Electricity Department and they might incur certain amount of loss.

Sir, these figures may be disputed. But these accounts are being operated regularly—3 days call notice deposits. They have got 1 crore in various banks. Here is a financial statement that has been issued by the Electricity Department for the period ending 29th June 1963. The balance is 409.50 lakhs. For the month of July it is the same figures. Again for August, the balance is the same Rs. 409.50. For September also the figure remains the same. So, it clearly indicates that three days call notice deposits have been kept only in some Banks for the benefit of the Bankers and not for the benefit of Electricity Board. As I submitted in the initial stages, there is nothing personal about it. I do not refer to any individual. But facts are there and I do hope that the Leader of the House will kindly look into these matters and rectify if there is any mistake.

Thank you very much.

[MR. DEPUTY SPEAKER in the Chair]

Sri B. R. SUNTHANKAR (Belgaum City).—The Mysore State Electricity Board has completed six years. Six years ago this very day the State Electricity Board was instituted. If we take a review of the working of the Board for the last six years, we regret very much to say that the working of the Board is far from satisfactory. There are many defects, lapses and failures in the working of the Board. We are discussing the budgets for the last four years. We do not know why we are discussing the budgets of 1960-61 onwards in the year 1963. As a matter of fact, according to the Electricity Act, accounts of each and every yer

(SRI B. R. SUNTHANKAR)

must be placed before this House and this House should discuss the accounts of the Electricity Board. But even though six years have passed, the accounts of not even a single year have been placed before this House. And from the Audit Report of 1963 we come to know that even the accounts of the first year 1st October 1956 to 31st March 1957—are not prepared and they are not certified by the audit. That means the accounts from the very institution of the Board are not ready. That is a very sad picture of the working of the Board. This Board is also following in the footsteps of the Khadi and Village Industries Board. This is a grave lapse and should be very seriously taken note of by this House and by the Government also. On account of this lapse, neither the Board nor the Government are in a position to know the exact financial position of the Board. The Honourable Member who spoke before me brought to the notice of this House Some important features regarding loans. Government has been advancing loans to the Electricity Board and similarly the Board has been raising loans from the public. If we look to the figures, the Government has advanced loans between 1959 and 1961 to the tune of Rs 283.5 lakhs at the rate of 5 per cent. This loan was given in instalments—Rs. 120 lakhs on 23-3-1 59, Rs. 28.50 lakhs on 30-3-1960 and Rs. 65 lakhs on 2?-3-1961 and all these at the rate of 5 per cent. Similarly, the Electricity Board has raised public loans. First series of Rs. 111 lakhs due in 1971—that was raised on 26-1-1961 at the rate of 4½ per cent. Second time the Board raised public loan to the extent of Rs. 202.96 lakhs on 5-12-1961 at the rate of 4½ per cent. These loans are guaranteed by Government and a fee to Government guarantee at the rate of ¼ per cent of the amount of loan outstanding at the end of each financial year is to be given to Government as a guarantee on these loans. As the accounts were not properly kept, neither the Electricity Board nor the Government were in a position to know the exact financial position of the Board. That is why it was found that very often there were heavy accumulations of cash balance with the Board during the year 1960-61 and in spite of that, though there were heavy balances accumulating with the Board, Government were advancing loans and the Board was also raising public loans. As my Honourble friend who spoke before me pointed out, the Board was forced to invest amounts--heavy balances—. with some other agencies. In all, the Board has invested Rs. 293.5 lakhs. Of this, they have invested Rs. 41.5 lakhs at 4 per cent with the Mysore State Development Loans, 1969; that was in the month of August 1960. Again they have invested an amount of Rs. 50 lakhs with the Mysore Goverment Development Loan, 1972 in September 1961. Similarly, the Board invested Rs. 199 lakhs with private Banks at the rate of interest ranging from 3¾ per cent to 4 per cent, immediately after the receipt of Rs. 2 2.96 lakhs against the public loan referred to above. It is clear that when the Board was not really in need of raising public loan or in need of any capital, they were raising public loan quite unnecessarily. Another fact is, as the cash balances were piling up heavily, they had to

invest in some other agencies at the lower rate of interest. When they were paying 5 per cent to Government, when they were paying 4½ per cent to the public, the Board was investing the same amount at a lower rate, at 4 per cent, at 3¾ per cent. That is why there was a loss; as has been pointed out by the audit report, the Board would be losing an amount of Rs. 82,000 per annum on account of the investment in the Mysore State Development Loan. Similarly, the Board is losing lakhs of rupees for the amount invested in the private Banks. What is this state of affairs? This is just like the famous Maharashtrians Saint Tukaram's trade. Saint Tukaram was a trader by profession; he used to bring all articles and commodities and keep them in his shop, but he never asked for money from the customers; anybody could come and take away whatever he wanted. What was the result? In a few days' time, he went bankrupt. He was a saint. But the Electricity Board is not a Saint.

Sri J. H. SHAMSUDDIN (Deputy Minister for Electricity).—Has the Hon'ble Member read the estimates for 1962-63? He will find from it that the Board made a net profit of Rs. 30 lakhs.

Sri B. R. SUNTHANKAR.—The Board making profit is no justification for investing heavy balances at a lower rate of interest.

Sri J. H. SHAMSUDDIN.—I did not say it by way of investment; but the Hon'ble Member was saying that the Board was going bankrupt.

Sri B. R. SUNTHANKAR.—Sir, I was saying that Santh Tukaram went bankrupt. He was a saint and he could afford to do that; but the Board cannot do it. Sir, unfortunately, we had no occasion to discuss the accounts of the Electricity Board. If the accounts were placed before the House, it would have given an opportunity to the House to discuss the accounts of the Board. Sir, it seems, there is no proper check or supervision in the working and the administration of the Electricity Board. The Audit Repoprt throws a flood of light on the various irregularities and lapses that had occurred in the working of the Board. There are cases of theft, cases of misappropriation by forgery; there is no proper system of stock varification. In four Divisions no stock verification was conducted for 5 years. There are cases of shortage of materials like petrol. Again, there has been delays in the recovery of dues, delay in the realisation of the revenue. On 30th November 1962 a sum of 13 lakhs was outstanding on account of supply of power. As a result of inadequate safeguards such as appointment of watchman, etc., a case of loss of cash of Rs. 2,880 by theft occurred in the Construction Division, Bangalore, in November 1960 and the case was later on declared as undectable by the police. There is a case of forgery of Draft and misappropriating a sum of Rs. 1,880 and this could not be detected in time. Sir, "during the annual counting of stores for the period ending 31st March, 1960, shortages of value of Rs. 6.08 lakhs were noticed, but no action was taken either to fix personal responsibility or to effect recoveries where personal responsibility had already been fixed (October 1962)." Sir, it is pointed out in the Audit Report that "due to want of reconciliation between the book balances and the 'dip

(SRI B. R. SUNTHANKAR)

readings in respect of petrol, a shortage of 3,143 gallons was noticed as on 10th November 1960 and report of action taken to fix personal responsibility is awaited." All these are going on and there is no proper check and supervision on the administration of the Board.

Coming to the Budget, I would like to point out that the Board has failed to carry out the Third Five-Year Plan schemes. For the power development during the Third Plan the budget amount was 315 lakhs and only 217 lakhs has been spent. That means there is a short-fall of 98 lakhs of rupees. That clearly shows that the Board has throughly failed to keep to the schedule of the Plan. Then, Sir, the term of five circle offices at Bangalore, Mysore, Shimoga, Hubli and Gulbarga expired in March 1963 and the matter of continuing them is under consideration. We do not know whether they are still continued or still under consideration. In fact, these circles should continue.

Regarding the responsibility of the Board to safeguard the interests of the consumers, the Board has signally failed to safeguard the interests and rights of the consumers particularly, in Bombay Karnatak area. Sir, there are about fourteen private concerns in Bombay-Karnatak area who supply electricity. In the Old Mysore it was the sole concern of the Government. We find that the Board cannot realise the difficulties undergone by the consumers of the other areas. They cannot understand the hardships and difficulties of those people. The Board does not know how the Companies are looting the consumers of our area. About the Belgaum Electricity Supply Company, we have brought this to the notice of the Government, to the Chief Minister and the Deputy Minister in charge of Electricity. I am glad that the Hon'ble Chief Minister is convinced that the company is mis-behaving.

Sri S. NIJALINGAPPA.—Don't you think that it is *sub judice* ?

Sri B. R. SUNTHANKAR.—I am not referring to that portion of the matter. Sir, the consumers have been again and again representing to the Government that the company is recovering illegal charges, irregular charges. Neither the Government nor the Electricity Board came to the rescue of the consumers and therefore they had to go to the Courts, even to the Supreme Court.

Mr. DEPUTY SPEAKER.—If it is *sub judice*, why discuss it ?

Sri B. R. SUNTHANKAR.—I am not dealing with the *sub judice* matter. When the matter is pending before the Supreme Court about the rates of the Belgaum Electricity Company, there is again increase of rates.

I want to know from the Government the action it has taken. According to the law, they have given notice of 60 days of further increase in rates. They are increasing the rates again. The 60 days are over by the 31st July and yet the Government has taken no action. If the decision of the Supreme Court is in favour of the company, it means there will be again increase in the rates of electricity in Belgaum.

3-00 P.M.

The demand of the consumers of Belgaum is that Government should appoint a rating committee. There is aprovision in the Electricity supply Act, 1948 for appointing a rating committee. I do not krow what prevents the Government in appointing such a committee. The dispute is long-standing, over a number of years. If the judgment of the Supreme Court is in favour of the consumers, the company will have to refund to the consumers a huge amount, to the extent of 2 crores of rupees. That is why I say that the company is looting the consumers for several years. It is not the consumers alone that suffer, the Mysore Government is also a consumer of the company. For the Belgaum Central Jail, the company was charging illegally at rates more than what they charged private parties. The Government never took notice of it but there was an objection by the A. G. It is nearly 4 or 5 years ago that the A. G. brought this fact to the notice of Government but no action has been taken. On account of the lethargy on the part of Government, some of the bills were time-barred. The Government cannot ask for refund also now. Even now we are told that the matter is under the consideration of the Government. The Government itself, conniving at these things, has to pay more.

Our immediate demand, as I said. is that the Government should appoint a rating committee envisaged under Section 57 (a) of the Electricity Supply Act.

The Leader of the Opposition said that the time has come when the Government should nationalise all the private concerns in the State. All the 14 concerns in the Bombay Karnatk area should be taken over by Government. During the last few years, Government have nationalised 2 or 3 small concerns but the big concerns like the Belgaum Electricity Company, which has more than a dozen power houses in India, is left out. That is because they have pulls and influence with the Governments, including the Central Government. That is coming in our way unfortunately.

SRI J. H. SHAMSUDDIN.—I object to this remark. I do not know if the Company has any pull at the Centre but so far as this Government is concerned, it is not subject to any pull from any side.

SRI B. R. SUNTHANKAR.—I said they have pull with the Central Government. At Delhi the company has pulls.

Then, Sir, about the electric inspectors. When the Deputy Minister had come to Belgaum we had acquainted him with the fact that the Electrical Inspectors are not looking to the interests of the consumers at all. The Electrical Inspector for the Belgaum division has never cared to enquire into the grievances of the consumers. All the officers belonging to the Electricity Department or the Board come to Belgaum and they are the guests of the Electricity Company. They are very well treated by the company.

MR. DEPUTY SPEAKER.—We are here dealing with the Electricity Board and not with the Electricity Department.

Sri J. H. SHAMSUDDIN.—The Electrical Inspectors are not the servants of the Board. They are officers of Government.

Sri B. R. SUNTHANKAR.—Any way the fact remains that they are given very good 'Sarbarai' by the company and they come to Bangalore with very good and sympathetic heart towards the company.

A few months back a death occured at Belgaum due to an electric accident, due to leakage of electricity through the poles. There were heavy rains and at night water accumulated in a pond just below the pole. Electricity was leaking through the support wire fixed to the ground and water being a good conductor of electricty, the water was boiling. At that time unfortunately a person happened to go through the water and he died of shock. This matter was brought to the notice of the Deputy Minister and I do not know what action has been taken. The death was due to leakage of electricity in the pole. The Electric Company never cared about the installation. The installations was raised in 1933 or 1934. They never inspected the poles.

Sri J. H. SHAMSUDDIN.—Private licencees are not under the control of the Board. Now we are discussing the affairs of the Board. It is not fair to make allegations against the company unless an opportunity is given to Government to examine that point. The Company is not before the House.

Sri B. R. SUNTHANKAR.—I brought the fact to show how the company is misbehaving.

Mr. DEPUTY SPEAKER.—We are discussing the affairs of the Board and not the Electricity Department as such.

Sri B. R. SUNTHANKAR.—I took the opportunity to bring this matter about the company to the notice of the House.

My last point is about the Consultative Committee. I think it is a statutory body.

Sir, we are told that a representative of the consumers is taken on this body. We do not know in what capacity he was appoind as the representative of the consumers. There are some consumers' Associations in the State. They were never consulted. They should have been consulted and as a matter of fact a representative of such association should be taken on that consultative committee, perticularly at Belgaum, there is a very well organised Consumers' Association. It has been fighting for the cause of consumers.

Sri M. C. BASAPPA (Chamarajanager).—That Belgaum Association has nothing to do with the Mysore State Electricity Board.

Sri B. R. SUNTHANKAR.—How ? There should be one representative of the consumers on the Committee according to the Act. That is why we say that a representative, who can be called a real representative of the consumers should be taken and such associations should be consulted before appointing a representative.

With these two remarks and with the hope that the working of the Electricity Board would improve in the near future and we will get an opportunity to discuss the accounts of the Electricity Board, I conclude.

ಶ್ರೀ ಎಂ. ಸಿ. ಬಸಪ್ಪ.—ಮಾನ್ಯ ಅಧ್ಯಕ್ಷರೇ, ಈ ದಿನ ಸಭೆಯ ಮುಂದೆ 1960-61, 1961-62 1962-63 ಮತ್ತು 1963-64ನೇ ಸಾಲಿನ ವಿದ್ಯುಚ್ಛಕ್ತಿ ಮಂಡಲಿಯ ಆಯವ್ಯಯಗಳನ್ನು ಪರಿಶೀಲನೆಗಾಗಿ ಇಡಲಾಗಿದೆ. ಈ ಅಂದಾಜುಗಳ ಪರಿಶೀಲನೆಯ ವಿಚಾರ ಮಾಡುತ್ತಾ ಈ ಸಭೆಯ ವಿರೋಧ ಪಕ್ಷದನಾಯಕರು ಒಂದು ಮೂಲಭೂತವಾದ ಪ್ರಶ್ನೆಯನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಸರ್ಕಾರದವರು ವಿದ್ಯುಚ್ಛಕ್ತಿ ಮಂಡಲಿಗೆ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡತಕ್ಕದ್ದು ಹಾಗೂ ಅದನ್ನು ವಿತರಣೆ ಮಾಡತಕ್ಕ ಸಂಪೂರ್ಣ ವ್ಯವಹಾರವನ್ನು ವಹಿಸಿಲ್ಲ. ಅದು ಸರಿಯಾದ ನೀತಿಯಲ್ಲ ಎಂದು ಈ ಸಭೆಗೆ ತಿಳಿಸಿದರೂ ಬಹುಶಃ ನಾನು ಈ ಬಡ್ಜೆಟ್ಟನ್ನು ನೋಡಿ ಅರ್ಥ ಮಾಡಿಕೊಂಡಿರುವ ಮಟ್ಟಿಗೆ ಈ ಹೈಡಲ್ ಪ್ರಾಜೆಕ್ಟುಗಳ ವಿದ್ಯುಚ್ಛಕ್ತಿಯ ಉತ್ಪನ್ನವನ್ನು ಬಿಟ್ಟು ಉಳಿದ ಜನರೇಟರ್ ಸೆಟ್ಟು ಮತ್ತು ಗ್ಯಾಸ್‌ಪ್ಲಾಂಟ್ ವಿದ್ಯುಚ್ಛಕ್ತಿಯನ್ನು ತಯಾರು ಮಾಡುವುದು ಮತ್ತು ಹಂಚಿಕೆ ಮಾಡತಕ್ಕ ವ್ಯವಹಾರಗಳನ್ನು ಈ ವಿದ್ಯುಚ್ಛಕ್ತಿ ಮಂಡಲಿಗೆ ಬಿಟ್ಟಿದ್ದಾರೆ. ಹೈಡಲ್ ಪ್ರಾಜೆಕ್ಟನ್ನು ಈ ಮಂಡಲಿಯವರ ವ್ಯಾಪ್ತಿಗೆ ಬಿಡತಕ್ಕದ್ದು ಎಷ್ಟರಮಟ್ಟಿಗೆ ಸೂಕ್ತ ಎಂಬುದನ್ನು ಬಹುಶಃ ಪರಿಶೀಲನೆ ಮಾಡುವುದು ಅಗತ್ಯ ಎಂದು ಕಾಣುತ್ತದೆ. 100-150-200 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ವಿದ್ಯುಚ್ಛಕ್ತಿಯನ್ನು ತಯಾರು ಮಾಡತಕ್ಕ ಯೋಜನೆಗಳನ್ನು ಬಹುಶಃ ಈ ಬೋರ್ಡಿನ ಆಡಳಿತಕ್ಕೆ ಕೊಟ್ಟ ಪಕ್ಷದಲ್ಲಿ ಅದಕ್ಕಿರತಕ್ಕ ಹಣಕಾಸಿನ ಪರಿಸ್ಥಿತಿಯಲ್ಲಿ ಅಥವಾ ರಿಸೋರ್ಸ್‌ಸ್ ಎಂದು ಏನು ಹೇಳುತ್ತೇವೆ, ಆ ಒಂದು ಪರಿಸ್ಥಿತಿಯಲ್ಲಿ 100 ಅಥವಾ 200 ಕೋಟಿ ರೂಪಾಯಿಗಳ ವಿದ್ಯುತ್ ಯೋಜನೆಗಳನ್ನು ವಿದ್ಯುತ್ ಮಂಡಲಿಯವರು ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬ ಪ್ರಶ್ನೆ ಬರುತ್ತದೆ. ಅದನ್ನು ಹೋಲಿಸುವುದಾದರೆ ಈಗ ವಿದ್ಯುತ್ ಮಂಡಲಿ ವಿದ್ಯುತ್ ಸರಬರಾಯಿ ಮಾಡತಕ್ಕ ವ್ಯವಸ್ಥೆಯನ್ನು ಮಾತ್ರ ವಹಿಸಿರುವುದು ವಾಸ್ತವವಾಗಿಯೂ ಕೂಡ ಸರಿಯಾದ ಅಂಶ ಎಂದು ಕಾಣುತ್ತದೆ. ಎರಡನೆಯದಾಗಿ ಹಿಂದೆ ಮಾತನಾಡಿದ ಅನೇಕ ಸದಸ್ಯರು ವಿದ್ಯುಚ್ಛಕ್ತಿ ಮಂಡಲಿಯವರು ಸರ್ಕಾರದಿಂದ ಹಾಗೂ ಸಾರ್ವಜನಿಕರಿಂದ ಸಾಲಗಳನ್ನು ಎತ್ತಿರತಕ್ಕದ್ದು ಆ ಬೋರ್ಡಿನ ಒಂದು ಹಣವನ್ನು ನಾನಾ ಬ್ಯಾಂಕುಗಳಲ್ಲಿ, ಸಂಸ್ಥೆಗಳಲ್ಲಿ ಮತ್ತು ಸರ್ಕಾರಿ ಸಾಲದ ರೂಪದಲ್ಲಿ ಇಟ್ಟಿರುವುದನ್ನು ಈಗಾಗಲೇ ಅವರು ಪ್ರಸ್ತಾಪಿಸಿದ್ದಾರೆ. ಬಹುಶಃ ಕೆಲವು ಅಂಶಗಳು ನಿಜವಾಗಿಯೂ ಕೂಡ ಸರ್ಕಾರದಿಂದ ಅಥವಾ ಬೋರ್ಡಿನಿಂದ ಒಂದು ಸಾಜಾಯಿಷಿಗೆ ಸರಿಯಾಗಿದೆ ಎಂದು ಹೇಳುತ್ತೇನೆ. ಆದರೆ ಮತ್ತೊಂದು ಅಂಶವನ್ನು ಪರಿಗಣಿಸುವುದಾದರೆ ಸಾಮಾನ್ಯವಾಗಿ ಒಂದು 100 ಅಥವಾ 150 ಕೋಟಿರೂಪಾಯಿಗಳನ್ನು ಒಳಗೊಂಡಿರತಕ್ಕ ವಿದ್ಯುತ್ ಯೋಜನೆಗಳನ್ನು ಅಷ್ಟು ಅಪಾರವಾದ ಹಣವನ್ನು ಖರ್ಚುಮಾಡತಕ್ಕ ಕೆಲಸವನ್ನು ಮಾಡಿ ವಿದ್ಯುತ್‌ನ್ನು ಉತ್ಪಾದನೆ ಮಾಡಿದ ಮೇಲೆ ಬಹುಶಃ ಸರಬರಾಯಿ ಮಾಡತಕ್ಕ ವ್ಯವಸ್ಥೆಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಈ ಬೋರ್ಡಿನವರು ಅಥವಾ ಮಂಡಲಿಯವರು ವಿನಿಯೋಗಿಸಬೇಕಾದ ಸಂದರ್ಭಗಳು ಬರುತ್ತವೆ. ಅದರಲ್ಲೂ ಹೆಚ್ಚು ವಿದ್ಯುತ್ ಸರಬರಾಯಿ ಮಾಡತಕ್ಕದ್ದರಲ್ಲಿ ನಮಗೆ ಅಗತ್ಯವಾಗಿ ಬೇಕಾಗತಕ್ಕ ಇನ್‌ಸ್ಯೂಲೇಟರ್‌ಸ್ ಮತ್ತು ಪರದೇಶದಿಂದ ತರಿಸತಕ್ಕ ಅನೇಕ ಸಾಮಾನುಗಳು ಹೆಚ್ಚಾಗಿವೆ. ಅಂತಹ ಸಂದರ್ಭದಲ್ಲಿ ಕೋಟಿಗಟ್ಟಲೆ ರೂಪಾಯಿಗಳನ್ನು ಇಟ್ಟುಕೊಳ್ಳದೇ ಹೋದ ಪಕ್ಷದಲ್ಲಿ ಏನೊಂದು ವಿದ್ಯುತ್ ಸರಬರಾಯಿ ವ್ಯವಸ್ಥೆ ಇದೆ ಇದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಬಹುಶಃ ಪರದೇಶದಿಂದ ತರಿಸಬೇಕಾದ ಸಾಮಾನುಗಳನ್ನು ಕಳುಹಿಸಿಕೊಡಿ ಎಂದು ಹೇಳಿ ಅವು ಬಂದ ವೇಳೆಯಲ್ಲಿ ಹಣ ಇಲ್ಲ, ಆದ್ದರಿಂದ ಸರ್ಕಾರದವರನ್ನು ಕೇಳಿದ್ದೇವೆ ಅಥವಾ ಸಾರ್ವಜನಿಕರಿಂದ ಸಾಲ ಎತ್ತುತ್ತೇವೆ ಎನ್ನುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಆ ರೀತಿ ಹಣ ಇಟ್ಟುಕೊಂಡು ವ್ಯವಸ್ಥೆ ಮಾಡದಿದ್ದ ಪಕ್ಷದಲ್ಲಿ 100, 150 ಕೋಟಿ ರೂಪಾಯಿಗಳ ಒಂದು ಪ್ರಾಜೆಕ್ಟಿನಿಂದ ತಯಾರಾಗತಕ್ಕ ವಿದ್ಯುತ್‌ಅನ್ನು ಬಹುಶಃ ಉಪಯೋಗಿಸುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡದಿದ್ದ ಪಕ್ಷದಲ್ಲಿ ಯಾವ ಒಂದು ವಿದ್ಯುತ್‌ನ್ನು ನಿರ್ಮಾಣ ಮಾಡುತ್ತೇವೆ ಅದೂ ಕೂಡ ವ್ಯರ್ಥವಾಗುತ್ತದೆ. ಎಷ್ಟು ವಿದ್ಯುತ್‌ನ್ನು ಉತ್ಪಾದನೆ ಮಾಡುತ್ತೇವೆ ಅದನ್ನೆಲ್ಲಾ ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕೆಂದರೆ ಅದಕ್ಕೆ ಸರಿಯಾದಂಥ ಡಿಸ್ಟ್ರಿಬ್ಯೂಷನ್ ವ್ಯವಸ್ಥೆಯನ್ನೂ ಕೂಡ ಮಾಡಿಕೊಂಡರೆ ಮಾತ್ರ ನಮ್ಮ ಈ ಒಂದು ಪ್ರಾಜೆಕ್ಟುಗಳು ಏನಿವೆ ಅವುಗಳಿಂದ ಸಾರ್ಥಕವಾಗುತ್ತದೆ. ಅವರು ಹೇಳಿದ ಹಾಗೆ ಈ ಪ್ರಾಜೆಕ್ಟಿನಿಂದ ಮುಂದಿನ ವರ್ಷದೊಳಗೆ ಎರಡು ಯೂನಿಟ್ಟುಗಳನ್ನಾದರೂ ಕೂಡ ಕಮಿಷನ್ ಮಾಡಿದ ಪಕ್ಷದಲ್ಲಿ ಸಮಾರು ಒಂದು ಲಕ್ಷ 94 ಸಾವಿರ ಕಿಲೋವಾಟ್ ತಯಾರಿಸಲು ಸಾಧ್ಯವಾಗುತ್ತದೆ. ಶಿವನಸಮುದ್ರದಲ್ಲಿ ಮತ್ತು ಶಿಂಷಾ ಎಲ್ಲಾ ಸೇರಿದರೆ ಒಂದು ಲಕ್ಷ 80 ಸಾವಿರ ಕಿಲೋವಾಟ್ ಮಾತ್ರ ವಾಗುತ್ತಿದೆ. ಆದ್ದರಿಂದ ಉತ್ಪಾದನೆಯಾದ ವಿದ್ಯುತ್‌ನ್ನು ಡಿಸ್ಟ್ರಿಬ್ಯೂಟ್ ಮಾಡುವುದಕ್ಕೆ ಬೇಕಾದ ಸಾಮಾನುಗಳನ್ನು ಒದಗಿಸಿ ಸುವ್ಯವಸ್ಥಿತವಾದ ರೀತಿಯಲ್ಲಿ ಬೋರ್ಡಿನವರು ಏರ್ಪಾಡುಮಾಡದಿದ್ದರೆ ಅನಾನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ ಹೆಚ್ಚಿಗೆ ಹಣವನ್ನು ಒಂದು ಬ್ಯಾಂಕಿನಲ್ಲಾಗಲೀ, ಸರ್ಕಾರದಲ್ಲಾಗಲಿ ಅಥವಾ ತಾವೇ ಆಗಲಿ ಇಟ್ಟುಕೊಂಡರೆ ತಪ್ಪಾಗಲಾರದು ಎಂದು ನನಗೆ ಅನ್ನಿಸುತ್ತದೆ.

(ಶ್ರೀ ಎಂ. ಸಿ. ಬಸಪ್ಪ)

Page 5—Main features of Budget—(a) Intensification of power supply to 7,000 I.P. sets during 1963.64, (installing two units of package plant at Bangalore, and (c) Installing 12 Diesel Generator Sets in other areas. ಇದರಲ್ಲಿ ಬಹಳ ಮುಖ್ಯವಾದ ಒಂದು ಅಂಶ 7000 ಐ ಪಿ ಸೆಟ್ಟುಗಳಿಗೆ ವಿದ್ಯುತ್ ಸರಬರಾಯಿ ಮಾಡುತ್ತೇವೆ ಎಂಬುದು. ಈ ರೀತಿ ವಿದ್ಯುತ್ ಮಂಡಲಿಯವರು ಹೇಳಿರುವದು ನಿಜವಾಗಿಯೂ ಪ್ರಶಂಸನೀಯವಾದದ್ದು. ಇಲ್ಲಿತನಕ ಬೋರ್ಡು ಕಮರ್ಷಿಯಲೈಸ್ ಆಗಿಲ್ಲ. ಬಹುಶಃ ಹಿಂದಿನ ಸರ್ಕಾರದ ಆಡಳಿತದಲ್ಲಿದ್ದಾಗ ಯಾವ ಅದೇ ರೀತಿಯ ಮನೋಭಾವ ಇತ್ತೋ ಅದೇ ಮನೋಭಾವ ಇನ್ನೂ ಕೂಡ ಮುಂದುವರಿಯುತ್ತ ಇದೆ ಎಂದರೆ ತಪ್ಪಾಗಲಾರದು. ಸಾಮಾನ್ಯವಾಗಿ ವಿದ್ಯುತ್ ಬೇಕೆಂದು ಯಾರಾದರೂ ಅರ್ಜಿಕೊಟ್ಟರೆ ಡಿಪಾಸಿಟ್ ಮಾಡಬೇಕು ಮಾಡಿದ ಹೊರತು ಕೊಡುವುದಿಲ್ಲ ಎಂದು ಹೇಳುತ್ತಾರೆ, ಒಂದು ಪಕ್ಷ ನಾಲ್ಕು ಜನ ಡಿಪಾಸಿಟ್ ಮಾಡಿ 3 ಜನರು ಬರಲಿಲ್ಲ ಯಾರೋ ಒಬ್ಬರು ಬಂದು ಕೊಡಿ ಎಂದರೆ ಆಗುವುದಿಲ್ಲ. ಶೇಕಡ 75 ಭಾಗ ಕಂಪ್ಲೀಷನ್ ರಿಪೋರ್ಟ್ ಬರುವ ವರೆಗೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಅದೇ ಒಬ್ಬ ಬಿಸಿನೆಸ್‌ಮನ್ ತೆಗೆದು ಕೊಂಡರೆ ಮಾರ್ಕೆಟ್ ಎಲ್ಲಿದೆ, ಕಮಾಡಿಟಿ ಎಲ್ಲಿಂದ ತರಬೇಕು ಯಾವ ರೀತಿ ವಿದ್ಯುತ್‌ನ್ನು ಉತ್ಪಾದನೆ ಮಾಡಬೇಕು, ಹೇಗೆ ಲಾಭ ಸಂಪಾದನೆ ಮಾಡಬಹುದು ಎಂಬ ದೃಷ್ಟಿಯಿಂದ ಪರಿಶೀಲನೆ ಮಾಡುತ್ತಾನೆ. ಹಾಗೆ ಮಾಡಿದರೆ ಬಹುಶಃ ಬೋರ್ಡಿನವರೂ ಕೂಡ ಲೈನ್ ಹಾಕುವಾಗ ಯಾವ ಯಾವ ಏರಿಯಾದಲ್ಲಿ ಐ.ಪಿ. ಸೆಟ್ಟುಗಳು ಹೆಚ್ಚಾಗಿ ಕೊಡಬೇಕಾದ ಪ್ರಸಂಗಗಳು ಬರುತ್ತವೆ ಅಂಥ ಸ್ಥಳಗಳಿಗೆ ಹೆವಿ ಟ್ರಾನ್ಸ್‌ಮಿಷನ್ ಲೈನ್‌ಗಳನ್ನು ಹಾಕತಕ್ಕ ಕಾರ್ಯಕ್ರಮವನ್ನು ಇಟ್ಟು ಕೊಳ್ಳುವುದು ಬಹಳ ಮುಖ್ಯವಾದುದು ಎಂದು ಕಾಣುತ್ತದೆ.

ಈ ದಿವಸ ಅವರು ಅನುಸರಿಸುತ್ತಿರುವ ನೀತಿಯನ್ನು ನೋಡಿದರೆ, ಅರ್ಜಿಗಳು ಬರಬೇಕು, ಅವರು ಡೆಪಾಜಿಟ್ ಮಾಡಬೇಕು, ಇಲಾಖೆಯವರು ಸರ್ವೆ ಮಾಡಿ ಅದು ಲಾಭದಾಯಕವೇ ಅಲ್ಲವೇ ಎಂಬುದನ್ನು ತಿಳಿಸಬೇಕು, ಅನಂತರ ಇವರು ಅದನ್ನು ಕೈಗೊಳ್ಳಬೇಕು ಎಂಬುದಾಗೆಲ್ಲ ಇದೆ, ಈಗ. ಇಷ್ಟೆಲ್ಲ ಆದರೂ ಈ ದಿವಸ ನಮ್ಮ ಈ ಕಳೆದ 1-2 ಮತ್ತು ಮೂರನೆ ಯೋಜನೆಗಳಿಗೆ ಅವರಿಗೆ ಈ ವಿದ್ಯುಚ್ಛಕ್ತಿಯ ಪೂರೈಕೆಯನ್ನು ಮಾಡಲು ಸಾಧ್ಯವಿಲ್ಲವಾಗಿದೆ. ಹೀಗಾದರೆ ನಾವು ನಮ್ಮ ಆಹಾರೋತ್ಪನ್ನವನ್ನು ಜಾಸ್ತಿ ಮಾಡಲು ಖಂಡಿತ ಸಾಧ್ಯವಿಲ್ಲ. ಇವರಲ್ಲಿ ಎಷ್ಟು ಕಿಲೋವಾಟ್ಸ್ ಪವರ್ ಇರುತ್ತದೆಯೋ ಅಷ್ಟನ್ನು ಮಾತ್ರ ಸರಬರಾಯಿ ಮಾಡುತ್ತೇವೆ ಎಂದರೆ ಇದು ಖಂಡಿತ ಸಾಧ್ಯವಾಗುವುದಿಲ್ಲ. ನಮಗೆ ಇಲ್ಲಿ ಇಂಥ ಹೈಡಲ್ ಪ್ರಾಜೆಕ್ಟುಗಳನ್ನು ಮಾಡಲು ಹೆಚ್ಚಿನ ಅವಕಾಶ ವಿದೆ. ಈ ಬಗ್ಗೆ ಬೋರ್ಡಿನವರು ತೀವ್ರವಾಗಿ ಒಂದು ಸರ್ವೆ ನಡೆಸಿ ಎಲ್ಲೆಲ್ಲಿ ನೀರಾವರಿ ಕಾಂಗಾರಿ ಗಳಿಗೆ ಹೆಚ್ಚಿನ ಅವಕಾಶವಿದೆ ಎಂಬುದನ್ನು ಕಂಡ ಹಿಡಿದು ಆ ಬಗ್ಗೆ ಒಂದು ನಕ್ಷೆಯನ್ನು ತಯಾರಿಸಿ ಅದರಂತೆ ಈ ಪವರನ್ನು ಹೆಚ್ಚು ಒದಗಿಸುವುದು ಯೋಗ್ಯ ಎಂದು ಹೇಳುತ್ತೇನೆ. ಈ ಬಡ್ಜೆಟ್ಟಿನಲ್ಲಿ 1963-64ರಲ್ಲಿ ಅದಷ್ಟು ಹೆಚ್ಚಿಗೆ ವ್ಯವಸಾಯಕ್ಕೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುತ್ತೇವೆಂದು ಹೇಳಿದ್ದಾರೆ.

ಇನ್ನು ಮೈಂಟೆನೆನ್ಸ್ ವಿಚಾರ ಹೇಳಿರುವುದನ್ನು ನೋಡಿದರೆ ಎಲ್ಲಿ ಸಿಬ್ಬಂದಿ ಅನಗತ್ಯವೋ ಅಲ್ಲಿ ಹೆಚ್ಚು ಸಿಬ್ಬಂದಿಯನ್ನು ಇಟ್ಟಹಾಗೆ ಕಂಡುಬರುತ್ತದೆ. ಈ ದಿವಸ ಈ ಸಿಬ್ಬಂದಿಗಾಗಿ ಬೆಂಗಳೂರಿನಲ್ಲಿ 13 ಲಕ್ಷ ರೂಪಾಯಿಗಳು ಖರ್ಚಾಗುತ್ತಿದ್ದರೆ, ಮೈಸೂರಿನಲ್ಲೂ ಅದೇ 13 ಲಕ್ಷ ಖರ್ಚಾಗುತ್ತಿದೆ. ಈ ಹಿಂದೆ ಬೋರ್ಡಿನವರು ಒಬ್ಬ ಲೈನ್ ಮ್ಯಾನನ್ನು ಇಡಬೇಕಾಗಿದ್ದರೆ ಅದಕ್ಕೆ ಏನೇನು ಕಂಡೀಷನ್ ಇರಬೇಕು ಎಂಬುದನ್ನು ಹೇಳಿದ್ದರು. 5 ಮೈಲಿಗಳ ಆವರಣಕ್ಕೆ ಅಥವಾ 500 ಇನ್‌ಸ್ಟೊಲೇಷನ್ ಇರುವ ಕಡೆಗೆ ಒಬ್ಬ ಲೈನ್ ಮ್ಯಾನ್ ಇರಬೇಕೆಂದು ಗೊತ್ತುಮಾಡಿದ್ದರು. ಈ ನೇಮವನ್ನು ಅವರು ಕಟ್ಟುನಿಟ್ಟಾಗಿ ಅನುಸರಿಸುವುದು ಉತ್ತಮವೆಂದು ಹೇಳುತ್ತೇನೆ. ಇದರಿಂದ ಖರ್ಚೂ ಸಹಾ ಕಡಮೆ ಆಗುತ್ತದೆ. ಜನರೂ ಸಹಾ ಒಂದೇಕಡೆ ಇರುವ ಬದಲು ಹಂಚಿಕೆಯಾಗುತ್ತಾರೆ. ಇದರಿಂದ ಜನರಿಗೂ ಅನುಕೂಲ; ಈ ವಿಚಾರವನ್ನು ಬೋರ್ಡಿನವರು ಇನ್ನೊಮ್ಮೆ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ಪಂಪ್‌ಸೆಟ್‌ಗಳನ್ನು ಸರಬರಾಯಿ ಮಾಡತಕ್ಕ ವಿಚಾರದಲ್ಲಿ ಸರ್ಕಾರ ದವರು ಒಂದು ತತ್ವವನ್ನು ಆಚರಿಸುತ್ತಿದ್ದಾರೆ. ಇದು ವಿದ್ಯುಚ್ಛಕ್ತಿಯ ಅಭಾವದಿಂದ ಹೀಗೆ ಮಾಡ ಲಾಗಿದೆ. ಅದೇನೆಂದರೆ ರಾತ್ರಿಹೊತ್ತು ಸರಬರಾಯಿ ಮಾಡುವುದು ವ್ಯವಸಾಯಕ್ಕೆ ಸರಿಹೋಗು ತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ನಾವು ಸ್ವಲ್ಪ ಪರಿಶೀಲಿಸಬೇಕಾದ್ದು ಅಗತ್ಯವೆಂದು ಹೇಳು ತ್ತೇನೆ. ಈ ಹಿಂದೆ ಹಗಲು ಹೊತ್ತಿನಲ್ಲೇ ಒಂದೊಂದು ಏರಿಯಕ್ಕೆ ಆರಾರು ಗಂಟೆ ಪವರನ್ನು

ಕೊಡತಕ್ಕ ಒಂದು ಸ್ಟ್ಯಾಗ್ಗರಿಂಗ್ ಯೋಜನೆ ಇತ್ತು. ಆ ರೀತಿ ಪವರನ್ನು ಡಿಸ್ಟ್ರಿಬ್ಯೂಟ್ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ರಾತ್ರಿಹೊತ್ತಿನ ತಾಪತ್ರಯವೇ ಇರುವುದಿಲ್ಲ. ಇದನ್ನು ಮತ್ತೊಮ್ಮೆ ಬೋರ್ಡಿನವರು ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಈಗ ನಮ್ಮ ಮುಂದೆ ಇಟ್ಟಿರತಕ್ಕ ಬಡ್ಜೆಟ್ಟಿನಲ್ಲಿ ಅಂದರೆ 1963-64ರ ಬಡ್ಜೆಟ್ಟಿನಲ್ಲಿ 21 ಲಕ್ಷ ರೂಪಾಯಿಗಳ ನಷ್ಟ ಸೇರಿಸಿದ್ದಾರೆ. ಆದರೆ ಈಗಾಗಲೆ ಈ ವರ್ಷದ ಟ್ಯಾರೀಫನ್ನು ನಿಗದಿ ಮಾಡಿ ಆದಾಯವನ್ನು ಹೆಚ್ಚಿಸಿಕೊಳ್ಳಬೇಕೆಂದು ಪ್ರಯತ್ನ ಮಾಡಿದ್ದಾರೆ. ಕನ್‌ಸ್ಯೂಮರುಗಳಿಂದ ಯೂನಿಟ್ಟಿಗೆ ಒಂದೋ ಅಥವಾ ಎರಡೋ ಕಾಸುಗಳನ್ನು ಜಾಸ್ತಿ ಮಾಡಿ ಆದಾಯವನ್ನು ಹೆಚ್ಚಿಸಿಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ ಈ ಖೋತಾ ಸರಿದೂಗಿಸತಕ್ಕ ಬಗ್ಗೆ ನನಗೆ ಒಂದು ಆಲೋಚನೆ ಹೊಳೆಯುತ್ತದೆ. ಅದೇನೆಂದರೆ: ಈಗ ವಿದ್ಯುಚ್ಛಕ್ತಿಯನ್ನು ಅಡ್ವರ್‌ಟೈಜ್‌ಮೆಂಟ್ ಮತ್ತು ಕೆಲವು ಫೆಸ್ಟಿವಲ್ಸ್ ಮತ್ತು ಮದುವೆಗಳ ಸಮಾರಂಭ ಇಂಥ ಕಾಲದಲ್ಲಿ ಈಗ ಇರುವ ಆ ಕನ್‌ಸ್ಯೂಮರ್ಸಿಗೆ ಹಾಕತಕ್ಕ ರೀತಿಯಲ್ಲಿ ಒಂದು ಯೂನಿಟ್ಟಿಗೆ 28 ನಯಾಪೈಸೆಗಳನ್ನು ಹಾಕುತ್ತಿದ್ದಾರೆ, ಅದನ್ನು ಇನ್ನೂ ಹೆಚ್ಚಿಸಬೇಕು ಎಂದು ಹೇಳುತ್ತೇನೆ. ಇದರಿಂದ ಖೋತಾ ಸರಿದೂಗಿಸಲು ಅವಕಾಶವಿದೆ.

ಕೊನೆಯದಾಗಿ ಈ ವರ್ಷ 7,000 ಪಂಪ್ ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದರ ಜೊತೆಗೆ ಇನ್ನೂ ಹೆಚ್ಚಿಗೆ ಒದಗಿಸಬೇಕೆಂದು ಹೇಳುತ್ತೇನೆ. ಈಗ ಕೈಗಾರಿಕೆಗಳಿಗೆ ಏನು ಪವರನ್ನು ಒದಗಿಸಲಾಗುತ್ತಿದೆ ಅದರಲ್ಲಿ ಸೇಕಡ ಹತ್ತರಷ್ಟನ್ನೂ ವ್ಯವಸಾಯಕ್ಕೆ ಒದಗಿಸುತ್ತಿಲ್ಲ, ಕನಿಷ್ಟಪಕ್ಷ ವ್ಯವಸಾಯಗಾರರಿಗೆ ಸೇಕಡ 25 ರಷ್ಟು ಪವರನ್ನಾದರೂ ಒದಗಿಸಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಹಾಂತ ಸ್ವಾಮಿ (ಷಹಪುರ).—ಸ್ವಾಮಿ ಅಧ್ಯಕ್ಷರೇ, ಇಂದು ನಮ್ಮ ಘನಸಭೆಯ ಮುಂದೆ ಬಂದಿರತಕ್ಕ ಮೈಸೂರು ರಾಜ್ಯದ ವಿದ್ಯುತ್ ಮಂಡಲಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ನನಗೆ ಅಪೇಕ್ಷೆ ಇದೆ. ಸುಮಾರು ಈ ಮಂಡಲಿ ಕಾರ್ಯಗತವಾಗಿ ಇಲ್ಲಿಗೆ ಆರು ವರ್ಷಗಳ ಮೇಲಾಯಿತು. ಆದರೆ ಈ ಮಂಡಳಿಯ ಬಗ್ಗೆ ಧೃತಿಗತಿಗಳನ್ನು ನೋಡಿದರೆ ನನಗೆ ಸ್ವಲ್ಪ ವಿಷಾದವನ್ನು ವ್ಯಕ್ತಪಡಿಸಬೇಕೆಂದೆನಿಸಿದೆ. ನಮ್ಮ ಹೈದರಾಬಾದು ಕರ್ಣಾಟಕಕ್ಕೆ ಸೇರಿದ—ಬೀದಾರ್, ಹುಮ್ನಾಬಾದ್, ಕಲ್ಬುರ್ಗಿ, ಯಾದ್‌ಗಿರಿ ಇತ್ಯಾದಿ ನಾಲ್ಕು ಪಟ್ಟಣಗಳನ್ನು ಬಿಟ್ಟರೆ, ಅಂದರೆ ಈ ನಾಲ್ಕು ಲಕ್ಷ ಜನರನ್ನು ಬಿಟ್ಟರೆ ಉಳಿದ ಹೈದರಾಬಾದ್ ಕರ್ಣಾಟಕ ಪ್ರದೇಶವೆಲ್ಲ ಅಂದರೆ ಸುಮಾರು 30 ಲಕ್ಷಕ್ಕೂ ಮೀರಿದ ಜನ ಗಾಡಾಂಧಕಾರದಲ್ಲಿ ಬಿದ್ದು ತಮ್ಮ ಜೀವನವನ್ನು ನಡೆಸಬೇಕಾಗಿದೆ. ನಮ್ಮಲ್ಲಿ ಯಾರಾದರೂ ಆರೋಪಿಗಳು ತಪ್ಪು ಮಾಡಿದರೆ ಅಂಥವರನ್ನು ನ್ಯಾಯಾಧೀಶರು ಕತ್ತಲೆಯ ಕಾರಾಗೃಹದಲ್ಲಿಡುವಂತೆ ಈ 30 ಲಕ್ಷ ಜನರು ತಮ್ಮ ಜೀವನವನ್ನು ಸಾಗಿಸಬೇಕಾಗಿದೆ. ಹೀಗೆ ಹೇಳಿದರೆ ಯಾರೂ ಇದನ್ನು ಒಂದು ಅತಿಶಯವೆಂದು ಭಾವಿಸಬಾರದು.

ಈ ದೃಷ್ಟಿಯಿಂದ ಸ್ವಲ್ಪ ಕೂಲಂಕಷವಾಗಿ ವಿಚಾರ ಮಾಡುತ್ತಾ ಹೋದರೆ ಈಗಾಗಲೇ ನಮ್ಮ ಬಡ್ಜೆಟ್ಟಿನಲ್ಲಿ ಕೊಟ್ಟಿರುವ ವಿವರಗಳಂತೆ ಪುಟ 9 ಮತ್ತು 10ರಲ್ಲಿ ಹೈದರಾಬಾದು ಕರ್ಣಾಟಕದ ಭಾಗಗಳಾದ ಗುಲ್ಬರ್ಗಾ, ಬೀದರ್, ಹಾಗೂ ರಾಯಚೂರುಗಳಿಗೆ ಸುಮಾರು 125 ಕಿಲೋವಾಟಿನಷ್ಟು ಶಕ್ತಿಯುಳ್ಳ ವಿದ್ಯುಜ್ಜನಕ ಯಂತ್ರಗಳನ್ನು ಸ್ಥಾಪನೆ ಮಾಡಲು ಸೂಚಿಸಲಾಗಿದೆ. ಮೊದಲಿಗೆ ಗುಲ್ಬರ್ಗಾದಲ್ಲಿರುವ ವಿದ್ಯುಚ್ಛಕ್ತಿಯ ವ್ಯವಸ್ಥೆಯ ಬಗ್ಗೆ ಒಂದೆರಡು ಶಬ್ದಗಳನ್ನು ಈ ಸಭೆಯಲ್ಲಿ ಹೇಳಬೇಕಾಗಿದೆ. 24 ತಾಸುಗಳಷ್ಟು ನಡೆಯತಕ್ಕ ಗುಲ್ಬರ್ಗಾದ ವಿದ್ಯುಚ್ಛಕ್ತಿಯ ಯಂತ್ರಾಗಾರ ಮತ್ತು ಅದರ ಆಡಳಿತ ಅವರ್ಣನೀಯವಾದುದು. ಅದನ್ನು ನಡೆಸಿಕೊಂಡು ಹೋಗತಕ್ಕ ಕಾರ್ಯ ಹೇಗಿದೆ ಎಂದರೆ, ರಾತ್ರಿ ವೇಳೆಯಲ್ಲಿ ಎರಡು ಸಲ ನಾವು ಕತ್ತಲೆಯಲ್ಲಿರುವಂತಹ ಅದೃಷ್ಟಹೀನರಾಗಿದ್ದೇವೆ. ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಮತ್ತು ಆ ಮಂಡಲಿಯ ಸದಸ್ಯರುಗಳಿಗೆ ಇದನ್ನು ಪತ್ತೆ ಹಚ್ಚಲಿಕ್ಕೆ ಅಸಾಧ್ಯವೂ ಹೌದು. ಇನ್ನು ರಾಯಚೂರು ಬಗ್ಗೆ ಹೇಳಬೇಕಾದರೆ; ನಾಲ್ಕಾರು ತಿಂಗಳಲ್ಲಿ ವಿದ್ಯುಚ್ಛಕ್ತಿಯ ಕಾರ್ಯಕ್ರಮಗಳಿಂದಾಗಿ ಸುಮಾರು 8-10 ದಿವಸಗಳು ವಿದ್ಯುಚ್ಛಕ್ತಿಯನ್ನು ನಿಲ್ಲಿಸಿದುದರಿಂದ ರಾಯಚೂರಿನ ಜನ ದಿಗ್ಮೂಢರಾಗಿ ಮನವಿಗಳನ್ನು ಬೋರ್ಡಿನವರಿಗೂ ಹಾಗೂ ಸರಕಾರಕ್ಕೂ ಸಲ್ಲಿಸಿದಮೇಲೆ 8-10 ದಿನಗಳಾದಮೇಲೆ ರಾಯಚೂರಿನ ಜನತೆ ತಮ್ಮ ಬಾಳ್ವೆಯನ್ನು ನೆರವೇರಿಸಲು ವಿದ್ಯುಚ್ಛಕ್ತಿಯ ಸೌಕರ್ಯವನ್ನು ಪಡೆದುಕೊಂಡರು. ಈ ದೃಷ್ಟಿಯಿಂದ ಇಲ್ಲಿ ನನ್ನ ಅನುಭವದ ಒಂದು ಸಂಗತಿಯನ್ನು ಹೇಳಬೇಕೆಂದಿದ್ದೇನೆ. ಹೈದರಾಬಾದು ಭಾಗಕ್ಕೆ ಹಿಂದೆ ಔರಂಗಾಬಾದು ಎನ್ನುವ ಜಿಲ್ಲೆ ಇತ್ತು. ಅದು ಈಗ ಮಹಾರಾಷ್ಟ್ರಕ್ಕೆ ಸೇರಿದೆ. ಅದಕ್ಕೆ ಸೇರಿದ ಅಜಂತ ಮತ್ತು ಎಲ್ಲೋರವನ್ನು ಎಷ್ಟೋ ಮಾನ್ಯ ಮಿತ್ರರುಗಳು ನೋಡಿರಬಹುದು. ಆಗ ಬಾದಾಮಿ ಅದಕ್ಕೆ ರಾಜಧಾನಿಯಾಗಿದ್ದಾಗ ಅಲ್ಲಿ ಆಳುತ್ತ ಇದ್ದ ಪರಮೇಶ್ವರ ಪುಲಕೇಶಿ

(ಶ್ರೀ ಮಹಾಂತ ಸ್ವಾಮಿ)

ಎನ್ನುವವರು ಒಂದು ಜಲ ದೀಪವನ್ನು ಕಂಡುಹಿಡಿದು ಇಟ್ಟಿದ್ದನು. ಅದು ಸುಮಾರು 1930-32ನೇ ಸಾಲಿನವರೆಗೂ ಆ ದೀಪ ಹಾಗೇ ಉಳಿದು ಮುಂದುವರೆದು ಬಂದಿತ್ತು. ಅಂತಹ ದೀಪದ ತತ್ವವೇನೆಂಬುದನ್ನು ಆಗಿನ ಸರಕಾರ ಮತ್ತು ಜನ ಅದಕ್ಕೆ ಹೆಚ್ಚು ಪ್ರಯತ್ನ ಕೊಡಲಿಲ್ಲ. ಅದು ಒಂದು ನಂದಾದೀಪದಂತೆ ಉರಿಯುತ್ತಿತ್ತು. ಅದನ್ನು ಒಬ್ಬರು ಯೂರೋಪಿಯನ್ನು ಆಡಳಿತಗಾರರು ಬಂದಮೇಲೆ ಈ ಜಲ ದೀಪವನ್ನು ತೆಗೆದುಕೊಂಡು ಹೋಗಿ ಸಾಕಷ್ಟು ಶೋಧ ನಡೆಸಲು ಹೋದಾಗ ಈ ದೀಪ ನಶಿಸಿಹೋಯಿತು ಮತ್ತು ಆ ನಂದಾದೀಪದ ಮಹತ್ವವನ್ನೂ ಅರಿಯಲು ಅಸಾಧ್ಯವಾಯಿತು. ಇತಿಹಾಸ ಕಾಲದಲ್ಲೇ ಅಂತಹ ದೀಪಗಳಿದ್ದುವು ಎನ್ನುವಾಗ ಇಂದಿನ ಆಧುನಿಕ ಕಾಲದಲ್ಲಿ ಇಂತಹ ವಿಚಿತ್ರಗಳು ಬೇಕಾದಷ್ಟಿವೆ. ನಮ್ಮ ಬೋರ್ಡಿಗೆ ಸಿಕ್ಕಿರುವ ವಿದ್ಯುಚ್ಛಕ್ತಿಯ ಅವ್ಯವಸ್ಥೆಯೂ ಹಾಗಾಗಿದೆ. ಅಂತಹ ಅಜರಾಮರವಾದ ಜಲ ದೀಪವನ್ನು ಹಿಂದೆ ಮಲ್ಲಿಕಾಂಬರ ದಂಡೆತ್ತಿ ಬಂದಾಗ ಅದನ್ನು ತೆಗೆದುಕೊಂಡು ಹೋಗಲು ಆಗಲಿಲ್ಲ.

3-30 P.M.

ಇನ್ನು ಪಂಪುಗಳನ್ನು ನೀರಾವರಿಗಾಗಿ ಸಪ್ಲೈ ಮಾಡುತ್ತೇವೆಂದು ಹೇಳುತ್ತಾರೆ. ಯಾವ ಕಾಲದಲ್ಲಿ ಸಾಕಷ್ಟು ಸೌಕರ್ಯಗಳು ನೀರಾವರಿಗಾಗಿ ಇರುತ್ತಿರಲಿಲ್ಲವೋ ಅಂತಹ ಕಾಲದಲ್ಲಿ ಇಂತಹ ಸೌಕರ್ಯಗಳನ್ನು ಕೊಡುವುದು ಅತ್ಯಗತ್ಯ. ನಮ್ಮ ಸರಕಾರದವರೇನೋ ಸುಮಾರು 7,000 ಪಂಪುಗಳನ್ನು ಕೊಡಬೇಕೆಂದಿದ್ದಾರೆ. ಈಗ ನಾವು ಪ್ರಜಾಪ್ರಭುತ್ವವನ್ನು ಆರಂಭಮಾಡಿ ಸರ್ವತೋಮುಖವಾದ ಅಭಿವೃದ್ಧಿಯನ್ನು ಮಾಡಬೇಕೆಂದಿರುವ ಪ್ರಜಾ ರಾಜ್ಯದಲ್ಲಿ ಪ್ರಜಾಪ್ರಭುತ್ವಕ್ಕೋಸ್ಕರ, ಪ್ರಜೆಗಳಾಗಿರತಕ್ಕ ನಮಗೋಸ್ಕರ ಸಿಕ್ಕಬೇಕಾದ ಸೌಕರ್ಯ ಈ ಎಲೆಕ್ಟ್ರಿಸಿಟಿ ಬೋರ್ಡಿನಿಂದ ಸಿಕ್ಕದೇ ಇರುವುದು ಬಹಳ ದುಃಖಕ್ಕೆ ಆಸ್ಪದವಾಗಿದೆ ಎಂದು ಹೇಳಬಹುದು. ಸರಕಾರದವರು ನಮ್ಮ ಹೈದರಾಬಾದು ಭಾಗ ಬಹಳ ಹಿಂದುಳಿದಿರುವ ಕರ್ಣಾಟಕದ ಭಾಗ, ಇದು ಬಹಳ ದಿನಗಳಿಂದಲೂ ಹಿಂದುಳಿದ ದೇಶದಲ್ಲಿದ್ದು ಹಿಂದಾಗಿರುವುದನ್ನು ಮುಂದೆ ತರಬೇಕಾಗಿದೆ ಮತ್ತು ಇದರಲ್ಲಿ ಸಾಕಷ್ಟು ಡೆವಲಪ್ಮೆಂಟು ಮಾಡಬೇಕಾಗಿದೆ ಎಂದು ಹೇಳಿದರು. ಹಾಗೆ ಹೋಗುತ್ತಾ ಏನೇನೋ ದೊಡ್ಡ ಕಟ್ಟಡಗಳನ್ನು ಮಾಡುತ್ತೇವೆಂದು ಮಾತನಾಡುತ್ತಿದ್ದಾರೆ. ಆದರೆ ಈ ವಿದ್ಯುಚ್ಛಕ್ತಿ ಬೋರ್ಡಿನಿಂದ ನೋಡುವುದಾದರೆ ಕೆಲವು ಭಾಗಗಳಲ್ಲಿ ಇವರು ಕೊಟ್ಟಿರುವ ಪಟ್ಟಿಯಂತೆ ಒಂದೆರಡು ಜನರೇಟಿಂಗು ಸೆಟ್ಟುಗಳನ್ನು—ಗುಲ್ಬರ್ಗಾಕ್ಕೆ ಒಂದು ಸೆಟ್ಟು, ರಾಯಚೂರಿಗೆ ಒಂದು ಸೆಟ್ಟು, ಬೀದರ್‌ಗೆ ಒಂದು ಸೆಟ್ಟು ಎಂದು ಇದರಲ್ಲಿ ತೋರಿಸಲಾಗಿದೆ. ಇದರ ಬಗ್ಗೆ ಏನು ವಿಚಾರ ಆಗಿದೆ ಎನ್ನುವುದು ಇನ್ನೂ ಸರಿಯಾಗಿ ತಿಳಿದಿಲ್ಲ; ಇಲ್ಲಿನ ತಾಲ್ಲೂಕಾ ಪ್ರದೇಶಗಳಿಗೂ ಸ್ವಲ್ಪ ಲಕ್ಷವನ್ನು ಈ ಬೋರ್ಡಿನವರು ಕೊಡುವುದು ಅವಶ್ಯವಾಗಿದೆ. ಇದನ್ನುಪಯೋಗಿಸತಕ್ಕ ಸುಮಾರು 20-25 ಸಾವಿರ ಜನಕ್ಕೆ ಅನುಕೂಲವಾಗುತ್ತದೆ. ಇದರ ಕಡೆಗೆ ಸ್ವಲ್ಪ ಲಕ್ಷ ಕೊಡಬೇಕೆಂದು ನಾನು ಅವರನ್ನು ಬೇಡುತ್ತೇನೆ. ಹೈದರಾಬಾದಿನ ಮೂರು ಜಿಲ್ಲೆಗಳು ಮುಂಬಯಿ ಭಾಗದ ಬಿಜಾಪುರದಂತೆ ಬರಗಾಲಕ್ಕೆ ಸಿಕ್ಕಿದಂತಹ ಭಾಗ draught affected area ಬರಗಾಲ ಪೀಡಿತ ಭಾಗ ಎಂದು ತಿಳಿದು ಸರಕಾರ ಸಂಪೂರ್ಣ ಮಾಡಬೇಕೆನ್ನುವ ದೃಷ್ಟಿಯಿಂದ ಎಲೆಕ್ಟ್ರಿಸಿಟಿ ಬೋರ್ಡಿನವರು ಏಳು ಲಕ್ಷ ರೂಪಾಯಿ ವೆಚ್ಚದಲ್ಲಿ ಏಳು ಸಾವಿರ ಐ. ಪಿ. ಸೆಟ್ಟುಗಳನ್ನು ಕೊಡಬೇಕೆನ್ನುವ ವಿಚಾರವಿದ್ದಿತು ಮತ್ತು ಇದಕ್ಕಾಗಿ ಸಾಲಗಳನ್ನೂ ಕೊಡುತ್ತೇವೆಂದು ಹೇಳಿದರು. 5,000ಕ್ಕೆ ಮೇಲ್ಪಟ್ಟು 20,000 ಜನಸಂಖ್ಯೆಯವರೆಗೆ ಉಳ್ಳ ಗ್ರಾಮಗಳಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಬೇಕೆನ್ನುವ ಅಂದಾಜಿತ್ತು; ಅಲ್ಲಿ ನೀರಾವರಿಗೆ ಅನುಕೂಲವಾಗುವಂತೆ ಎಷ್ಟೋ ಸೆಟ್ಟುಗಳನ್ನು ಕೊಟ್ಟಿದ್ದಾರೆ. Draught affected Area ಎಂದು ಇಲ್ಲಿಗೆ ನೀರಾವರಿ ಸೌಕರ್ಯವನ್ನು ಪಡೆಯಲು ಇಲ್ಲಿನ ಜನಕ್ಕೆ ಅನುಕೂಲವಾಗಿದೆ. ನಮ್ಮ ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯು ನಮ್ಮ ಭಾಗದಲ್ಲಿ ಒಳ್ಳೆಯ ತೃಪ್ತಿಕರವಾದ ಕಾರ್ಯಗಳನ್ನು ಮಾಡಿದೆ. ಈ ಪ್ರದೇಶವನ್ನು ನೀರಾವರಿಯಲ್ಲಿ ಉತ್ತಮಪಡಿಸಬೇಕು ಎನ್ನುವ ಆಸೆಯೂ ಇದೆ. ಹಾಗೆ ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಮೂರು ತಾಲ್ಲೂಕುಗಳಿಗೆ ವಿದ್ಯುಚ್ಛಕ್ತಿಯನ್ನು ಈ ಬೋರ್ಡಿನವರು ಕೊಟ್ಟಿದ್ದಾರೆ. ಇಲ್ಲಿರುವ ವಿದ್ಯುಚ್ಛಕ್ತಿಯ ಕಾರ್ಯಾಲಯ, ಸರಬರಾಜು ಮತ್ತು ವಿದ್ಯುಚ್ಛಕ್ತಿಯನ್ನು ಒದಗಿಸುವ ಶಕ್ತಿಯನ್ನು ನೋಡಿದರೆ ಬಹಳ ವಿಚಿತ್ರವಾದೀತು. ನಮ್ಮ ತಾಲ್ಲೂಕಾದ ಸುರಪುರದಲ್ಲಿ ರಾತ್ರಿ 12 ಗಂಟೆಗೆ ವಿದ್ಯುಚ್ಛಕ್ತಿ ಕೊಡುವುದನ್ನು ಬಂದುಮಾಡುತ್ತಾರೆ. ಮಿಕ್ಕ ಆರು ತಾಸುಗಳಲ್ಲಿ ಕಳ್ಳಕಾಕರು ಬಂದು ದರೋಡೆ ಮಾಡಲಿಕ್ಕೆ ಅನುಕೂಲಮಾಡಿದ ಹಾಗಾಗಿದೆ. ಯಾವ ಯಾವ ತಾಲ್ಲೂಕಾಗಳಲ್ಲಿ ಅಥವಾ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿಯನ್ನು ಕೊಟ್ಟ

ದ್ವಾರೋ ಅಂತಹ ಕಡೆಗಳಲ್ಲೆಲ್ಲಾ ಆರು ಗಂಟೆ ಬೆಳಗಿನಿಂದ ಮರುದಿನ ಆರು ಗಂಟೆಯವರೆಗೆ ವಿದ್ಯುಚ್ಛಕ್ತಿಯು ಸಪ್ಲೈ ಕೊಡುವಂತೆ ಮಾಡಬೇಕೆಂದು ಇಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಗುಲ್ಬರ್ಗದಲ್ಲಿ ವಿದ್ಯುಜ್ಜನಕ ಯಂತ್ರವನ್ನು, ಸುಮಾರು 650 kW. ಶಕ್ತಿ ಇರುವಂಥದ್ದನ್ನು ಸ್ಥಾಪನೆ ಮಾಡಬೇಕೆಂದು ಬೋರ್ಡಿನ ಅಪೇಕ್ಷೆ ಇದೆ. ಅದನ್ನು ಕಾರ್ಯಗತ ಮಾಡುವುದಕ್ಕಿಂತಲೂ ತುಂಗಭದ್ರ ಜಲಾಶಯದಿಂದ ವಿದ್ಯುತ್ತನ್ನು ಒದಗಿಸುವುದು ಉತ್ತಮ. ಈ ಬೋರ್ಡ್ ಸಾವಿರಾರು ರೂಪಾಯಿಗಳನ್ನೂ ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡಿ ಪರದೇಶಗಳಿಂದ ಯಂತ್ರ ಸಾಮಗ್ರಿಗಳನ್ನು ಮುಂಬಯಿಗೆ ತರಿಸಿಕೊಂಡು ಆಮೇಲೆ ಬೆಂಗಳೂರಿಗೆ, ಅಲ್ಲಿಂದ ಗುಲ್ಬರ್ಗಕ್ಕೆ ಹೀಗೆ ಸಾಗಿಸುವುದಕ್ಕಿಂತ ಬೇರೆ ವ್ಯವಸ್ಥೆ ಮಾಡುವುದು ಒಳ್ಳೆಯದು. ಈ ಸಂದರ್ಭದಲ್ಲಿ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒಂದು ಮನವಿ ಮಾಡಿಕೊಳ್ಳುವುದೇನೆಂದರೆ, ತುಂಗಭದ್ರದಿಂದ ಹೊರಡತಕ್ಕ ವಿದ್ಯುಚ್ಛಕ್ತಿಯನ್ನು ಬದರೆಯವರೆಗೂ ಮುಟ್ಟಿಸಿದರೆ ನಮ್ಮ ಹೈದರಾಬಾದ್ ಕರ್ನಾಟಕಕ್ಕೆ ವಿದ್ಯುಚ್ಛಕ್ತಿ ದೊರೆತು ನಮಗೆಲ್ಲಾ ಬಹಳ ಸಹಾಯವಾಗುತ್ತದೆ. ನಾವು ಮತ್ತು ನಮ್ಮ ಪಕ್ಕದ ಆಂಧ್ರ ರಾಜ್ಯದಲ್ಲಿ ನೋಡುವುದಾದರೆ, ಯಾವ ರಸ್ತೆಯ ಮೇಲೆ ಹೋಗಲಿ ರೈಲ್ವೆಯಿಂದ ಹೋಗಲಿ ಪ್ರತಿಯೊಂದು ಹಳ್ಳಿಯಲ್ಲಿಯೂ ಅವರು ವಿದ್ಯುಚ್ಛಕ್ತಿಯನ್ನು ಸಪ್ಲೈ ಮಾಡಿದ್ದಾರೆ. ಇದಕ್ಕಾಗಿ ಅವರು ಹತ್ತು ಸಾವಿರ ಜನವಿರುವ ಹಳ್ಳಿ ಇದ್ದರೆ ಅಲ್ಲಿ ಒಂದು ವಿದ್ಯುಜ್ಜನಕ ಯಂತ್ರವನ್ನು ಸ್ಥಾಪಿಸಿ ಅಲ್ಲಿಗೂ ಅದರ ಪಕ್ಕದಲ್ಲಿರುವ ನಾಲ್ಕಾರು ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಕೊಟ್ಟು ಅಲ್ಲಿಯ ಜನಜೀವನವನ್ನು ನೀರಾವರೀ ಮುಖಾಂತರವಾಗಿ ಜನರ ಜೀವನ ಸುಲಭವಾಗಿ ಮಾಡುವುದಕ್ಕೆ ಅಸ್ಪದ ಮಾಡಿ ಕೊಟ್ಟಿದ್ದಾರೆ. ಅಂಥದನ್ನು ನಮ್ಮ ವಿದ್ಯುಚ್ಛಕ್ತಿ ಮಂಡಳಿಯೂ ಸ್ವಲ್ಪ ಕಾರ್ಯರೂಪಕ್ಕೆ ತರಲು ನಾನು ಒಂದು ಸೂಚನೆಯನ್ನು ಕೊಡುತ್ತಿದ್ದೇನೆ.

ತುಂಗಭದ್ರದಿಂದ ಉತ್ಪತ್ತಿಯಾಗುವ ಸುಮಾರು 20 ಸಾವಿರ kW. ವಿದ್ಯುಚ್ಛಕ್ತಿಯಲ್ಲಿ ಏಳೆಂಟು ಸಾವಿರ K.W. ನಷ್ಟು ವಿದ್ಯುಚ್ಛಕ್ತಿ ಭೂಗರ್ಭದಲ್ಲಿ ಹೋಗುತ್ತಿದೆಯೆಂದು ಮಾನ್ಯ ಮುಖ್ಯಮಂತ್ರಿಗಳು ಒಂದು ಸಲ ಅವರೇ ಭಾಷಣದಲ್ಲಿ ಹೇಳಿದರು, ಹಾಗೆ ನಷ್ಟವಾಗಲು ಅವಕಾಶಕೊಡದೆ ಸರ್ಕಾರ ಸ್ವಲ್ಪ ಲಕ್ಷ್ಯ ವಹಿಸಿ ಭೂಗರ್ಭದಲ್ಲಿ ಹೋಗುವ ವಿದ್ಯುಚ್ಛಕ್ತಿಯನ್ನು, ಸೃಷ್ಟಿ ನಿರ್ಮಾಣವಾದ ಶಕ್ತಿಯನ್ನು ಹಳ್ಳಿಗಳಿಗೆ ಕೊಟ್ಟರೆ, ಅಲ್ಲಿರತಕ್ಕ ಜನರ ಜೀವನ ಮಟ್ಟ ಉಚ್ಚಮಟ್ಟದಲ್ಲಿ ಹೋಗಬಹುದು. ಇದಕ್ಕೆ ಸರ್ಕಾರ ಒಂದಲ್ಲ ಒಂದು ಕಾರಣವನ್ನು ಹೇಳುತ್ತಿರುವುದು ಸ್ವಲ್ಪ ಅಸಮಾಧಾನಕರ. ಈ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗಿ ಕೆಲವು materials ಉಪಕರಣಗಳ ಕೊರತೆ ಇದ್ದು gaywire ಇಂಥ ಸಾಮಾನುಗಳು ಬರಬೇಕಾದರೆ ಬಹಳ ದಿವಸ ತಡವಾಗುತ್ತದೆ. ಇವನ್ನು ವಿಚಾರಿಸೋಣ, ನೋಡೋಣ ಎನ್ನುವ ನೀತಿ ತಪ್ಪಾಗುತ್ತದೆ. ನಿಸರ್ಗದತ್ತವಾದ ಶಕ್ತಿ, ಕೃತ್ರಿಮವಾದ ಶಕ್ತಿಯಾಗಿ ಹೊರಪಟ್ಟಿದ್ದು ಅದನ್ನು ಉಪಯೋಗಿಸುತ್ತಿಲ್ಲವೆಂದಮೇಲೆ ಅದನ್ನು ವ್ಯರ್ಥವಾಗಿ ಭೂಗರ್ಭಕ್ಕೆ ಬಿಡುವುದು ದುಃಖಾಸ್ಪದವಾದ ಸಂಗತಿ.

ಇನ್ನು ಭವಿಷ್ಯತ್ತಿನಲ್ಲಿ, ಇಡೀ ಜಗತ್ತಿನಲ್ಲಿಯೇ ದೊಡ್ಡದಾದ ಶರಾವತಿ ವಿದ್ಯುತ್ ಯೋಜನೆ ಕಾರ್ಯರೂಪಕ್ಕೆ 1964-65ರಲ್ಲಿ ಬರಬಹುದು. ಆಮೇಲೆ ಮೈಸೂರು ದೇಶದಲ್ಲಿ ಅಥವಾ ಕರ್ನಾಟಕದಲ್ಲಿರತಕ್ಕ ಎಲ್ಲ ಜನರ ಜೀವನ ಉನ್ನತಮಟ್ಟಕ್ಕೆ ಹೋಗಬಹುದು. ಮಾನವನಾಗಿ ಹುಟ್ಟಿದಮೇಲೆ ಅಗತ್ಯವಾದ ಕೆಲವು ಸೌಕರ್ಯಗಳು ಬೇಕಾಗುತ್ತವೆ, ಹೊಟ್ಟೆ, ಬಟ್ಟೆ, ಆಹಾರ; ವಸತಿ, ದೀಪ, ನೆರಳು ಇವು ಪ್ರತಿನಿತ್ಯವೂ ಪ್ರತಿಯೊಬ್ಬ ಮಾನವನಿಗೂ ಬೇಕಾಗತಕ್ಕ ಸೌಕರ್ಯಗಳು. ಪ್ರಜಾಪ್ರಭುತ್ವ ಬಂದು ಸಮಾಜವಾದದ ಮೇಲೆ ನಾವು ಕೆಲಸ ಮಾಡುವಾಗ ಇಂಥ ಆಧುನಿಕ ಸೌಕರ್ಯಗಳನ್ನು ಒದಗಿಸಲೇ ಬೇಕು. ಇವತ್ತು ನಾಳೆ ರಾಕೆಟ್ಟಿನಲ್ಲಿ ಚಂದ್ರನನ್ನು ಮುಟ್ಟುತಕ್ಕ ಕಾಲಬಂದಾಗ ನಾವು ವಿದ್ಯುಚ್ಛಕ್ತಿ ಕಾಣದೆ; ಸೀಮೆಯೆಣ್ಣೆ ದೀಪ ಹಚ್ಚಿಕೊಂಡು ಅದರಲ್ಲಿಯೇ ಜೀವನ ಸಾಗಿಸುತ್ತೇವೆಂದರೆ ಅದು ಹಾಸ್ಯಾಸ್ಪದವಾದದು. ಇಂಥ ಆಧುನಿಕ ಸೌಕರ್ಯಗಳನ್ನು ಒದಗಿಸದೆ ಇರತಕ್ಕ ರಾಜ್ಯದಲ್ಲಿರುವುದಕ್ಕಿಂತಲೂ ಎಲ್ಲಿಯಾದರೂ ಹೊರಗೆ, ಕಾಡಿನಲ್ಲಿ ಒಂದು ಜೋಪಡಿಯನ್ನು ಹಾಕಿಕೊಂಡು ಒಂದು ಬುಡ್ಡಿಯನ್ನು ಹಚ್ಚಿಕೊಂಡಿರುವುದು ಲೇಸು. ಹೀಗೆ ಈ ಮಾನವತೆಯ ಜನಾಂಗದ ಉನ್ನತಿಗಾಗಿ ಆಧುನಿಕ ಸೌಕರ್ಯಗಳಲ್ಲಿ ವಿದ್ಯುತ್ತೂ ಒಂದು ಉಪಕರಣ. ಇಂಥ ವಿದ್ಯುತ್ತನ್ನು ನಮ್ಮ ಮೈಸೂರು ದೇಶದ ವಿದ್ಯುಚ್ಛಕ್ತಿ ಮಂಡಳಿಯು ಒದಗಿಸಲು ಕಾರ್ಯಗತ ಮಾಡಬೇಕು. ನಮ್ಮ ಹೈದರಾಬಾದ್ ಕರ್ನಾಟಕದ ಸುಮಾರು 14 ಲಕ್ಷ ಜನರಲ್ಲಿ ಈಗಾಗಲೇ ನಾಲ್ಕು ಲಕ್ಷ ಜನರಿಗೆ ವಿದ್ಯುಚ್ಛಕ್ತಿ ದೀಪದ ಸೌಕರ್ಯ ದೊರೆತು ಜೀವನವನ್ನು ಸಾಗಿಸುತ್ತಿದ್ದಾರೆ. ಮಿಕ್ಕ ಹತ್ತು ಲಕ್ಷ ಜನಗಳಿಗೂ ಕೂಡ ವಿದ್ಯುಚ್ಛಕ್ತಿಯನ್ನು ದಯಪಾಲಿಸಿ, ಅದರ ಬೆಳಕಿನಲ್ಲಿ ನಮ್ಮ ದೇಶದ ಜನರ ಜೀವನ ಸ್ವರ್ಗಪ್ರಾಯವಾಗಲೆಂದು ಕಳಕಳಿಯಿಂದ ವಿದ್ಯುಚ್ಛಕ್ತಿ ಮಂಡಳಿಯನ್ನು ಬೇಡಿಕೊಂಡು, ಸಮಯ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

[MR. SPEAKER in the Chair]

Sri K. S. SURYANARAYANA RAO (Mysore City).—Sir, I would like to offer a few comments on the budget proposals placed before us.

In the first instance, I would like to refer to the general policy that some of the Members made on the floor of this House and particularly with reference to the agency that should be in the overall control and management of the generation and distribution of power. At one stage, I was also inclined to think that if the units are combined and managed by a statutory organisation, possibly, this would run with much efficiency and with greater economy and with greater utility from the point of iew of the consumer. But, I am sorry, I have to say with frankness that some of the beliefs that we entertained are now coming to be doubted. Sir, the affairs of the Board is not subject to a closer examination and scrutiny of this House and if the Board's activities are subject to a greater administrative control, the control of this House, legislative scrut ny by this House, I think it would be better.

Mr. SPEAKER.—In what manner does the hon. member suggest greater control over an autonomous body?

Sri K. S. SURYANARAYANA RAO.—That was the thing I was thinking about, Sir. It may be by a statutory provision that the budgets may be placed before the legislature. It is placed, but it is not debated nd discussed. The irregularities are not noted and it is not subject to the Auditor's scrutiny.

Mr. SPEAKER.—How does he blame the Board, he does not discuss it on the Floor of this House ?

Sri K. S. SURYANARAYANA RAO.—I agree with you Sir. I request you to find some time for this House to have a greater scrutiny or the accounts and its affairs being discussed on the floor of this House now that we have raised our voice in this regard. Except the Auditor's report, we have nothing before us to appreciate the good work done by the Board.

Mr. SPEAKER.—Does not the Public Accounts Committee go through it ?

Sri K. S. SURYANARAYANA RAO.—I know that the Committee goes into the matter and the Board is also under a statutory obligation to place its report before the Legislature but I am only sorry to note that very little chance is given to debate the affairs of the Board. Excepting the cryptic four-page explanatory statement we get in the budget, no other help is rendered to the Members of the Legislature. The administration Report is not before us. Statistical details about the progress and development, the programme of work envisaged are all matters not within our knowledge, though we have some jumble of figures.

Mr. SPEAKER.—Is the hon. Member aware that reports are available for study ? If he wants, I will pass them on.

Sri K. S. SURYANARAYANA RAO.—I was not able to get the administration report of the Board. I only said that from the materials placed in our hands, we could get little or no assistance. The Members of this House are statutorily ineligible to become Members of the Board and we have no touch with them.

The point at issue is that the affairs of the Board, as disclosed from the scrappy information placed in our hands, are such that we are not inclined to give them more money than what is given at present. The statutory Board, which we expected to function well, has not functioned to the best of our satisfaction. The Report speaks of the cash position, suspense, non-verification of stocks and, more than all, heavy interest the Board has to pay. Hon'ble Members have made certain suggestions and observations and I do not wish to repeat them. The investments made by the Board leads to a feeling among the Members here that the transactions are confined to a very small section of the financial community.

Mr. SPEAKER.—Has the Member seen the reports of other Electricity Boards ? Large quantities of materials are wanted by the Board and are not to be bought overnight. They have to place orders and expect the material to arrive they must provide money for payment. I do not know. I have never been a member of the Board.

Sri K. S. SURYANARAYANA RAO.—I am inclined to refer you to the Report of 1962-63, page 8, wherein Government has undertaken to find funds under such emergencies. Government have promised cash loan of 3 crores for expansion of power and I. P. and installation of package plan at Bangalore. There is another some of 160 lakhs provided which is proposed to be utilised from the depreciation reserve. There is also sale of Government bonds. I quite agree that in respect of certain commitments they have entered into, funds should be readily available. But, for, this purpose, they should have certain data before them. From the figures that we have, I agree that when we make a commitment, a corresponding provision should be made to meet the commitment. Unfortunately the Board does not seem to be thinking about it at all. As the A. G. has rightly pointed out, having a heavy cash balance and looking to the transactions gone through from 1962 to 1963 no heavier commitment than the cash balance have been transacted by the Board and it is very hard to understand how there could be a chance of heavier drawings from the market or from the Government. The Government continue to give support by way of loans and subsidies. The Board continues to have heavy cash balances and heavy suspense accounts remain with the Board. The Board has stores to the extent of 3½ crores and more. With all these, they had at 3 days' notice 3 crores and another 1 crore as short term deposits. Therefore, the position is that from their own resources they are in a position to meet an emergent demand upto 6 crores. When that is the position in regard to cash and stock, where is the fun of keeping them in a bank. The A. G. says drawing from the market is a mistake. From the common man's point of view I can only say that the loan was not very necessary. If it was

(SRI K. S. SURYANARAYANA RAO)

really necessary, they should have called it in time. They have got 3 crores in fixed deposits on short-term loan. Have they called it in any time. The A. G. says the loan was drawn from the market and immediately afterwards it is deposited in a private bank.

4-00 P.M.

Sir, it leads us to feel that it is just a book adjustment between the Bank and the Board and no cash transaction has taken place. In this book adjustment what is it that we have gained or lost? This Board loses to the extent of lakhs. Taking the overall position so far as this particular transaction is concerned, from whatever they have got to pay, they have paid over and above that. In one instance they have paid, Rs. 2,71,800 and Rs. 2,47,000 in another instance. Therefore, on two occasions, by mere book adjustment, the Board stood to lose something like Rs.5 lakhs. At whose cost is this liability incurred? For all these doings, they want to raise the rates. Why I have been stressing very much on this point is this; I am totally opposed to enhancement of tariff. By a judicious spending of the amounts, I am convinced that by the resources at their disoposal, they could still run at the present level. They may say that the enhahancement of rate is necessary and the tates will have to be uniform. I fail to understand that. Anyway, I am sorry if I say that the emotional integation stretches on the wrong end. We people, who have had this electric energy consumed for 40 years and more, never had we paid so much for the electric energy. They may say that to balance our budget we have to pay. For whose Budget we have got to balance, I do not know. It may be said that thermal power is there and the cost of thermal power will have to be set off against the hydel power. Is it fair to link up the two and say you better pay for the enhanced rates? Tho Board is making a request to subsidise the thermal power. The Government have come forward for the setting up of a Package Plant at Bangalore. Suppose a particular class of people get benefit, they may have to be told that it is a matter of emergency and since additional power is made available the cost is more. Instead of that, they are doing something else. This policy is totally opposed to the general tariff structure because the hydel power is very cheap and it cannot be at the rate in which we are paying. The rates in Mysore are on par or even a little higher than other States. We are supposed to produce power at a cheap rate. Still we have got to pay more. It means, they have not properly utilised the resources available.

They say that they have no particular policy in matters of staggering. We produce agricultural implements in Kunigal and in Mandya. I believe there is a plant that make use of power for producing agricultural implements. To ask them to stagger and ask them to use night power is something which we cannot understand, when there are industries running in the day time. By making some arrangement, we

could give power to the Kunigal Society. Therefore, I fail to understand why such a thing should happen. That has become the policy at present. I suggest very strongly that we must encourage when it is concerning agriculture. We say agriculture should be given top priority. Is this the encouragement we are giving to the Kunigal Society to produce more agricultural implements? Such things should not be allowed to continue.

From the Budget and the statements we have, there is a provision at every stage of the Government subsidising this Board or financing this Board to purchase Irrigation Pump sets which are supposed to be supplied to the consumers, that is the agriculturists. There was a question about it in this House also if I remember correct. In a particular District, I am told, though the Board draws the money from the Government for the purchase of these I. P. sets, the Board has directed the consumers to purchase from a particular society or a particular individual or from a particular firm.

Mr. SPEAKER.—Which is that District?

Sri K. S. SURYANARAYANA RAO.—Sir, I am again subject to correction, it is Mangalore in South Kanara. In South Kanara District, I am told, though the Government make available funds for the purchase of this material, the material is asked to be purchased from somebody else from a particular firm.

Mr. SPEAKER.—Which material?

Sri K. S. SURYANARAYANA RAO.—These I. P. sets. That goes to show that the Board..........

An HON'BLE MEMBER.—Please mention the firm's name also.

Sri K. S. SURYANARAYANA RAO.—I am sorry, I cannot name the firm. Why I am saying this particular instance is this; the Board, many a time, is in the habit of obliging friends. That is the inference I am drawing. The first instance is the market loan, the second is the I. P. sets and the third is if I am permitted to say, is the Transformer business. I am told that the Mysore Electric Factory produces transformers, but only 40 per cent of the production is made available or is consumed by the Electricity Board. Where do they get the rest of the requirement? They must get it naturally from outside. If the Electric Factory itself is capable of supplying not only 40 per cent, but something more, why do we go outside to buy it? The rates of the Electric Factory, I am told, are cheaper. The Accountant General will place that Report also some time.

Sri J. H. SHAMSUDDIN.—It is not mentioned here.

Sri K. S. SURYANARAYANA RAO.—I want a categorical denial from the Minister.

Sri J. H. SHAMSUDDIN.—You are referring to the Accountant General's Report that has to come in the future.

Sri K. S. SURYANARAYANA RAO.—If I may state, it is because I expected a denial from the Minister so that.........

Mr. SPEAKER.—The intention is to elicit information. If they put questions, Government is bound to answer.

Sri J. H. SHAMSUDDIN.—He can ask any question. But, I want to know whether the Accountant General has disclosed what he is going to state.

Mr. SPEAKER.—He says that the Accountant General has reviewed that report.

Sri K. S. SURYANARAYANA RAO.—May I draw his attention to the previous report ? I will pass on a copy of 1961 and 1962, wherein the Accountant General has also noted this. I do not like to say.........

Mr. SPEAKER.—What is that Report ?

Sri K. S. SURYANARAYANA RAO.—It is the Accountant General's Report. I am referring to the report relating to the year 1961–62.........

Mr. SPEAKER.—If the Hon'ble member would like to have any assistance, I have got from the library the Mysore State Electricity Board–Review by the Chairman for 1960–61. He may make use of it.

(The book was passed on to the Hon'ble Member Sri Snryanarayana Rao.)

Sri K. S. SURYANARAYANA RAO.—Therefore Sir, this Board should have persons who are above approach. That is the reason why Section 9 of the Electricity Board Act... .....

Mr. SPEAKER.—Does he mean above 'approach' or above 'reproach' ?

Sri K. S. SURYANARAYANA RAO.—Sir, it is both. They must be above reproach and above approach also. They should be inaccessible to the extent of their being influenced. That is the reason why the State Electricity Board Act section 9 makes provision for any person having any interest in any dealing, should not be a Member. Sir, I believe the time has come when this section will have to be amended. At present it is only such of the persons who have interest in matters of business connected with the production, distribution or supplying electrical energy—to that extent only one is prohibited from being a Member. But the other aspects are not covered under the definition or disqualification clause. I believe it has to be added.

Sri K. LAKKAPPA (Hebbur).—If the Hon'ble Member yields, the Hon'ble Member is pleased to say that some interested members are on the Board. He may apprise the House if there is any one like that.

Sri K. S. SURYANARAYANA RAO.—I never said that there were people interested.........

Mr. SPEAKER.—What the member said was that the Board was showing some favour to Mangalore District. That he said with regard to pumpsets, I would like to know whether the Electricity Board has anything to do with regard to the pump sets which he referred to.

Sri K. S. SURYANARAYANA RAO.—Sir, people who have interest in the Board are the persons who have interest in that institution,—if that should satisfy the House. You cannot ask me to give out names. Therefore, I do not like to mention names. I say this much that persons interested in the Board are the persons interested in these organisations. That is how I put it. I never said that a particular member has interest. Even there, if a person has any interest, then it must be disclosed and it will

have to be recorded in the Minutes of the Board meeting. I do not know whether the Members who have interest, have disclosed their interest whether that is recorded in the proceedings of the Board Meetings. These things are not before us. I will go through the Book so kindly sent by the Speaker and I will make use of it for some other occasion.

Mr. SPEAKER.—It is the Library copy. He cannot take it away. It is the property of every one.

Sri K. S. SURYANARAYANA RAO.—It is of the year 1960-61. We are at a loss to know the latest information. We have to refer to things of the past. The latest reports if any are not made available to us.

Therefore, Sir, this matter is a very serious one and I would request the Government to look into and see that matters are set right or to see that the Board as constituted has to keep up to certain...

Sri J. H. SHAMSUDDIN.— standards.

Sri K. S. SURYANARAYANA RAO.—I do not want to use 'standards.'

Sri J. H. SHAMSUDDIN.—'Norms.'

Sri K S SURYANARAYANA RAO.—Yes, norms.

Mr. SPEAKER.—The Hon'ble Minister must make note of the points and reply in proper time and not interject like that.

Sri K S. SURYANARAYANA RAO.—The Minister was pleased to interject earlier to say that the Board is making profit. May I invite his attention to the paragraphs and pages where it is said that the Board is running under loss? This Board is not in a position to provide statutory deduction that ought to be made under section 67 of the Electricity Board Act. Under section 67 of the Electricity Board Act, depreciation reserve, interest on depreciation, contribution to general fund, and interest on loan etc. These are the statutory obligations of the Board. My friend read some page and said it shows a surplus revenue of 30 lakhs. May I draw his attention to the next sentence where it is said 'no profits are expected for 1963-64 and the appropriations are not for this year. So, Sir, this Board is neither making profit nor balancing its budget, but is working under loss.

Mr. SPEAKER.—The basis I believe for Electricity Board generally is that it should work on a 'no profit and no loss basis'.

Sri K. S SURYANARAYANA RAO.—Sir, the Government have advanced a loan and guaranteed another quarter per cent. Now it comes to 5¼ per cent interest. Therefore, Sir, the cost or the working expenditure of the Board gets very much enhanced by this heavy interest that they have got to pay to the Government. I do not know Sir, if the Board can seek the Government's permission to have this rate of interest reduced.

Mr. SPEAKER.—The Reserve Bank controls it, not only the State Government. Both cannot float the loan.

Sri K. S. SURYANARAYANA RAO.—For the development of electricity, Government makes a provision and make available funds to the Board for a particular project. For example, the generation of

(SRI K. S. SURYANARAYANA RAO)

electrical energy, hydel, thermal or otherwise. When such is the position, naturally they come to the market to raise loan. Government raises loan at between 4-4½ per cent. Even granting that, they may be entitled to ¼ per cent for the working expenditure

Mr. SPEAKER.—It is called centage.

Sri K. S. SURYANARAYANA RAO.—Even then, what the Government is charging to the Board is much more than what the Board is able to bear. Therefore, there will be heavy loss and because there is loss, they say, we will raise the tariff, because the consumer is the milch-cow! Without reference to anybody, they have raised the tariff, without any protest from anybody, it is being collected in such an unnoticed way.

Mr. SPEAKER.—Evidently the Hon'ble Member is likely to take some more time.

There is a request made to me that the 2nd October is a holiday and Sessions may be held in the morning tomorrow. Is that the pleasure of the House?

HON'BLE MEMBERS.—Yes.

Mr. SPEAKER.—Then the House will meet tomorrow at 8.30 A.M.

Sri K. S. SURYANARAYANA RAO.—The main feature of the budget as mentioned on page 5—the budget proposal seems to suggest that the increased revenue due to the revision of tariff is offset by investment on capital works. That is not the case. It is rather not quite correct, because the impression that one would draw by looking at it, is, this enhanced rate is there because there is development on the other side as mentioned there itself. But if you go through the figures, you find that for these things Government make provision, they make funds available. So, it is from out of the loans they get from Government that these development works are taken and it is only to cover up certain of the losses that they have incurred in so many ways that I have referred to, this enhanced tariff is possibly sufficient. I am afraid even that is not sufficient. The tariffs have already gone up and possibly it is the last straw on the camel's back and it is breaking. If we add one more tax by way of enhanced tariff, possibly the camel will break because even under the Third Five Year Plan even asuming that there is no emergency, whatever taxes, whatever resources we should have tapped even under the Five Year Plan, even during the third year of the Plan, we have realised that. So, when we have taxed the general mass to an extent as provided under the Third Five-Year Plan even during the third year itself, additional tariffs is a thing that we cannot understand because under the Third Five Year Plan, the tae that could be collected, whether it is a cess, tax or tariff, whatever it is in whatever from it is, it is a tax we will have to admit because it is a thing the consumer will have to pay for. It is not as

if the cost of material has gone up. The capacity of the person to pay has been very much limited because of the rise in the cost of living, the rise in the cost of consumer prices. The wages come up because the cost of living increases. Therefore, this is a vicious circle. So long as we go on increasing the taxes or tariffs, the consequent reflection we will find in other spheres because immediately there will be a demand for higher wages. The fortunate class to-day is the Government servants, because they could make a demand to the Government and say that the cost of tving has gone up because, the prices have gone up, therefore give us a little more. What about the millions who are not under the Government patronaga. What is the average cost of living and the average earning, even granting there has been steady rise in the national income. The tax burden has come to a maximum and I wish the Electricity Board will take care not to impose additional burden on the tax payer. We are told that thermal stations are working in some integrated areas, Companies are working. I got a reference some time back that the hydel power is made available to those Companies and those Companies sell it to the consumers in turn. What is the rate that they charge ? The rate they get from Government is much cheaper than the rate that they charge. Even granting for all the maintenance, depreciation and other things, it is much more than what those people in those areas can bear. Therefore, what is the fun of making available hydel power to a thermal station proprietor and asking him to distribute it at a higher rate ? We could as well take over those installations and run them ourselves. If hydel power is not available, thermal unit will have to work ; let it be subsidised by the State Government and sold at a rate uniform to all persons. That is not done. Therefore, all these anomalies go to increase the cost of working of the Electricity Board and consequently they say that they have incurred Rs. 21 lakhs or so loss and therefore they have to offset some of the thing against that. Therefore, I am inclined to believe that the affairs and the way the Board has been functioning, is a thing that needs greater scrutiny and greater control by Government and if they effect the economy measures that are suggested from time to time on the floor of this House and also outside in several Reports, we can safely say that we could run this on no profit, no loss basis. They say that they are doing development. I would like to ask the Minister to look to the frequency conversion, what is the amount you have provided for ? Capital expenditure for frequency conversion was Rs. 10 lakhs last year 1962-63 and revised budget for 1962-63 was again Rs. 10 lakhs, but the budget proposals for 1963-64 is only Rs. 6 lakhs. This is the development that we are doing. Is it that we are going at pace much more than we are expecting to do or are we staggering even here also. There has been staggering throughout. The net result is a loss of Rs. 21,75,000. Therefore, Sir, I will refer to one more point at page 61. Whether it is a private bank or Government or the Life Insurance Corporation, that interest we are paying is Rs. 2, 50,000. This heavy interest is the thing that eats away the vitals of this Board and no efforts have been made to reduce the interest. Sir,

(SRI K. S. SURYANARAYANA RAO)

the Table gives credit to the Depreciation Reserves of 180 lakhs. Here, there is a sentence which says, "since we do not make profit, this appropriation is not made". I do not know what appropriation it is.

4-30 P.M.

Sir, I reiterate again that the I. P. sets and other things are to be subsidised by the Government because it is for the development of food production; the tariff rates should be rationed as between hotel and family power. If these things are done, the budget of the Board can be balanced. From the cash balance we have our credit, the loans should be discharged early. By these things, we can run this administration economically and on a no profit and no loss basis. Therefore, it does not call for any enhancement of tariffs.

[MR. DEPUTY SPEAKER in the Chair.]

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಭೆಯ ಮುಂದೆ ಸರ್ಕಾರದವರು ಮೈಸೂರು ರಾಜ್ಯ ವಿದ್ಯುಚ್ಛಕ್ತಿ ಮಂಡಲಿಯ ಪರವಾಗಿ ಮಂಡಿಸಿರುವ ಈ 1963-64 ನೇ ಆಯವ್ಯಯ ಅಂದಾಜು ಪಟ್ಟಿ ಮತ್ತು 1962-63ನೆಯ ಪರಿಷ್ಕೃತ ಆಯವ್ಯಯ ಪಟ್ಟಿಯ ಮೇಲೆ ಮಾತನಾಡುತ್ತ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ.

ಮೈಸೂರು, ಭಾರತದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಿ ಅದನ್ನು ಬಳಕೆಗೆ ತಂದ ರಾಜ್ಯಗಳಲ್ಲಿ ಮೊದಲನೆಯದು ಎಂದು ಹೇಳಬಹುದು. ಆದರೆ ಸ್ವಾತಂತ್ರ್ಯಾನಂತರದಲ್ಲಿ ವಿದ್ಯುಚ್ಛಕ್ತಿ ಪೂರೈಕೆಯ ವಿಷಯದಲ್ಲಿ ಆಗಿರತಕ್ಕ ಪ್ರಗತಿ ಏನೇನೂ ಸಾಲದು. ಕಳೆದ ಎರಡು ಮೂರು ವರ್ಷಗಳಿಂದ ವಿದ್ಯುಚ್ಛಕ್ತಿಯ ಕ್ಷಾಮ ರಾಜ್ಯಕ್ಕೆ ತಟ್ಟಿದೆ. ಮೂರನೆಯ ಪಂಚವಾರ್ಷಿಕ ಯೋಜನೆ ಕಾರ್ಯಗತ ವಾಗುವ ಕಾಲಕ್ಕೆ ರಾಜ್ಯದ ಕೈಗಾರಿಕಾ ಪ್ರಗತಿಯಾಗಲಿ, ಅಥವಾ ನಿತ್ಯ ಬಳಕೆಗಾಗಿ ಉಪಯೋಗಿಸತಕ್ಕ ದೀಪ ಮತ್ತು ಅದರ ಬಳಕೆಗಾಗಲಿ ಅಥವಾ ಕೃಷಿ ಉತ್ಪನ್ನವನ್ನು ಹೆಚ್ಚಿಸುವ ವಿಷಯದಲ್ಲಿ ವಿದ್ಯುಚ್ಛಕ್ತಿಯ ಬಳಕೆಗಾಗಲಿ ಇವತ್ತು ತೀವ್ರವಾದ ಕೊರತೆಯುಂಟಾಗಿದೆ. ಈ ಕ್ಷೇತ್ರಗಳಲ್ಲಿ ಪ್ರಗತಿ ತೀರ ಕುಂಠಿತವಾಗಿದೆ. ಸಮಾಜವಾದವನ್ನು ನಾವು ತರಬೇಕು ಅಂತ ಇದ್ದರೆ ಮೊದಲನೆಯದಾಗಿ ಎಲ್ಲ ಉತ್ಪಾದನೆ ಮತ್ತು ಹಂಚುವಿಕೆಯ ವ್ಯವಸ್ಥೆಯನ್ನು, ಸಾಧನಗಳನ್ನು ನಾವು ರಾಷ್ಟ್ರೀಕರಣ ಮಾಡಬೇಕಾಗುತ್ತದೆ. ಹಾಗೆಯೇ ಸಮಾಜೀಕರಣ ಮಾಡಬೇಕಾಗುತ್ತದೆ. ವಿದ್ಯುಚ್ಛಕ್ತಿ ಹಳೆಯ ಮೈಸೂರಿನಲ್ಲಿ ಸರ್ಕಾರದವರೇ ನಡೆಸಿಕೊಂಡು ಹೋಗತಕ್ಕ ಒಂದು ಉದ್ಯಮವಾಗಿತ್ತು. ಈಗ ಈ ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಹಂಚುವಿಕೆಯ ಕಾರ್ಯವನ್ನು ನಿರ್ವಹಿಸುವುದಕ್ಕಾಗಿ ರಾಜ್ಯ ಸರ್ಕಾರದವರು ಒಂದು ಮಂಡಳಿಯನ್ನು ರಚನೆ ಮಾಡಿದ್ದಾರೆ. ನಾಳೆ ಅಕ್ಟೋಬರ್ ಒಂದನೆಯ ತಾರೀಖಿಗೆ ಈ ಮಂಡಳಿಗೆ ಆರು ವರ್ಷ ತುಂಬುತ್ತದೆ. 1957ನೆ ಇಸವಿ ಅಕ್ಟೋಬರು ಒಂದನೆಯ ತಾರೀಖು ಈ ಮಂಡಳಿ ಅಸ್ತಿತ್ವಕ್ಕೆ ಬಂತು. ಅದು ಅಸ್ತಿತ್ವಕ್ಕೆ ಬರುವಾಗ 28,49,71,666 ರೂಪಾಯಿಗಳ ಬಂಡವಾಳ ಈ ಮಂಡಳಿಗೆ ಸರ್ಕಾರದಿಂದ ಬಂದಿದೆ. ಇಲ್ಲಿ ಮಂಡಳಿಯನ್ನು ರಚನೆ ಮಾಡುವ ವಿಷಯದಲ್ಲಿ ಮಾನ್ಯ ಸೂರ್ಯನಾರಾಯಣರಾಯರು ಸೆಕ್ಷನ್ 9ನ್ನು ಸಭೆಯ ಗಮನಕ್ಕೆ ತಂದರು. ಈ ಮಂಡಳಿಯಲ್ಲಿರತಕ್ಕ ಸದಸ್ಯರನ್ನು ಸಭೆ ಗಮನಿಸಿದರೆ ಒಳ್ಳೆಯದು ಎಂದು ನನಗನ್ನಿಸುತ್ತದೆ. ಇದರಲ್ಲಿ ಶ್ರೀ ಟಿ. ಎ. ಪೈ ಮತ್ತು ಜಿನಾಭಾಯಿ ದೇವಿದಾಸ್ ಖಾಸಗಿ ಸದಸ್ಯರು. ಅಧ್ಯಕ್ಷರು ಖಾಸಗಿಯವರು. ಇನ್ನು ಮುಂದೆ ಬೇರೆಯವರನ್ನು ನೇಮಕ ಮಾಡಿದ್ದಾರೆ. ಅದಕ್ಕೆ ಒಂದು consultative council ಎಂದು ಒಂದು ಮಂಡಳಿ ಇದೆ. ಇನ್ನೂ ಬೇರೆ ಸಬ್ ಕಮಿಟಿಗಳೆಂದು ಅವರು ಆಗಾಗ ಮಾಡುತ್ತಾರೆ. Service Conditions Committee ಎಂದು ಒಂದು ಇದೆ. ಅದಕ್ಕೆ ಜಿನಾಭಾಯಿ ದೇವಿದಾಸರು ಅಧ್ಯಕ್ಷರು.

ಈ ಬೋರ್ಡನ್ನು ರಚನೆ ಮಾಡುವಾಗ ಈ ಮಂಡಲಿಯಲ್ಲಿ ಕೆಲಸ ನಿರ್ವಹಿಸುವಂಥ ಸದಸ್ಯರಿಗೆ ಯಾವದೇ ಬ್ಯಾಂಕಿನ ಇಂಟರೆಸ್ಟ ಇರಬಾರದು, ಆಸಕ್ತಿ ಇರಬಾರದು ಎಂದು ಸ್ಪಷ್ಟವಾದ ಅಭಿಪ್ರಾಯ

ವಿದೆ. ಸ್ವಾಮಿ, ಬಹಳ ಆಶ್ಚರ್ಯವಾಗುತ್ತದೆ, ಈ ಮಂಡಲಿ ಯಾವ ರೀತಿ ಕೆಲಸ ಮಾಡಿಕೊಂಡು ಹೋಗುತ್ತಿದೆ ಎಂಬುದನ್ನು ನೋಡಿದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ದೇಶದಲ್ಲಿ ನೇಮಕವಾದ ಎಲ್ಲ ಮಂಡಲಿಗಳಲ್ಲಿ ಭ್ರಷ್ಟಾಚಾರ ಆರಂಭವಾಯಿತು. ಅಂಥ ಭ್ರಷ್ಟಾಚಾರಕ್ಕೆ ಈ ಇಲೆಕ್ಟ್ರಿಸಿಟಿ ಬೋರ್ಡು ಒಂದು ಜೀವಂತ ಸಾಕ್ಷಿಯಾಗಿದೆ ಎಂದು ಹೇಳಬಹುದು. ಕಳೆದ ಮೂರು ವರ್ಷದ ಆಡಳಿತ ರಿಪೋರ್ಟು ಕೊಟ್ಟಿದ್ದಾರೆ. ರಾಜ್ಯದ ಜನತೆಯ ಪರವಾಗಿ ಮಾನ್ಯ ಸಭೆಯ ಪರವಾಗಿ ಆಡಿಟ್ ಮಾಡಿಸಿರುವುದರಿಂದ ಈ ಇಲಾಖೆಗೆ ಕೃತಜ್ಞತೆ ಅರ್ಪಿಸಲು ಇಷ್ಟಪಡುತ್ತೇನೆ. ಇಂದು ನಾವು ಇಂಥ ಮೂರು ಬೋರ್ಡುಗಳನ್ನು ಇಲ್ಲಿ ನೋಡಬಹುದು. ಮೈಸೂರು ಸ್ಟೇಟ್ ಇಲೆಕ್ಟ್ರಿಸಿಟಿ ಬೋರ್ಡ್, ಖಾದಿ ಮತ್ತು ವಿಲೇಜ ಇಂಡಸ್ಟ್ರೀಸ್ ಬೋರ್ಡ. 1957 ಅಕ್ಟೋಬರ ಒಂದರಿಂದ ಇನ್ನೂ ಲೆಕ್ಕಪತ್ರ ಕಂಪ್ಲೈಲೇಷನ್ ಆಗಿಲ್ಲ. ಇದನ್ನು ಯೋಚನೆ ಮಾಡಿದರೆ ಯಾವ ರೀತಿ ನಾವು ಕೆಲಸ ಮಾಡಿಕೊಂಡು ಹೋಗುತ್ತಿದ್ದೇವೆ ಎಂಬುದು ಕಂಡು ಬರುತ್ತದೆ. 28 ಕೋಟಿ ರೂಪಾಯಿ ಆಸ್ತಿಯನ್ನು ಅವರಿಗೆ ಕೊಟ್ಟು ವಿದ್ಯುತ್ ಶಕ್ತಿ ಪೂರೈಕೆಯಂಥ ಅತ್ಯಂತ ಮಹತ್ವದ ಮತ್ತು ಆಧುನಿಕ ಜೀವನದಲ್ಲಿ ಎಲ್ಲ ಪ್ರಗತಿಗೆ ಅದು ಅತ್ಯಗತ್ಯವಾಗಿ ಬೇಕಾಗಿರುವ ವಿದ್ಯುತ್ ಶಕ್ತಿ ಹಂಚುವ ವ್ಯವಸ್ಥೆಯನ್ನು ಮಾಡುವುದಕ್ಕೆ ಈ ಮಂಡಲಿ ಏನು ಕೆಲಸ ಮಾಡುತ್ತಾ ಇದೆ ಎನ್ನುವುದನ್ನು ಈ ಒಂದು ಮಾತು ಸ್ಪಷ್ಟಪಡಿಸುವುದಲ್ಲದೆ ಇವರು ತಮ್ಮ ಹೊಣೆಯನ್ನು ಸರಿಯಾಗಿ ನಿರ್ವಹಿಸಲಿಲ್ಲ, ಈ ಮಂಡಲಿಯ ಕೆಲಸ ಕಾರ್ಯಗಳು ತೃಪ್ತಿಕರವಾಗಿಲ್ಲ, ಇಲ್ಲಿ ಏನು ನಡೆಯುತ್ತಿದೆ ಇದರ ಬಗ್ಗೆ ಸರಕಾರಕ್ಕಾಗಲಿ ಮಂಡಲಿಗೆ ಆಗಲಿ ಏನೂ ಆಸಕ್ತಿ ಕಂಡು ಬರುವುದಿಲ್ಲ ಎಂಬುದು ಈ ಮಾತುಗಳಿಂದ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ನಾನು ಮೊದಲೇ ಹೇಳಿದ ವಿಷಯ ಅಂದರೆ ಇಬ್ಬರು ಖಾಸಗೀ ಸದಸ್ಯರು ಈ ಬೋರ್ಡಿನಲ್ಲಿ ಇದ್ದಾರೆ. ಈ ವಾಕ್ಯವನ್ನು ನಾನು ಮೊದಲು ಓದುತ್ತೇನೆ.

"It is not possible to work out the exact loss on account of this transaction."

ಈ ಪ್ರೈವೇಟ್ ಬ್ಯಾಂಕುಗಳು ಯಾವ ಯಾವವು ಸಾಮಿ ? ಈ ಖಾಸಗಿ ಸದಸ್ಯರು ಯಾರು ? ಈ ಎರಡು ವಿಷಯಗಳ ಬಗ್ಗೆ ಶ್ರೀಮಾನ್ ನಿಜಲಿಂಗಪ್ಪನವರು ಜವಾಬ್ದಾರರು ಆಗಿರುವುದರಿಂದ ಗೌರವದಿಂದ ಜನತೆ ಮುಂದೆ ಹೊಣೆಗಾರಿಕೆಯಿಂದ ಹೇಳಿಕೆ ಕೊಡಬೇಕೆಂದು ನಾನು ಇವರನ್ನು ಕೇಳಿಕೊಳ್ಳುತ್ತೇನೆ. ನಮ್ಮ ದುರದೃಷ್ಟವಶಾತ್ ಈಗ ಸಭೆಯಲ್ಲಿ ಅವರು ಹಾಜರಿಲ್ಲ. ಇದು ಯಾವ ಡಾಲ್ಮಿಯಾ ತನ್ನ ಹಣಕಾಸಿನ ವ್ಯವಹಾರದಲ್ಲಿ ಸಿಕ್ಕುಬಿಟ್ಟು ಜೈಲಿನಲ್ಲಿ ಇದ್ದಾನೆ, ಯಾವ ಮುಂಧ್ರಾ ತನ್ನ ಹಣಕಾಸಿನ ವ್ಯವಹಾರದಲ್ಲಿ ಸಿಕ್ಕು ಬಿದ್ದು ಜೈಲಿಗೆ ಹೋಗಿದ್ದಾನೆ ಅಂಥಾದ್ದೇ ವ್ಯವಹಾರ ಇದು ಎಂದು ಘಂಟಾಘೋಷವಾಗಿ ಈ ಸಭೆಯಲ್ಲಿ ಹೇಳುತ್ತೇನೆ. ಈ ವ್ಯವಹಾರವನ್ನು ಆಮೂಲಾಗ್ರ ವಿಚಾರ ಮಾಡುವುದಕ್ಕೆ ಒಬ್ಬ ಸುಪ್ರೀಂ ಕೋರ್ಟು ಜಡ್ಜ ನೇಮಕ ನಿಜಲಿಂಗಪ್ಪನವರು ಮಾಡಿದರೆ ಈ ವ್ಯವಹಾರದ ಅಂತರ್ಯ ಹೊರಗೆಡವಬಹುದು. ಈ ಖಾಸಗಿ ಸದಸ್ಯರನ್ನು ನಾಳೆಯಿಂದಲೇ ಮಂಡಲಿಯಿಂದ ತೆಗೆದುಹಾಕಬೇಕು. ಇಲ್ಲದಿದ್ದರೆ ನಾವು ಇದಕ್ಕ ಬೇರೆ ಅರ್ಥ ಮಾಡಬೇಕಾಗುತ್ತದೆ. ಇಂಥ ಭ್ರಷ್ಟಾಚಾರವನ್ನು ಯಾವ ಮಂಡಲಿಯಲ್ಲಿಯೂ ನಾವು ಸಹಿಸಲಿಕ್ಕೆ ಸಾಧ್ಯವಿಲ್ಲ. ಇದರಲ್ಲಿ ಎಷ್ಟು ನಷ್ಟ ಆಗಿದೆ ಈ ವ್ಯವಹಾರ ಹೇಗೆ ನಡೆಯಿತು, ಮಂಡಲಿಯ ಅಧ್ಯಕ್ಷರ ಪಾತ್ರವೇನು, ರಾಜ್ಯ ಸರಕಾರದ ಪಾತ್ರವೇನು ಅದನ್ನು ಈಗ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಆದರೆ ಸರಕಾರದ ಮೇಲೆ ನೇರವಾಗಿ ಮಾಡುತ್ತೇನೆ, ಇದಕ್ಕೆ ಜವಾಬ್ದಾರಿಯಿಂದ ಉತ್ತರ ಕೊಡಬೇಕು. ರಾಜ್ಯ ಸರಕಾರ ಎಲ್ಲ ಹೊಣೆಗಾರಿಕೆಯಿಂದ ಜನತೆಯ ಮುಂದೆ ವಿವರ ಇಡಬೇಕು ಎಂದು ಮಾನ್ಯ ಸಭೆಯಲ್ಲಿ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಇನ್ನು ಅನೇಕ ಮಾನ್ಯ ಸದಸ್ಯರು ಅನೇಕ ಅಂಶಗಳನ್ನು ಸಭೆಯ ಗಮನಕ್ಕೆ ತಂದಿದ್ದಾರೆ ಅವುಗಳನ್ನು ಪುನಃ ಹೇಳುವುದಕ್ಕೆ ನಾನು ಇಷ್ಟ ಪಡುವುದಿಲ್ಲ.

During the annual account of stores for the period ended 31st March 1960 shortages of value of Rs. 6.08 lakhs were noticed but no action was taken neither to fix personal responsibility or to effect recoveries where personal responsibility has already been fixed. Other irregularities in the maintenance of suspense accounts had come to notice.

ಇನ್ನೂ ಅನೇಕ ವಿಷಯಗಳು ಇದರಲ್ಲಿ ಇವೆ. ಬೆಳಕಿಗೆ ಬಂದಿರತಕ್ಕಂಥ ಅಕ್ರಮಗಳು ಎಷ್ಟಿವೆ, ಬೆಳಕಿಗೆ ಬಾರದೇ ಇರತಕ್ಕಂಥ ಅಕ್ರಮಗಳು ಎಷ್ಟು ಇವೆ ಎಂಬುದನ್ನು ಕಂಡು ಹಿಡಿಯುವ ಮೊದಲು

(ಶ್ರೀ ಎಸ್. ಗೋಪಾಲ ಗೌಡ)

ರಾಜ್ಯ ಸರಕಾರ ವಿಚಾರಣೆಗೆ ಗುರಿ ಪಡಿಸಿ ಇದನ್ನು ಸರಿಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಕೆಲವು ಖಾಸಗಿಯಾಗಿ ವಿದ್ಯುತ್ತನ್ನು ಒದಗಿಸತಕ್ಕಂಥ ಕಂಪನಿಗಳು ಇವೆ. ವಿದ್ಯುತ್ ಶಕ್ತಿ ಮಂಡಲಿ ವರದಿಯಲ್ಲಿ ಹೇಳಿರುವ ಹಾಗೆ ಮೈಸೂರು ರಾಜ್ಯದಲ್ಲಿ ಈಗ ಲೈಸೆನ್ಸ್ ಹೊಂದಿರತಕ್ಕಂಥ 17 ಕಂಪನಿಗಳು ಇವೆ. ಈ ಕಂಪನಿಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಸಾಕಷ್ಟು ಸಾರ್ವಜನಿಕರ ಆಂದೋಲನ ನಡೆಯುತ್ತಿದೆ. ಈಗ ಇರತಕ್ಕ ಕಾನೂನು ಪ್ರಕಾರ ರಾಷ್ಟ್ರೀಕರಣ ಮಾಡುವುದು ಕಷ್ಟವಾಗುತ್ತದೆ. ರಾಷ್ಟ್ರೀಕರಣ ಮಾಡಲು ಒಂದು ಸೂಕ್ತವಾದ ಕಾನೂನನ್ನು ಸರಕಾರ ತರಬೇಕೆಂದು ಸಲಹೆ ಕೊಟ್ಟಿದ್ದಾರೆ. ನಾನು ವಿದ್ಯುತ್ ಪೂರೈಕೆ ಮಾಡತಕ್ಕಂಥ ಅನೇಕ ಖಾಸಗಿ ಕಂಪನಿಗಳನ್ನು ನೋಡಿದ್ದೇನೆ. ಬೆಳಗಾಂವ, ಗುಲಬರ್ಗಾ, ಬೀದರ್, ಮತ್ತು ಇನ್ನೂ ಅನೇಕ ಕಡೆ ಇಂಥ ಕಂಪನಿಗಳಿವೆ. ಬೆಳಗಾಂವ ಜನರು ಈ ಕಂಪನಿ ವಿದ್ಯುತ್ ಪೂರೈಸುವ ವಿಷಯದಲ್ಲಿ ಅವರು ಹಾಕಿರತಕ್ಕಂಥ ರೇಟು ಮತ್ತು ಇತರ ವಿಷಯಗಳ ಬಗ್ಗೆ ಪ್ರತಿಭಟನೆ ಮಾಡಿ ಸರಕಾರಕ್ಕೂ ಮತ್ತು ಸಾರ್ವಜನಿಕರಿಗೂ ಮನವಿ ಸಲ್ಲಿಸಿದ್ದಾರೆ. ಇವರ ಕಷ್ಟ ಏನು ಇದೆ ಎಂಬುದನ್ನು ತಿಳಿದುಕೊಂಡು ನಿವಾರಣೆ ಮಾಡಬೇಕು. ಈ ಕಂಪನಿ ಮಾಲೀಕರು ಸರಕಾರದ ಮೇಲೆ ಪ್ರಭಾವ ಹೊಂದಿದ್ದಾರೆ. ಈ ಕಂಪನಿಗಳನ್ನು ಸರಕಾರ ರಾಷ್ಟ್ರೀಕರಿಸದೆ ಇರುವುದಕ್ಕೆ ಇದೂ ಒಂದು ಕಾರಣ ಎಂದು ನಾನು ತಿಳಿದುಕೊಂಡಿದ್ದೇನೆ. ಅತಿ ಆವಶ್ಯಕವಾದ ಮತ್ತು ಜನತೆಯ ನಿತ್ಯ ಬಳಕೆಯ ವಸ್ತು ಆಗಿರತಕ್ಕಂಥ ವಿದ್ಯುತ್ ಶಕ್ತಿಯನ್ನು ಬಹು ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕರ ಬಳಕೆಗೆ ಪೂರೈಸುವುದಕ್ಕೆ ಬಹು ಸಣ್ಣ ಪ್ರಮಾಣದಲ್ಲಿ ಇರತಕ್ಕಂಥ ಖಾಸಗಿ ಕಂಪನಿಗಳಿಗೆ ದೊರಕುವಂತೆ ಮಾಡಿರತಕ್ಕಂಥಾದ್ದು ಸರಿಯಲ್ಲ.

ಅವುಗಳನ್ನೂ ನಾವು ರಾಷ್ಟ್ರೀಕರಣ ಮಾಡಬೇಕಾಗುತ್ತದೆ ಅದಕ್ಕೆ ಮಾನ್ಯ ಸಭೆಯ ಮುಂದೆ ಸರ್ಕಾರದವರು ಆದಷ್ಟು ಬೇಗ ಮಸೂದೆಯನ್ನು ತಂದು ಆ ಕಂಪನಿಗಳನ್ನು ರಾಷ್ಟ್ರೀಕರಿಸಿ ಆ ಭಾಗದ ಜನರು ಬಳಕೆದಾರರು ಯಾರು ಇದ್ದಾರೆ ಅವರಿಗೆ ಈಗ ಖಾಸಗಿ ಕಂಪನಿಯವರಿಂದ ಆಗತಕ್ಕ ತೊಂದರೆ, ಅನ್ಯಾಯ ಇವುಗಳಿಂದ ಅವರನ್ನು ಪಾರುಮಾಡಿ ಆ ಜನರಿಗೆ ರಾಜ್ಯದ ಬೇರೆ ಕಡೆಗಳಲ್ಲಿ ಯಾವ ರೀತಿಯ ವಿದ್ಯುಚ್ಛಕ್ತಿ ಒದಗುವಿಕೆ ಇದೆಯೋ ಅದೇ ರೀತಿ ಒದಗುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸ್ವಾಮಿ, ವಿದ್ಯುಚ್ಛಕ್ತಿ ಮಂಡಲಿಯವರು ವಿದ್ಯುಚ್ಛಕ್ತಿಯ ಅಭಾವದಿಂದ ಕ್ಷಾಮದಿಂದ ಸ್ಟ್ಯಾಗರಿಂಗ್ ಅಂತ ಒಂದು ನಿಯಮವನ್ನು ತಂದಿದ್ದಾರೆ. ಆ ನಿಯಮದ ಪ್ರಕಾರ ಕೆಲವು ಕಡೆ ರಾತ್ರಿ ಮಾತ್ರ ಯಂತ್ರಗಳನ್ನು ನಡೆಸಬೇಕು ವಿದ್ಯುಚ್ಛಕ್ತಿ ಬಳಸಬೇಕೆಂದು ಒಂದು ನಿಯಮ ಇಟ್ಟುಕೊಂಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಮಾನ್ ಎಂ. ಸಿ. ಬಸಪ್ಪನವರು ಹೇಳಿದರು ಐ. ಪಿ. ಸೆಟ್ಟುಗಳಿಗೆ ರಾತ್ರಿ 10 ಗಂಟೆ ಆದಮೇಲೆ ಬೆಳಿಗ್ಗೆ 6 ಗಂಟೆಯವರೆಗೂ ಕೊಡುತ್ತೇವೆ ಎಂದು ನಿಯಮ ಮಾಡಿಕೊಂಡಿದ್ದಾರೆ ಅದು ಅಷ್ಟು ಸರಿಯಾದ್ದಲ್ಲ ಎಂದು. ಈಗ ಅಮೆರಿಕಾದಲ್ಲಿ ಇದ್ದ ಹಾಗೆ ದೀಪ ಹಾಕಿಕೊಂಡು ರಾತ್ರಿ ಹೊತ್ತು ಫಾರಂನಲ್ಲಿ ಅಥವಾ ಗದ್ದೆಯಲ್ಲಿ ಕೆಲಸ ಮಾಡವಷ್ಟು ನಮ್ಮ ರೈತರು ಮುಂದುವರಿದಿಲ್ಲ, ಕ್ರಮೇಣ ಮುಂದುವರಿಯಬಹುದು ಅಂತಹ ಸಂದರ್ಭದಲ್ಲಿ ಅವರು ನೀರನ್ನು ಉಪಯೋಗಿಸಿಕೊಳ್ಳಬಹುದು. ಈಗ ನೀರನ್ನು ರಾತ್ರಿಯೇ ಪಡೆಯಬೇಕೆಂದರೆ ಬಹಳ ಸಲ ಈ ವ್ಯವಸ್ಥೆ ಬೇಡ ಎನ್ನುವಂತಹ ಅಭಿಪ್ರಾಯ ಕೂಡ ಬರಬಹುದು. ಆದ್ದರಿಂದ ಸ್ಟ್ಯಾಗರಿಂಗ್‌ನಲ್ಲಿ ಯಾವ ಒಂದು ನಿಯಮವನ್ನು ಮಾಡಿಕೊಂಡಿದ್ದೀರಿ ಅದು ಪರಿಪೂರ್ಣವಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವರಿಗೆ ಕಷ್ಟವಾಗಬಹುದು. ಈಗ ಹೈ ಪವರ್ ಕನ್‌ಸ್ಯೂಮರ್ಸ್ ಏನಿದ್ದಾರೆ ಅವರು ಒಪ್ಪಿಗೆ ಕೊಟ್ಟಿರಬಹುದು ಮತ್ತು ಅವರ ಒಪ್ಪಿಗೆ ಮೂಲಕ ಸ್ಟ್ಯಾಗರಿಂಗ್ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ, ಆದರೆ ಸಣ್ಣ ಪುಟ್ಟ ವ್ಯವಹಾರಗಳನ್ನು ಕೈಗಾರಿಕೆಗಳನ್ನು ನಡೆಸತಕ್ಕವರು, ಕಡಿಮೆ ಬಳಸತಕ್ಕವರು ಯಾರಿದ್ದಾರೆ ಅವರಿಗೆ ಇದರಿಂದ ಹೆಚ್ಚಿನ ಅನಾನುಕೂಲವಾಗುತ್ತದೆ. ಕೆಲವು ಕಡೆಗಳಲ್ಲಿ ಸಣ್ಣ ರೈಸ್ ಮಿಲ್ಸ್‌ನ್ನು ನಡೆಸುತ್ತಾ ಇರುತ್ತಾರೆ. ಇನ್ನು ಕೆಲವು ಕಡೆಗಳಲ್ಲಿ ಫ್ಲೋರ್ ಮಿಲ್‌ಗಳನ್ನು ನಡೆಸುತ್ತಾ ಇರಬಹುದು ಅಥವಾ ಸ್ಟುಡಿಯೋ ನಡೆಸುತ್ತಾ ಇರಬಹುದು, ಒಬ್ಬ ಹೊಟೇಲ್‌ನಲ್ಲಿ ರೆಫ್ರಿಜರೇಟರ್ ಇಟ್ಟುಕೊಂಡು ವ್ಯಾಪಾರಮಾಡುತ್ತಾ ಇರಬಹುದು ಅಂತಹ ಸಂದರ್ಭಗಳಲ್ಲಿ ಈ ನಿಯಮವನ್ನು ಅನುಸರಿಸುತ್ತೇವೆ ಎಂದರೆ ಅವರು ಅವರ ಕಸಬನ್ನೇ ಕಳೆದುಕೊಳ್ಳಬೇಕಾಗುತ್ತದೆ, ಮಿಲ್ಲುಗಳನ್ನು ಮಾರಾಟ ಮಾಡಿಕೊಳ್ಳಬೇಕಾಗುತ್ತದೆ, ಅವರ ಸಿಬ್ಬಂದಿಯನ್ನು ತೆಗೆದುಹಾಕಬೇಕಾಗುತ್ತದೆ ಯಾರೂ ಕೂಡ ಕೆಲಸ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಅಂತಹ ಸನ್ನಿವೇಶವನ್ನುಂಟು ಮಾಡಿ ಗ್ರಾಮಾಂತರ ಕೈಗಾರಿಕೆಗಳಾದ ಸಣ್ಣ ಕೈ ಗಾ ರಿ ಕೆ, ಮೀಡಿಯಂ

ಕೈಗಾರಿಕೆಗಳಿಗೆ ಧಕ್ಕೆಯನ್ನುಂಟುಮಾಡಿದ ಹಾಗಾಗುತ್ತದೆ. ನೀವೇ ಅನೇಕ ಸಲ ಇಂತಹ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೀರಿ. ಆದರೆ ಅವನ್ನು ನಡೆಸುವಾಗ ವಿದ್ಯುಚ್ಛಕ್ತಿಯ ಅಭಾವವನ್ನುಂಟು ಮಾಡಿ ಅದು ಕಾಲಕ್ಕೆ ಸರಿಯಾಗಿ ಸಿಕ್ಕದೇ ಹೋದರೆ ಆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿಯೂ ಪ್ರಯೋಜನವಾಗುವುದಿಲ್ಲ, ಅವರು ಉದ್ಯೋಗವನ್ನು ನಡೆಸಿಕೊಂಡು ಹೋಗಲಾರರು, ಅದನ್ನು ಕೈಬಿಡಬೇಕಾಗುತ್ತದೆ. ಈ ಅಂಶವನ್ನು ವಿದ್ಯುಚ್ಛಕ್ತಿ ಮಂಡಲಿಯವರು ಗಮನಿಸಬೇಕು. ಸರ್ಕಾರದವರೂ ಕೂಡ ಈ ವಿಷಯದಲ್ಲಿ ಒಂದು ಸ್ಪಷ್ಟವಾದ ಧೋರಣೆಯನ್ನು ತಳೆಯಬೇಕಾಗುತ್ತದೆ. ಅದು ಬಹಳ ಅಗತ್ಯ ಎಂದು ನನಗೆ ಅನಿಸುತ್ತದ, ಸ್ವಾಮಿ.

ವಿದ್ಯುಚ್ಛಕ್ತಿ ಬಳಕೆದಾರರು ಕೆಲವರು ಹಣವನ್ನು ಕೊಡದೇ ಇರತಕ್ಕದ್ದು ಬಹಳ ಸಲ ಆಡಿಟ್ ರಿಪೋರ್ಟ್‌ನಲ್ಲಿ ತೋರಿಸುತ್ತಾ ಇದ್ದಾರೆ ಮತ್ತು ಅವು ಹಾಗೆಯೇ ಬಾಕಿ ಇದೆ ಎನ್ನುವುದನ್ನು ನಾವೆಲ್ಲರೂ ತಿಳಿದಿದ್ದೇವೆ, ಬಹಳ ದೊಡ್ಡ ದೊಡ್ಡವರು ಇದರಲ್ಲಿ ಇದ್ದಾರೆ, ಗ್ರಾಮಪಂಚಾಯ್ತಿಗಳು ಇವೆ, ನಗರ ಸಭೆಗಳು ಇವೆ, ಲಕ್ಷಾಂತರ ರೂಪಾಯಿ ಬಾಕಿ ನಿಂತಿವೆ. ಇನ್ನಾವಾಗಲೋ ಒಂದು ಸಲ ಅದನ್ನು ಹೊಡೆದು ಹಾಕಬೇಕೆಂದು 2 ಕೋಟಿ ರೂಪಾಯಿನಷ್ಟು ಉಪಯೋಗವಿಲ್ಲದ ವಸ್ತು ಅಥವಾ ನಾನ್‌ಎಕ್ಸಿಸ್ಟೆಂಟ್ ಅಥವಾ ಅನುಪಯುಕ್ತವಾದ ವಸ್ತು ಕೇವಲ ಎರಡು ಕೋಟಿ ರೂಪಾಯಿನಷ್ಟು ಅಂದಾಜು ಮಾಡಿದ್ದೇವೆ ಇದನ್ನು ಪರಿಶೀಲನೆ ಮಾಡಬೇಕೆಂದು ಇದರಲ್ಲಿ ಒಂದು ಕಡೆ ಬರೆಯುತ್ತೀರಿ. ಬರೆದೂ ಇದ್ದೀರಿ. 28 ಕೋಟಿ ರೂಪಾಯಿಗಳ ವ್ಯವಹಾರದಲ್ಲಿ 2 ಕೋಟಿ ರೂಪಾಯಿ ದೊಡ್ಡದಲ್ಲ ಎಂದು ಇಟ್ಟುಕೊಳ್ಳೋಣ. The report says :

> "Write off of capital to the extent of Rs. 2,07,94,000 being the value of assets, either non-existent or not in useful service has to be considered."

ಹೀಗಾಗಿ ಹೊಡೆದು ಹಾಕುವುದು ಇರುತ್ತದೆ. ಬೋರ್ಡಿನವರು ವ್ಯವಹಾರಗಳನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ವ್ಯವಸ್ಥೆಗಳನ್ನು ಮಾಡಬೇಕು. ಆದರೆ ಅವರು ಏನು ಹೇಳುತ್ತಾರೆ ಎಂದರೆ ಒಬ್ಬ ಚೀಫ್ ಇಂಜಿನಿಯರು ಸಾಲದು ಹಿಂದೆ ಇದ್ದ ಒಬ್ಬ ಚೀಫ್ ಇಂಜಿನಿಯರನ್ನು ನೇಮಿಸಿಕೊಳ್ಳುವುದು ಸೂಕ್ತ, ನಿವೃತ್ತ ಚೀಫ್ ಇಂಜಿನಿಯರ್ ಡೀಸಾ ಅವರನ್ನು ನೇಮಕ ಮಾಡಿಕೊಳ್ಳುತ್ತೇವೆ ಎಂದು ಹೇಳುತ್ತಾರೆ. ನಿಜ, ನಿವೃತ್ತರಾದವರು ಬಹಳ ಅನುಭವಿಗಳಾಗಿರುತ್ತಾರೆ ಎಲ್ಲಾ ವಿಧದಲ್ಲೂ. ಆದರೆ ನಾವು ಇದೇ ರೀತಿ ಎಲ್ಲಾ ಕಡೆಯಲ್ಲೂ ಹೆಚ್ಚು ಮಾಡಿಕೊಳ್ಳುತ್ತಾ ಹೋದರೆ ಅದರ ಭಾರ, ಹೊರೆಯನ್ನು, ಹೊರುವವರು ಯಾರು ಬಳಕೆದಾರರು. ಎರಡು ಕಡೆಯಿಂದಲೂ ಖರ್ಚು ವೆಚ್ಚ ಹೆಚ್ಚುತ್ತಾ ಹೋಗಬೇಕು, ಬಳಕೆದಾರ ಮಾತ್ರ ಎಂದಿನಂತೆ ನರಳುತ್ತಾ ಹೋಗಬೇಕು, ಇದು ಮಂಡಲಿಯ ವಿತರಣೆಯ ಕಾರ್ಯ ಕ್ರಮದಲ್ಲಿ ಕಂಡುಬರತಕ್ಕ ಲೋಪ. ಇದ್ದದ್ದನ್ನು ಅಚ್ಚುಕಟ್ಟು ಮಾಡಿಕೊಳ್ಳೋಣ, 28 ಕೋಟಿ ರೂಪಾಯಿಗಳ ಆಸ್ತಿ ಪಾಸ್ತಿಗಳನ್ನು ನಮಗೆ ಕೊಟ್ಟಿದ್ದಾರೆ. ಅದನ್ನು ಚೆನ್ನಾಗಿ ನೋಡಿಕೊಳ್ಳೋಣ ಅದರ ಬಗ್ಗೆ ನಿಗಾ ಕೊಡೋಣ, ಇದ್ದ ಸಿಬ್ಬಂದಿಯ ಹತ್ತಿರ ಒಳ್ಳೆಯ ಕೆಲಸ ತೆಗೆದುಕೊಳ್ಳೋಣ, ಅವರ ಕೆಲಸಕ್ಕೆ ಒಳ್ಳೆಯ ವೇಜಸ್ ಕೊಡೋಣ, ಅವರನ್ನು ಚೆನ್ನಾಗಿ ನೋಡಿಕೊಳ್ಳೋಣ ಎಂಬ ಮಾತು ಈ ಆಡಳಿತ ಮಂಡಲಿಯಲ್ಲಿ ಎಲ್ಲೂ ಕಂಡು ಬರುವುದಿಲ್ಲ. ಇದನ್ನು ಮಾಡದೇ ಹೋದಾಗ ಸರ್ಕಾರದವರು ತನ್ನ ವಶದಲ್ಲಿದ್ದ ಕೈಗಾರಿಕೆಗಳನ್ನು ವಿದ್ಯುಚ್ಛಕ್ತಿ ಇಲಾಖೆಯನ್ನು, ಭದ್ರಾವತಿ ಕಬ್ಬಿಣದ ಕಾರ್ಖಾನೆಯನ್ನು ಬಂಗಾರದ ಚಿನ್ನದ ಗಣಿಯನ್ನು ಹೀಗೆಯೇ ಪ್ರತಿಯೊಂದನ್ನೂ ಕೈ ತೊಳೆದುಕೊಳ್ಳುತ್ತಾ ಅದಕ್ಕೆ ಕೆಲವೊಂದು ಜನರನ್ನು ಸೇರಿಸಿ ಕಾರ್ಪೋರೇಷನ್ ಅಂತ ಮಾಡಿ ಒಂದು ಬೋರ್ಡ್ ಅಂತ ಮಾಡಿ ಇದ್ದ ಆಸ್ತಿ ಪಾಸ್ತಿಗಳನ್ನು ಅವರ ಕೈಯಲ್ಲಿ ಕೊಟ್ಟು ಯಾರೋ ಕೆಲವರು ನಿವೃತ್ತ ಅಧಿಕಾರಿಗಳನ್ನು ಅಲ್ಲಿ ತಂದು ಹಾಕಿ ಕಾರ್ಯಭಾರವನ್ನು ಮಾಡುತ್ತಾ ಹೋದರೆ ಬಹಳ ಬೇಗ ನೀವು ಈ ರಾಜ್ಯವನ್ನು ದಿವಾಳಿ ಮಾಡುತ್ತೀರಿ ಎನ್ನುವುದಕ್ಕೆ ಇವೆಲ್ಲಾ ಸಾಕ್ಷಿಗಳು ಮನದಟ್ಟು ಮಾಡುತ್ತವೆ. ಆ ದಾರಿಯಲ್ಲೇ ಹೋಗುತ್ತಾ ಇದ್ದೀರಿ. ಬಹಳ ನಿರ್ಧಾರವಾದ ಹೆಜ್ಜೆಯನ್ನು ಆ ದಾರಿಯಲ್ಲಿ ಇಡುತ್ತಾ ಇದ್ದೀರಿ ಎಂಬುದು ಈ ದಿವಸ ನಮಗೆ ಇದರಿಂದ ವ್ಯಕ್ತಪಡುತ್ತದೆ. ರೋಡ್ ಟ್ರಾನ್ಸ್‌ಪೋರ್ಟ ಕಾರ್ಪೋರೇಷನ್ ಈಗೇನಿದೆ ಅದರ ನಿದರ್ಶನ ಕೊಡಬಹುದು. 28 ಕೋಟಿ ರೂಪಾಯಿಗಳ ಆಸ್ತಿಯನ್ನು ಕೊಟ್ಟಿದ್ದೀರಿ ಅವರು ಯಾವಾಗಲೋ ಲೆಕ್ಕ ಮಾಡುತ್ತಾರೆ, ಯಾರನ್ನು ಬೇಕಾದರೂ ಅವರು ರಿಕ್ರೂಟ್ ಮಾಡಿಕೊಳ್ಳಬಹುದು ಬೇಕಾದ ಆಫೀಸರನ್ನು ನೇಮಕ ಮಾಡಿಕೊಳ್ಳಬಹುದು. ಅವರಿಗೆ ಬೇಕಾದ ಕಡೆ ಸಾಮಾನುಗಳನ್ನು ಖರೀದಿ ಮಾಡಬಹುದು ಎಂದರೆ ಇದು ರಾಷ್ಟ್ರೀಕರಣವೇ ? ರಾಜ್ಯ ನಡೆಸತಕ್ಕವರಿಗೆ ಜವಾಬ್ದಾರಿಯಿದೆಯೆ ? ಕೋಟಿ ಕೋಟಿ ರೂಪಾಯಿಗಳ ಹಣದ ಆಸ್ತಿ ಪಾಸ್ತಿಗಳನ್ನು ಈ ರೀತಿ ನಿಮ್ಮ ಅನುಕೂಲಕ್ಕೆ

(ಶ್ರೀ ಎಸ್. ಗೋಪಾಲ ಗೌಡ)

ಪರಿವರ್ತಿಸುವುದಾದರೆ ದೇಶದ ಗತಿ ಏನು ಆದೀತು ? ಜನಕ್ಕೆ ಈ ವ್ಯವಸ್ಥೆಯಲ್ಲಿ ನಂಬಿಕೆ ಉಳಿದೀತೇ ? ಇದನ್ನು ಕಣ್ಣು ಬಿಟ್ಟು ಸರ್ಕಾರ ನೋಡಬೇಕು.

ಈ ರೀತಿ ಅವರ ಒಂದು ಹೊಣೆಯನ್ನು ಜವಾಬ್ದಾರಿಯನ್ನು ಹಾರಿಸಿಕೊಳ್ಳುತ್ತ ಹೋದರೆ, ದೇಶಕ್ಕೆ ಒಂದು ಕೆಟ್ಟದನ್ನು ಮಾಡುತ್ತ ಹೋದರೆ ದೇಶ ಮುಂದಕ್ಕೆ ಬದುಕಿ ಬಾಳಲು ಖಂಡಿತ ಸಾಧ್ಯವಿಲ್ಲ. ಇದನ್ನು ಸರ್ಕಾರದವರು ಮತ್ತೆ ಮತ್ತೆ ಗಂಭಿರವಾಗಿ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಈ ರೀತಿ ಪೋಲಾಗತಕ್ಕ ಹಣವನ್ನು ಪೋಲಾಗದಂತೆ ಕೂಡದೆ ತಡೆಗಟ್ಟಲು ಆಸ್ಥೆ ವಹಿಸಬೇಕೆಂದು ಹೇಳುತ್ತೇನೆ. ಈ ಬಗ್ಗೆ ಸರ್ಕಾರದವರೂ ಮತ್ತು ಸಂಬಂಧಪಟ್ಟ ಬೋರ್ಡಿನವರೂ ಕೂಡಲೆ ಸೂಕ್ತ ಕಾರ್ಯಕ್ರಮಗಳನ್ನು ಕೈ ಗೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇದರಲ್ಲಿ ಅನೇಕ ಲೋಪದೋಷಗಳು ಕಾಣುತ್ತಿವೆ. ಇವುಗಳಿಗೆ ಕೂಡಲೆ ಪರಿಹಾರ ಮಾರ್ಗಗಳನ್ನು ಕಂಡು ಹಿಡಿದು ಅವುಗಳನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಇನ್ನು ಈ ಪರ್ಚೇಜ್ ವಿಚಾರದಲ್ಲಿ ಈಗಾಗಲೆ ಬೋರ್ಡಿನವರು 13 ಕೋಟಿ ರೂಪಾಯಿಗಳ ವಸ್ತುಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಸರ್ಕಾರದ ನಿಗಾ ಇರಬೇಕೆಂದು ನಾನು ಒತ್ತಿ ಒತ್ತಿ ಹೇಳುತ್ತೇನೆ. ಈ ವಸ್ತುಗಳನ್ನು ಇವರು ಎಲ್ಲಿ ಕೊಳ್ಳುತ್ತಾರೆ, ಯಾವಾಗಕೊಳ್ಳುತ್ತಾರೆ, ಹೇಗೆಕೊಳ್ಳುತ್ತಾರೆ ಎಂಬ ವಿಚಾರದಲ್ಲಿ ಸರ್ಕಾರದವರು ಒಂದು ಕಣ್ಣಿಡ ಬೇಕಾದ್ದು ಅತ್ಯಗತ್ಯ ಎಂದು ಹೇಳುತ್ತೇನೆ. ಈ ಇಲಾಖೆಯವರು ಸರ್ವೆ ಪೋಲುಗಳನ್ನು ಉಪಯೋಗಿಸ ಬಹುದೆಂದು ನಾವು ಹೇಳಬಹುದು. ಆದರೆ ಎಲ್ಲಿ ನೋಡಿದರೂ ಸಿಮೆಂಟಿನ ಕಂಬಗಳೇ ಕಾಣುತ್ತಿವೆ. ಆದರೆ ಈ ಸಿಮೆಂಟ್ ಕಂಬಗಳ ತಯಾರಿಕೆಯನ್ನು ಯಾವ ಕಂಪೆನಿಗೆ ವಹಿಸಿದ್ದಾರೆ, ಅಲ್ಲಿ ಎಷ್ಟು ಕಂಬಗಳು ಈಗಾಗಲೆ ಉತ್ಪನ್ನ ಮಾಡಲಾಗಿದೆ ಎಂಬ ವಿಚಾರ ಯಾರಿಗೂ ತಿಳಿದಂತೆ ಕಂಡು ಬರುತ್ತಿಲ್ಲ. ಈ ಹಿಂದೆ ಇಲ್ಲೇ ಒಬ್ಬ ಮಂತ್ರಿಗಳು ಕಾಪರ್ ವೈಲರ್ ಪ್ರಕರಣದಲ್ಲಿ ರಾಜೀನಾಮೆ ಇತ್ತ ನಿದರ್ಶನವಿದೆ. ಇದು ಬಡ ದೇಶ, ಬಡ ಜನಗಳಿರತಕ್ಕ ದೇಶ. ಆದುದರಿಂದ ಈ 13 ಕೋಟಿ ರೂಪಾಯಿಗಳ ವ್ಯವಹಾರದಲ್ಲಿ ಸರ್ಕಾರದವರು ಕಣ್ಣಿಡಬೇಕೆಂದು ಹೇಳುತ್ತೇನೆ. ಈ ವಿಚಾರದಲ್ಲಿ ಬೋರ್ಡು ಕೂಡ ನಿಗಾ ಇಡಬೇಕೆಂದು ಹೇಳುತ್ತೇನೆ.

5-00 P.M.

ಈ ರಿಪೋರ್ಟಿನಲ್ಲಿ ಅವರೇ ಹೇಳಿದ್ದಾರೆ ಕಾಲ್ ಡೆಪಾಜಿಟ್‌ಗಳನ್ನೆಲ್ಲ ಷೆಡ್ಯೂಲ್ಡ್ ಬ್ಯಾಂಕಿನಲ್ಲಿ ಆ ಹಣವನ್ನು ಹಾಕಿದ್ದೇವೆ ಎಂತ ಹೇಳಿದ್ದಾರೆ. ಇದನ್ನು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಯಾವ ಆಧಾರದ ಮೇಲೆ ಹೀಗೆ ಹಣವನ್ನು ಕಡಮೆ ಬಡ್ಡಿಗೆ ಬ್ಯಾಂಕುಗಳಲ್ಲಿ ಹಾಕಿದ್ದಾರೆಂಬುದನ್ನು ವಿಚಾರ ಮಾಡಬೇಕಾಗಿದೆ. ಮುಖ್ಯ ಮಂತ್ರಿಗಳೂ ಕೂಡ ಈಗ ಸಭೆಗೆ ಬರುತ್ತಿದ್ದಾರೆ. ಅವರು ಈ ವಿಚಾರ ದಲ್ಲಿ ಹೆಚ್ಚು ವಿಳಂಬ ಮಾಡದೆ ಬೋರ್ಡಿನವರೂ ಅವರೂ ಇಬ್ಬರೂ ಸೇರಿಕೊಂಡು ಮುತುವರ್ಜಿವಹಿಸಿ ಇದನ್ನೆಲ್ಲ ಸವಿಸ್ತಾರವಾಗಿ ವಿಚಾರ ಮಾಡಿ ಆ ಹಣದಲ್ಲಿ ಯಾರೂ ತಮ್ಮ ಸ್ವಂತಕ್ಕೆ ಹಣವನ್ನು ಬಳಸಿಲ್ಲ ಎಂಬ ಅಂಶವನ್ನು ಅವರು ಸಾರ್ವಜನಿಕರಿಗೆ ತೋರಿಸಿಕೊಟ್ಟು, ಈ ಬಗ್ಗೆ ಯಾವ ಅಪಾಯವೂ ಆಗಿಲ್ಲ, ಹಣ ನಷ್ಟವಾಗಿಲ್ಲ ಎಂಬುದನ್ನು ಜನತೆಗೆ ತೋರಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸಾಮಾನ್ಯವಾಗಿ ಈ ದಿವಸ ಇರತಕ್ಕ ತುರ್ತುಪರಿಸ್ಥಿತಿ, ಹಣದ ಅಭಾವ, ಮತ್ತು ವಿದ್ಯುಚ್ಛಕ್ತಿ ಅಭಾವ ಈ ಮೂರನ್ನೂ ಈ ಮಂಡಲಿಯವರು ನೋಡಿಕೊಂಡು ಕೆಲಸಮಾಡಬೇಕಾದ್ದು ಅವರ ಕರ್ತವ್ಯ. ಹಾಗಿರುವಾಗ ಅವರು ಕೇವಲ ತಮ್ಮದೇ ಆದ ಒಂದು ರೀತಿಯಲ್ಲಿ ತಮ್ಮದೇ ಆದ ಒಂದು ಷರತ್ತಿನಮೇಲೆ ಜನರಿಗೆ ವಿದ್ಯುಚ್ಛಕ್ತಿಯನ್ನು ಕೊಡಲು ಆರಂಭ ಮಾಡಿದ್ದಾರೆ. ನಾವು ಗ್ರಾಮಗಳಿಗೆ ಬೆಳಕಿಗಾಗಿ ವಿದ್ಯುಚ್ಛಕ್ತಿ ಬೇಕು ಎಂತ ಕೇಳಿದರೆ ನೀವು ಐ. ಪಿ. ಸೆಟ್ಟುಗಳನ್ನು ತೆಗೆದುಕೊಂಡರೆ ಕೊಡುತ್ತೇವೆ ಎಂದು ಹೇಳುತ್ತಾರೆ. ನಾವು ಐ. ಪಿ. ಸೆಟ್ಟುಗಳಿಗೆ ಪವರ್‌ಕೊಡಿ ಎಂದು ಕೇಳಿದರೆ ನಿಮ್ಮ ಗ್ರಾಮಕ್ಕೆ ವಿದ್ಯುಚ್ಛಕ್ತಿ ಬಂದಿದೆಯೇ ಎಂದು ಕೇಳುತ್ತಾರೆ. ಹೀಗೆ ಆ ಜನರ ಹತ್ತಿರ ಇವರ ಚೇಷ್ಟೆ ನಡೆಯುತ್ತಿದೆ. ಯಾರು ಇವರಿಗೆ ಯಜಮಾನರೋ, ಐದು ವರ್ಷಕ್ಕೊಮ್ಮೆ ಇವರು ಯಾರ ಕಾಲವನ್ನು ಮುಟ್ಟಬೇಕೋ ಅಂಥವರಲ್ಲೇ ಇವರು ಹೀಗೆಲ್ಲ ಚೇಷ್ಟೆ ಮಾಡುತ್ತಿದ್ದಾರೆ

ಶ್ರೀ ಜೆ. ಎಚ್. ಷಂಸುದ್ದೀನ್.—ನೀವು ಈಗ ಯಾವ ವರ್ಷದ್ದನ್ನು ಹೇಳುತ್ತಿದ್ದೀರಿ ?

ಶ್ರೀ ಎಸ್. ಗೋಪಾಲಗೌಡ.—ನಾನು ಈಗ ನಿಮ್ಮ ರಿಪೋರ್ಟಿನಲ್ಲಿರುವುದನ್ನೇ ಹೇಳು ತ್ತಿದ್ದೇನೆ. ಇದಕ್ಕೆಲ್ಲ ಏನಾದರೊಂದು ಕ್ರಮವಿದೆಯೇ ಎಂದರೆ ಅದಿಲ್ಲ. ಈ ದಿವಸ ಮನಸ್ಸಿಗೆ

ಏನು ತೋಚಿದರೆ ಅದನ್ನು ಮಾಡುವುದಕ್ಕೆ ಅವರಿಗೆ ಅವಕಾಶವಿದೆ. ಆದರೆ ಹೀಗೆ ಆಗಬಾರದು. ಹೀಗಾದರೆ ಯಾವ ಮಂತ್ರಿಮಂಡಲವಾಗಲೀ ಅಥವಾ ಯಾವ ರಾಜ್ಯಭಾರವಾಗಲೀ ಖಂಡಿತ ನಡೆಯುವುದಕ್ಕೆ ಸಾಧ್ಯವಿಲ್ಲ. ಇದರಲ್ಲಿ ಮತ್ತೊಂದು ವಿಚಾರವೇನೆಂದರೆ ಈ ವಿದ್ಯುಚ್ಛಕ್ತಿ ಬಳಕೆ ದಾರರಲ್ಲಿ ಕೆಲವರು ಈ ಪವರನ್ನು ಅನೇಕ ರೀತಿಯಲ್ಲಿ ದುರುಪಯೋಗ ಪಡಿಸುತ್ತಿದ್ದಾರೆ. ಅಂಥ ನಿದರ್ಶನಗಳೂ ಇವೆ, ಮೀಟರುಗಳೇ ಮುಂದಕ್ಕೆ ಹೋಗದಹಾಗೆ ಮಾಡಿರತಕ್ಕ ಕೆಲವು ಪ್ರಸಂಗಗಳು ನನ್ನ ಗಮನಕ್ಕೆ ಬಂದಿವೆ. ಇದಕ್ಕೆ ಸಂಬಂಧಪಟ್ಟ ಕೆಲವು ಅಧಿಕಾರಿಗಳು ಆ ವಿದ್ಯುಚ್ಛಕ್ತಿಯನ್ನು ಬಳಸತಕ್ಕವರೂ ಇಬ್ಬರೂ ಒಂದಾಗಿ ಸರ್ಕಾರಕ್ಕೆ 400ರೂಪಾಯಿ ತೆರಿಗೆ ಕೊಡಬೇಕಾಗಿದ್ದರೆ ಅದರಲ್ಲಿ 200 ರೂಪಾಯಿಗಳನ್ನು ಅಧಿಕಾರಿ ತೆಗೆದುಕೊಂಡು ಆತನಿಗೆ 200 ರೂಪಾಯಿಗಳನ್ನು ಬಿಟ್ಟಿರುವಂಥ ನಿದರ್ಶನಗಳು ಕೆಲವು ನನ್ನ ಗಮನಕ್ಕೆ ಬಂದಿವೆ. ಇಂಥ ಲೋಪ ದೋಷಗಳು ವಿಶೇಷವಾಗಿವೆ. ಇಂಥ ಸಂದರ್ಭದಲ್ಲಿ ವಿದ್ಯುಚ್ಛಕ್ತಿ ಬಳಕೆ ಬಹಳ ಒಳ್ಳೇ ರೀತಿಯಲ್ಲಿ ಆಗಬೇಕಾಗಿದೆ. ಕಾರಣ ಅದರ ಅಭಾವ. ಈಗ ಇದರ ಉತ್ಪಾದನೆಗಾಗಿ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ತೀರ್ಮಾನವಾಗಿದೆ. ಇದರ ಮೇಲೆ ಇನ್ನೂ ಒಂದು ಕೋಟಿ ರೂಪಾಯಿಗಳನ್ನು ಕೊಡಬಹುದು. ಅದರ ಮೇಲೆ ಮತ್ತೂ ಒಂದು ಕೋಟಿ ರೂಪಾಯಿಗಳನ್ನು ಕೊಡಬಹುದು. ಅಲ್ಲಿಗೆ ಇದು ಮೂರು ಕೋಟಿ ರೂಪಾಯಿಗಳ ಯೋಜನೆ ಆಯಿತು. ಆದರೆ ಇದುವರೆಗೂ ಆದಂತೆ ಈ ಹಣವನ್ನೆಲ್ಲ ಮತ್ತೆ ಬೋರ್ಡಿನವರು ಆ ಷೆಡ್ಯೂಲ್ಡ್ ಬ್ಯಾಂಕುಗಳಲ್ಲಿ ಹಾಕಿಬಿಟ್ಟರೆ ಆಗ ಇದು ಆ ಡಾಲ್ಮಿಯ ಮತ್ತು ಮುಂಧ್ರ ಪ್ರಕರಣಕ್ಕೆ ಹೊಂದಾವಣಿಕೆ ಆಗುತ್ತದೆ. ಈ ವಿಚಾರವನ್ನು ನಾನೀಗ ಒತ್ತಿ ಒತ್ತಿ ಹೇಳುತ್ತಿದ್ದೇನೆ. ಆಗ ನೀವೇ ಅಲ್ಲ ನಿಮ್ಮ ಆ ಪಿತೃಮಹಾಶಯರುಗಳೆಲ್ಲ ಸೀದಾ ಸ್ವರ್ಗಕ್ಕೇ ಹೋಗಿಬಿಡುತ್ತಾರೆ. ಇದರಲ್ಲಿ ಮುಂದೆ ಬರತಕ್ಕವರಿಗೂ ದಾರಿ ಮಾಡಿದ್ದಾರೆ. ಈ ಹಣವಾದರೋ ಜನತೆಯ ಚರ್ಮವನ್ನು ಸುಲಿದು ಸಂಪಾದಿಸಿದ್ದಾಗಿದೆ. ಬೇಂದ್ರೆಯವರು ಹೇಳಿರತಕ್ಕ ಕವನಕ್ಕೆ ಸರಿಯಾದಂಥ ಸುಲಿಗೆ ಇದು. ಈ ರೀತಿ ನಡೆಯುತ್ತಿರುವ ಅಕ್ರಮಗಳನ್ನು ಸರ್ಕಾರ ಕಣ್ಣು ಮುಚ್ಚಿಕೊಂಡು ನೋಡದೆ ಕುಳಿತು ಬಿಟ್ಟರೆ, ಇಂಥ ಪ್ರಕರಣಗಳಿಗೆ ಅವಕಾಶಕೊಟ್ಟರೆ ಮಂತ್ರಿಮಂಡಲಕ್ಕೆ ಅಪಖ್ಯಾತಿ ಬರುವುದೊಂದೇ ಅಲ್ಲ ಅವರು ದೇಶಕ್ಕೂ ದ್ರೋಹ ಮಾಡಿದಂತೆ ಆಗುತ್ತದೆ. ಈ ಅಪಾದನೆಗಳಿಗೆಲ್ಲ ಅವರು ನಾಳೆ ತಲೆ ಕೊಡಲೇಬೇಕಾಗುತ್ತದೆ.

"As a result of the misappropriation by a forgery of a draft drawn for Rs. 1,888 in favour of the contractor could not be detected"........ಎಂದಿದೆ. ಇದಕ್ಕೆ ನಾನು ಮೊದಲೇ ಹೇಳಿದ ಹಾಗೆ ಭ್ರಷ್ಟಾಚಾರ ಎನ್ನುವ ಶಬ್ದವೇನಾದರೂ ಇದ್ದರೆ ಅದು ವ್ಯವಹಾರದಲ್ಲಿ ಮತ್ತು ಈ ದೇಶದಲ್ಲಿದೆ ಎಂದು ಹೇಳುವುದಾದರೆ ಈ ಮಂಡಲಿ ಅಂತಹ ವ್ಯವಹಾರಕ್ಕೆ ಒಂದು ಜೀವಂತ ಸಾಕ್ಷಿ. ಇದರ ಅಣ್ಣ ತಮ್ಮಂದಿರೂ ಇದ್ದಾರೆ. ಹಿಂದೆ ಆಗಿರುವ ಖಾದೀ ಬೋರ್ಡು; ಮುಂದಕ್ಕೆ ಇನ್ನೊಂದು ಇದೆ. ಈ ಮಾತುಗಳನ್ನು ಹೇಳಿದ ಮೇಲೆ ಇಲ್ಲಿ ಕೆಲವು ರಚನಾತ್ಮಕವಾದ ವಿಷಯಗಳನ್ನು ಹೇಳಬೇಕೆಂದಿದ್ದರೂ ಅದನ್ನು ಹೇಳುವುದಕ್ಕೆ ಇಷ್ಟವಿಲ್ಲ. ಅದನ್ನು ಹೇಳಿದರೆ ಏನು ರಚನಾತ್ಮಕವಾಗುತ್ತದೆ? ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಲೋಪ ದೋಷಗಳಿರುವಾಗ ಪ್ರಗತಿಯ ದಾರಿಯಲ್ಲಿ ಹೋಗುವುದಕ್ಕೆ ಇಲ್ಲದೇ ಇರತಕ್ಕ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ ನಿಮ್ಮ ಮುಂದೆ ಇಟ್ಟುಕೊಂಡಿರುವಾಗ ಯಾವ ರಚನಾತ್ಮಕವಾದ ಸಲಹೆಯನ್ನು ಕೊಟ್ಟರೆ ತಾನೇ ಅದನ್ನು ಸರಿಪಡಿಸಲು ಸಾಧ್ಯ? ಅವರನ್ನು ತೆಗೆದು ಇನ್ನೊಬ್ಬರನ್ನು ಹಾಕಿ ಬಿಡಿ ಎಂದು ತಿರುಗಣಿ ಮಾಡಿ ಹೇಳುವ ಧೈರ್ಯ ನನಗಿಲ್ಲದೆ ಈ ಮಾನ್ಯ ಸಭೆಯಲ್ಲಿರುವ ಕಾಂಗ್ರೆಸ್ಸು ಸದಸ್ಯರುಗಳೆಲ್ಲರನ್ನೂ ವಿನಯದಿಂದ ಪ್ರಾರ್ಥಿಸಿಕೊಳ್ಳುವುದು ತಾವು ದಯವಿಟ್ಟು ನಿಸ್ಪೃಹರಾಗಿ, ದೇಶದ ಜನತೆಯ ಮುಂದೆ ಇದರಲ್ಲಿ ನಷ್ಟವಾಗುತ್ತಿರುವ ಎಲ್ಲ ವ್ಯವಹಾರಗಳನ್ನೂ ಕಣ್ಣು ಬಿಟ್ಟು ನೋಡಿ ಈ ಅನಾಹುತಗಳಾಗುವುದನ್ನು ತಪ್ಪಿಸಬೇಕು ಎಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ದೇವಯ್ಯ (ಮಲ್ಲೇಶ್ವರಂ).—ಸ್ವಾಮಿ, ಈ ವಿದ್ಯುಚ್ಛಕ್ತಿ ಮಂಡಳಿಯ ರಿಪೋರ್ಟಿನ ಮೇಲೆ ಮತ್ತು ಬಡ್ಜೆಟ್ಟಿನ ಮೇಲೆ ನನ್ನ ಸ್ನೇಹಿತರನೇಕರು ಈಗಾಗಲೇ ಭಾಷಣ ಮಾಡಿದ್ದಾರೆ. ನನ್ನ ಭಾಷಣವನ್ನು ನಾನು ಬೆಂಗಳೂರು ಕಾರ್ಪೊರೇಷನ್ ಎಲ್ಲೆಗೆ ಮಟ್ಟಿಗೆ ಮಿತಿಗೊಳಿಸಿ ಒಂದೆರಡು ಮಾತುಗಳನ್ನು ಇಲ್ಲಿ ಹೇಳಬೇಕೆಂದಿದ್ದೇನೆ.

ನಮ್ಮ ಬೆಂಗಳೂರು ಸಿಟಿ ಹಾಗೂ ಸಿವಿಲ್ ಏರಿಯಾದಿಂದ ಒಟ್ಟು ಸುಮಾರು 225 ಲಕ್ಷ ರೂಪಾಯಿಗಳಷ್ಟು ವರಮಾನ ಎಲೆಕ್ಟ್ರಿಸಿಟಿ ಬೋರ್ಡಿಗೆ ಪ್ರತಿ ವರ್ಷವೂ ಬರುತ್ತಿದೆ ಎಂದು ಇಲ್ಲಿ ನಮಗೆ ಬೋರ್ಡಿನವರು ಒದಗಿಸಿರುವ 1963-64 ನೇ ಸಾಲಿನ ವರದಿಯಲ್ಲಿ ತೋರಿಸಿದ್ದಾರೆ. ಇಲ್ಲಿ ಸುಮಾರು 14ಲಕ್ಷ ಪ್ರಜೆಗಳು ವಾಸಮಾಡಿಕೊಂಡು ಅನೇಕ ರೀತಿಯ ಉದ್ಯೋಗಗಳನ್ನು ಅವಲಂಬಿಸಿ ತಮ್ಮ

(ಶ್ರೀ ಕೆ. ದೇವಯ್ಯ)

ಜೀವನವನ್ನು ನಡೆಸಿಕೊಂಡು ಬರುತ್ತಿದ್ದಾರೆ. ನಮ್ಮ ಕಾರ್ಪೋರೇಷನ್ನಿಗೆ ಅನೇಕ ತರಹದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸಾರ್ವಜನಿಕರಿಂದ ಹಾಗೂ ಇತರ ಕಡೆಗಳಿಂದ ದೂರುಗಳು ಬರುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ರಸ್ತೆಗಳ ರಿಪೇರಿ ಕೆಲಸಗಳನ್ನು ಮಾಡುತ್ತಿರುತ್ತೇವೆ. ಜನರೂ ಕೂಡ ಇಂತಹ ಕಡೆ ರಸ್ತೆ ಕೆಲಸ ಚೆನ್ನಾಗಿ ನಡೆದಿಲ್ಲ ಇಂತಹ ಕಡೆಗಳಲ್ಲಿ ಕೊರೆದು ಹೋಗಿ ಹಳ್ಳ ಬಿದ್ದಿದೆ ಎಂದು ಹೇಳುತ್ತಿರುತ್ತಾರೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈಚೆಗೆ ಒಂದು ಕಡೆ ಹೇಳಿದಂತೆ ಎರಡು ಶತ್ರುಗಳು ಸರಕಾರಕ್ಕಿವೆ ಎಂದ ಹಾಗೆ ನಮ್ಮ ಕಾರ್ಪೋರೇಷನ್ನಿಗೆ " ಎನಿಮೀ ನಂಬರು 3 ". ರಸ್ತೆಗಳಿಗೆ ಕೇಬಲ್ಲನ್ನು ಹಾಕುವ ಇಲಾಖೆ. ಈ ಇಲಾಖೆಯವರಲ್ಲಿ ಯಾವ ಒಂದು ನಿಗದಿಯಾದ ಪ್ಲಾನಾಗಲೀ ಯೋಜನೆಯಾಗಲೀ ಯಾವುದನ್ನು ಮಾಡದೇ ಏನೋ ವರ್ಷಕ್ಕೆ ಒಂದೆರಡು ಲಕ್ಷದಷ್ಟು ಕೆಲಸ ಮಾಡಬೇಕೆಂದು ದಾರಿ ರಸ್ತೆಗಳನ್ನೆಲ್ಲಾ ಅಗೆದುಹೋಗಿಬಿಡುತ್ತಾರೆ. ಅಲ್ಲದೆ ಫುಟ್ ಪಾತಿನ ಕಲ್ಲುಗಳನ್ನು ಹಾಕಿದ್ದರೆ ಅದನ್ನೂ ತೆಗೆದು ಒಂದು ಪಕ್ಕಕ್ಕೆ ಅಗೆದು ಕೇಬಲ್ಲು ಕೆಲಸ ಎಂದು ಮಾಡಿ ಹೋಗುತ್ತಾರೆ. ಅದನ್ನು ಮಾಡಿರುವ ಬಗ್ಗೆ ಕಾರ್ಪೋರೇಷನಿಗೂ ವಿಚಾರ ತಿಳಿಯದೇ ಕೆಲವು ತಿಂಗಳಾದ ಮೇಲೆ ಅದನ್ನು ದುರಸ್ತುಗೊಳಿಸಿದರೆ, ಪುನಃ ಈ ಕೇಬಲ್ ಇಲಾಖೆಯವರು ಅಗೆದು ಹಳ್ಳ ಮಾಡಿ ಹೋಗುತ್ತಿರುವುದು ಸರ್ವೇ ಸಾಧಾರಣವಾಗಿ endless ಆಗಿ ಹೋಗಿದೆ. 225 ಲಕ್ಷ ರೂಪಾಯಿಗಳಷ್ಟು ವರಮಾನವನ್ನು ಬೋರ್ಡಿನವರು ಜನರಿಂದ ಪಡೆಯುತ್ತಿರುವಾಗ, ವಾಸಮಾಡುವ ಜನಕ್ಕೆ ಮತ್ತು ಅವರು ಓಡಾಡುವ ರಸ್ತೆಗಳಿಗೆ ಅನಾನುಕೂಲ ಮಾಡಬಾರದು ಎನ್ನುವುದು ಎಲೆಕ್ಟ್ರಿಸಿಟಿ ಬೋರ್ಡಿನವರು ಗಮನಿಸಿಲ್ಲ ಎಂದು ತೋರುತ್ತೆ. ಕಟಿಂಗು ಚಾರ್ಜುಗಳು ರಸ್ತೆಗಾಗಿ ಎಂದು ಕೇಬಲ್ ಇಲಾಖೆಯವರು ಕಟ್ಟಿದ್ದರೂ ಕೂಡ ಸರಿಯಾದ ಮತ್ತು ನಿರ್ದಿಷ್ಟವಾದ ಪ್ಲಾನುಗಳು ಮತ್ತು ಅಂದಾಜುಗಳೊಂದನ್ನೂ ಮಾಡದೆ ಅಲ್ಲಲ್ಲಿ ನಮ್ಮ ಸಿಟಿ ರಸ್ತೆಗಳನ್ನು ಅಗೆದು ಸಾರ್ವಜನಿಕರಿಗೆ ತೊಂದರೆ ಮಾಡುವುದು ಸರಿಯಿಲ್ಲ. ಅಂಡರ್ ಗ್ರೌಂಡು ಕೇಬಲ್ ಡಿವಿಜನ್ನು ಮತ್ತು ಅದಕ್ಕಾಗಿ ಇದರಲ್ಲಿ ನಾಲ್ಕು ಲಕ್ಷದಷ್ಟು ಖರ್ಚುಮಾಡುತ್ತೇವೆಂದು ಹೇಳುತ್ತಾರೆ. ಇದಕ್ಕೆ ಯಾವುದಾದರೂ ಒಂದು ಮಾಸ್ಟರು ಪ್ಲಾನನ್ನು ತಯಾರು ಮಾಡಿ ಕೇಬಲ್ಲಿಗಾಗಿ ಇಂತಿಂತಹ ರಸ್ತೆಗಳನ್ನು ತೆಗೆದುಕೊಂಡು ಕೆಲಸ ಮಾಡಬೇಕಾಗಿದೆಯೆಂದು ಕಾರ್ಪೋರೇಷನ್ನಿಗೂ ತಿಳಿಸಿ, ಅದರಂತೆ ತಕ್ಕ ಕಾರ್ಯಕ್ರಮ ಹಾಕಿಕೊಂಡು ನಡೆಸಿಕೊಂಡು ಬರಬಹುದು. ಎಲೆಕ್ಟ್ರಿಸಿಟಿ ಬೋರ್ಡಿನವರು ಈ ಬೆಂಗಳೂರು ನಗರದ ರಸ್ತೆಗಳ ಬಗೆಗೆ ಸರಿಯಾದ ಗಮನ ತೆಗೆದುಕೊಳ್ಳದೇ ಇರುವುದು ಬಹಳ ದೊಡ್ಡ ತಪ್ಪೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಬೆಂಗಳೂರು ಸಿಟಿಯಲ್ಲಿ ಜೀವನ ಮಾಡುವುದೇ ಬಹಳ ಕಷ್ಟ. ಅನೇಕರು ಸರಕಾರಿ ಕಚೇರಿಗಳಲ್ಲಿ, ಕೈಗಾರಿಕಾ ಕ್ಷೇತ್ರಗಳಲ್ಲಿ ಮತ್ತು ಫ್ಯಾಕ್ಟರಿಗಳಲ್ಲಿ ಕಾರ್ಪೋರೇಷನ್ನಿನಲ್ಲಿ ಕೆಲಸ ಮಾಡಿಕೊಂಡು ತಮ್ಮ ಜೀವನವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಸಾವಿರಾರು ಕುಟುಂಬಗಳು ಸಣ್ಣ ಸಣ್ಣ ಕೈಗಾರಿಕೆಗಳನ್ನು ನಡೆಸಿಕೊಂಡು ಸಿಟಿ ಏರಿಯಾದ ಹೊರಗೆ ಮತ್ತು ಒಳಗೆ ಅರ್ಧ ಹೆಚ್.ಪಿ. ಹಾಗೂ ಒಂದು ಹೆಚ್.ಪಿ. ಪವರನ್ನು ತೆಗೆದುಕೊಂಡು ಗೃಹ ಕೈಗಾರಿಕೆಗಳನ್ನು ನಡೆಸುತ್ತ ತಮ್ಮ ಕುಟುಂಬದ ಜೀವನವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅವರಿಗೆ ಅರ್ಧ ಅಥವಾ ಒಂದು ಹೆಚ್.ಪಿ. ಪವರನ್ನು ತೆಗೆದುಕೊಳ್ಳುವುದೇ ಕಷ್ಟ. ಅದರಲ್ಲಿಯೂ ಹಗಲು ಹೊತ್ತು ಕೊಡದೇ ರಾತ್ರಿ ವೇಳೆಯಲ್ಲಿ ಉಪಯೋಗ ಮಾಡಬೇಕೆಂದು ಹೇಳುತ್ತಾರೆ. ಎಂದರೆ ರಾತ್ರಿ ಹತ್ತು ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ಕೆಲಸ ಮಾಡಬೇಕು ಎಂದರೆ ಬಹು ಕಷ್ಟ. ಏನೋ ದೊಡ್ಡ ದೊಡ್ಡ ಫ್ಯಾಕ್ಟರಿಗಳಲ್ಲಾದರೆ ಅಲ್ಲಿ ಷಿಫ್ಟ್ ಸಿಸ್ಟಂ ಎಂದಿರುತ್ತದೆ. ಒಂದು ವಾರ ಹಗಲು ಕೆಲಸ ಮಾಡಿದರೆ ಇನ್ನೊಂದು ವಾರದಲ್ಲಿ ರಾತ್ರಿಯು ಕೆಲಸ ಮಾಡುತ್ತಾರೆ, ಹಾಗೆ ಇಲ್ಲಿರುವ ಹೆಚ್.ಎಂ.ಟಿ ಇತ್ಯಾದಿ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವುದು ಸಾಧ್ಯ. ಅರ್ಧ ಹೆಚ್.ಪಿ. ಪವರನ್ನು ತೆಗೆದುಕೊಂಡು ಎಷ್ಟು ಜನ ರಾತ್ರಿ ಹೊತ್ತು ಕೆಲಸ ಮಾಡಲು ಸಾಧ್ಯ. ಎಷ್ಟೋ ಜನ ಈ ರೀತಿ ಪವರನ್ನು ತೆಗೆದುಕೊಂಡು ರಾತ್ರಿ ಹೊತ್ತು ಕೆಲಸ ಮಾಡಲಿಕ್ಕೆ ಆಗದೇ ತೆಗೆದುಕೊಂಡ ಸಾಲದ ಹಣಗಳೂ ಬಾರದೇ ಕೋರ್ಟು ಅಟ್ಯಾಚುಮೆಂಟು ಆದ ಸಂದರ್ಭಗಳೂ ಇವೆ. ಈ ಕಾರಣದಿಂದ ಕರೆಂಟನ್ನು ಇಂತಹ ಸಣ್ಣ ಕೈಗಾರಿಕೆಗಳಲ್ಲಿ ಕೆಲಸ ಮಾಡುವವರಿಗೆ ಹಗಲು ಹೊತ್ತಿನಲ್ಲಿ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಅಲ್ಲದೆ ಸಣ್ಣ ಕೈಗಾರಿಕೆಗಳನ್ನು ನಗರದ ಮಧ್ಯದಲ್ಲಿ ನಡೆಸುವಾಗ ಅದನ್ನು ರಾತ್ರಿ ಹೊತ್ತು ನಡೆಸಬೇಕೆಂದು ಹೇಳಿದರೆ ಕಾರ್ಪೋರೇಷನ್ನು ಆಫೀಸಿನಲ್ಲಿ ಅದು ಅಕ್ಕಪಕ್ಕದ ಮನೆಯವರಿಗೆ ತೊಂದರೆಯಾಗುತ್ತದೆ ಎಂದು ಹೇಳುತ್ತಾರೆ. ಅದಕ್ಕಾಗಿ ಲೈಸೆನ್ಸನ್ನು ಕೊಡುವುದಿಲ್ಲ ಎಂದು ಹೇಳುತ್ತಾರೆ. ಈ ಪರಿಸ್ಥಿತಿಯಲ್ಲಿ ಕರೆಂಟನ್ನು ಕೊಡುವುದರಿಂದ ಬಹಳ ತೊಂದರೆಯೂ ಆಗುತ್ತದೆ. ಈ ರೀತಿ ಸಣ್ಣ ಕೈಗಾರಿಕೆ ನಡೆಸಿಕೊಂಡು ರಾತ್ರಿಯ ವೇಳೆಯಲ್ಲಿ ಕರೆಂಟನ್ನು ಉಪಯೋಗಿಸುತ್ತಿರುವವರಿಗೆ ಕನ್‌ಸೆಷನ್ ರೇಟಿನಲ್ಲಾದರೂ ಕರೆಂಟನ್ನು ಕೊಡುವುದೊಳ್ಳೆಯದು ಎಂದು ನಾನು ಸಲಹೆ ಮಾಡುತ್ತೇನೆ.

Sri J. H. SHAMSUDDIN.—It is already there. 30 per cent reduction.

ಶ್ರೀ ಕೆ. ದೇವಯ್ಯ.—ಇನ್ನೊಂದು ವಿಚಾರವೇನೆಂದರೆ 220 KV.S.C. Peenya (near Bangalore)—Hosur Line (interchange of power between Mysore and Madras States) ಗಾಗಿ 30 ಲಕ್ಷ ರೂಪಾಯಿ ತೋರಿಸಿದ್ದಾರೆ. ಒಂದು ಒಳ್ಳೆಯ ಸಾಧನೆಯನ್ನು ಬಡ್ಜೆಟ್ಟಿನಲ್ಲಿ ತೋರಿಸಿದ್ದಾರೆ. ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಆದರೆ ಬೆಂಗಳೂರು ನಗರದಲ್ಲಿ ನಮಗೆ ಬೇಕಾದಷ್ಟು ನ್ಯೂನತೆಗಳಿವೆ. ರಸ್ತೆಯಲ್ಲಿ ಓಡಾಡುವುದಕ್ಕೆ ಬೇಕಾದಷ್ಟು ಲೈಟುಗಳಿಲ್ಲ. ತುರ್ತು ಪರಿಸ್ಥಿತಿ ಎಂದು ಇದ್ದ ದೀಪಗಳನ್ನು ಕೂಡ ಒಂದು ಬಿಟ್ಟು ಒಂದನ್ನು ತೆಗೆದು ಹಾಕಿದ್ದಾರೆ. ರಸ್ತೆಯಲ್ಲಿ ಕಗ್ಗತ್ತಲಾಗಿ ಜನರು ತಿರುಗಾಡುವುದಕ್ಕೆ ಕಷ್ಟವಾಗಿದೆ. ಅದರಲ್ಲಿಯೂ ಹಿಂದುಳಿದ ಜಾಗಗಳಾದ ರಾಜಾಜಿನಗರ, ಮರಿಯಪ್ಪನ ಪಾಳ್ಯ, ಜೂಗಾನಹಳ್ಳಿ, ಮರೀಕುಂಟೆ, ಸ್ವತಂತ್ರಪಾಳ್ಯ ಇಂಥ ಕಡೆಗಳಲ್ಲಿ ದೀಪಗಳಿಲ್ಲದಿದ್ದರೆ ಬಹಳ ಕಷ್ಟ. ಇಂಥ ಸಂದರ್ಭಗಳಲ್ಲಿ ತುರ್ತು ಪರಿಸ್ಥಿತಿಯ ಆಜ್ಞೆಯನ್ನು ಸಡಿಲ ಮಾಡಬೇಕು. ಮೆಜೆಸ್ಟಿಕ್, ಮಾರ್ಕೆಟ್ ಮುಂತಾದ ಹೆಚ್ಚು ಬಸ್ಸುಗಳು ನಿಲ್ಲುವ ಕಡೆ ದೀಪಗಳಿಲ್ಲ. ಸರ್ಕಾರದವರನ್ನು ಕೇಳಿದರೆ ಕಾರ್ಪೊರೇಷನ್ ಹಾಕಬೇಕು ಎಂದು ಹೇಳುತ್ತಾರೆ. ಕಾರ್ಪೊರೇಷನವರು ದೀಪಗಳನ್ನು ಹಾಕಿ ಎಂದರೆ ಸರ್ಕಾರದಿಂದ ಲೈಟ್ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಜನ ಕತ್ತಲಲ್ಲಿ ಕ್ಯೂನಲ್ಲಿ ನಿಂತುಕೊಳ್ಳಬೇಕು.... ..

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಆಹಾರವನ್ನು ಬೆಳೆಯಲು ವಿದ್ಯುಚ್ಛಕ್ತಿ ಇಲ್ಲದೆ ಇರುವಾಗ ಬೀದಿಯ ದೀಪಗಳಿಗೆ ಎಲ್ಲಿಂದ ಕೊಡಬೇಕೋ ಗೊತ್ತಿಲ್ಲ. ಅನ್ನದೇವರ ಮುಂದೆ ಇನ್ನು ದೇವರಿಲ್ಲ......

ಶ್ರೀ ಕೆ. ದೇವಯ್ಯ.—ಅನ್ನದೇವರನ್ನು ಹುಡುಕುತ್ತ ಸರ್ಕಾರಿ ಆಫೀಸುಗಳಿಗೆ, ಕಾರ್ಪೊರೇಷನ್ನಿಗೆ ಮತ್ತು ಇತರ ಕಡೆ ಕೆಲಸಗಳಿಗೆ ಬಂದಿದ್ದು ಸಾಯಂಕಾಲ ಆರುಗಂಟೆಗೆ ಮನೆ ದೇವರನ್ನು ಹುಡುಕಿಕೊಂಡು ಹೋಗಲು ಬಸ್ಸಿಗಾಗಿ ಕಾಯುತ್ತಾರೆ. ಬಸ್ಸು ನಿಲ್ಲುವ ಕಡೆ ದೀಪಬೇಕು. ಇದು ಬಹಳ ಮುಖ್ಯ. ಆದುದರಿಂದ ಮೆಜೆಸ್ಟಿಕ್, ಸಿಟಿ ಮಾರ್ಕೆಟ್ ಹೀಗೆ ಎಲ್ಲೆಲ್ಲಿ ಹೆಚ್ಚು ಜನ ಬಸ್ಸುಗಳಿಗಾಗಿ ಕಾಯುತ್ತಿರುವರೋ ಅಂಥ ಕಡೆಗಳಲ್ಲಾದರೂ ಪ್ರಕಾಶಮಾನವಾದ ದೀಪಗಳನ್ನು ಹಾಕಿ ಸೌಕರ್ಯ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರಿಗೆ ಸಂಬಂಧಪಟ್ಟ ಹಾಗೆ ನೀರು ಸರಬರಾಜು ವ್ಯವಸ್ಥೆಗೆ ವಿದ್ಯುಚ್ಛಕ್ತಿ ಬೇಕು. ಅದರ ಸಂಬಂಧದಲ್ಲಿ ಕೆಲವು ಕೆಲಸಗಳಾಗಬೇಕಾಗುತ್ತದೆ. ಇದಕ್ಕೆ ಟೋಕನ್ ಗ್ರ್ಯಾಂಟ್ ಸಹ ಕೊಡದೆ ಇರುವುದು ಬಹಳ ತಪ್ಪು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಜನರು ನೀರಿನ ಅಭಾವದಿಂದ ಕಷ್ಟಪಡುತ್ತಿರುವಾಗ ಬೆಂಗಳೂರಿಗೆ ನೀರನ್ನೊದಗಿಸಲು ಕಾವೇರಿ ನದಿಯಿಂದ ನೀರನ್ನು ತರುವ ಯೋಜನೆಯನ್ನು ಕಾರ್ಯಗತಮಾಡುವುದಕ್ಕೆ ತೊಡಗಿದ್ದಾರೆ. ಆ ಸಂಬಂಧವಲ್ಲಿ main lines ಹಾಕುವುದು, transmission lines ಹಾಕುವುದು, ಟ್ರಾನ್ಸ್‌ಫಾರ್ಮರ್ ಮತ್ತು ಇತರ ಸಲಕರಣೆಗಳನ್ನು ಕೊಂಡುಕೊಳ್ಳುವುದಕ್ಕೆ ಒಂದು token grant ಆದರೂ ಇಡದೆ ಇರುವುದು ಬಹಳ ಶೋಚನೀಯ. ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ ಈ ಬಾಬಿಗೆ ಸ್ವಲ್ಪವಾದರೂ ಹಣವನ್ನು ಒದಗಿಸಬೇಕು.

225 ಲಕ್ಷ ರೂಪಾಯಿ ಆದಾಯ ಬಂದಾಗ್ಯೂ ಕೂಡ ಬೆಂಗಳೂರು ಸಿಟಿ ಮತ್ತು ಸಿವಿಲ್ ಸ್ಟೇಷನ್ನಿಗೆ 13,70,873 ರೂಪಾಯಿ ಮತ್ತು 7,50,037 ರೂಪಾಯಿಗಳ ಖರ್ಚನ್ನು ಕ್ರಮವಾಗಿ ತೋರಿಸಿದ್ದಾರೆ. ಈಗಿರುವ overhead lines ಎಲ್ಲ ಒಬೀರಾಯನ ಕಾಲದಲ್ಲಿ ಹಾಕಿದ್ದು ಅದನ್ನು ಬದಲಾಯಿಸಲು ಗಮನವನ್ನೇ ಕೊಟ್ಟಿಲ್ಲ. ಅದರಿಂದ ಷಾಕ್ ಹೊಡೆದು ಕೆಲವು ಅನಾಹುತಗಳಾಗಿವೆ. ಇದಲ್ಲದೆ, ಹುಡುಗರಿಗೆ ಆಟವಾಡಲು ಸ್ಥಳವಿಲ್ಲದೆ ಬೀದಿಗಳಲ್ಲಿಯೇ ಗಾಳಿಪಟಗಳನ್ನು ಆಡಿಸುತ್ತಾರೆ. ಅವು ತಂತಿಗಳ ಮೇಲೆ ಬೀಳುತ್ತವೆ. ಮಳೆಯಿಂದ ಒದ್ದೆಯಾದಾಗ short-circuit ಉಂಟಾಗಿ ಬೇಕಾದಷ್ಟು ಅನಾಹುತಗಳಾಗುತ್ತವೆ. Underground cables ಹಾಕಿ ಇಂಥದ್ದನ್ನು ತಪ್ಪಿಸಬೇಕು. ಇದು ಬಹಳ ಮುಖ್ಯವಾದ ಕೆಲಸ. ಇದಕ್ಕೆ ಹೆಚ್ಚಿನ ದುಡ್ಡನ್ನು ಕೊಟ್ಟು ಆದಷ್ಟು ಬೇಗ underground cables ಹಾಕಬೇಕೆಂದು ಹೇಳುತ್ತೇನೆ.

ರಾಜಾಜಿನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿರುವ ಜನರಿಗೆ 150 ರೂಪಾಯಿವರೆಗೂ ಐದು ರೂಪಾಯಿ ಮತ್ತು 150ಕ್ಕೆ ಮೇಲ್ಪಟ್ಟಿದ್ದರೆ ಏಳು ರೂಪಾಯಿ ಹೀಗೆ ಮನೆವಾಡಿಗೆ ಭತ್ಯವನ್ನು ಕೊಡುತ್ತಿದ್ದಾರೆ. ಅದೇ ಬೆಂಗಳೂರು ನಗರದಲ್ಲಿ ಇರುವವರಿಗೆ 8 ರೂಪಾಯಿ ಮತ್ತು ಹತ್ತು

(ಶ್ರೀ ಕೆ. ದೇವಯ್ಯ)

ರೂಪಾಯಿ ಕೊಡುತ್ತಾರೆ. ಇದನ್ನು ಮುಖ್ಯವಾಗಿ ಪರಿಶೀಲನೆ ಮಾಡಬೇಕು. ಈ ಪ್ರದೇಶ ಬೆಂಗಳೂರು ನಗರದಲ್ಲಿ ಸೇರಿಕೊಳ್ಳುವುದಕ್ಕೆ ಆರ್ಡರ್ ಮಾಡಿದ್ದಾರೆ. ಆಥುದರಿಂದ ಬೆಂಗಳೂರು ನಗರದಲ್ಲಿರುವವರಿಗೆ ಕೊಡುವಂತೆ ಮನೆ ಬಾಡಿಗೆ ಭತ್ಯವನ್ನು ಕೊಟ್ಟು ಸಹಾಯ ಮಾಡಬೇಕು.

Installing two gas turbines units of 10 M.V. each at Bangalore (Package plant), ಇದಕ್ಕೆ 1,50,000 ರೂಪಾಯಿಗಳನ್ನೊದಗಿಸಿದ್ದಾರೆ. ಇದನ್ನು ಆದಷ್ಟು ಬೇಗ ಕಾರ್ಯಗತ ಮಾಡಿ ನಮ್ಮಲ್ಲಿರುವ ಕೈಗಾರಿಕೆಗಳಿಗೆ ಅನುಕೂಲ ಮಾಡಿಕೊಡುತ್ತಾರೆಂದು ನಾನು ನಂಬಿದ್ದೇನೆ.

ಕೊನೆಯದಾಗಿ ಒಂದೇ ಒಂದು ಮಾತನ್ನು ಹೇಳಬೇಕಾಗಿದೆ. ಕಾರ್ಪೊರೇಷನ್ನಿನವರು ಜನರ ಅನುಕೂಲಕ್ಕಾಗಿ ಬೇಕಾದ ಕಡೆಗಳಲ್ಲಿ 3 HP 2HP ಮೋಟಾರುಗಳನ್ನು ನೀರನ್ನು ಪಂಪ್ ಮಾಡುವುದಕ್ಕೆ ಹಾಕಿದ್ದಾರೆ. ಪ್ರಾಯಶಃ ಅವರು ಕಾಲಕ್ಕೆ ಸರಿಯಾಗಿ ಹಣವನ್ನು ಕಟ್ಟದೆ ಅಥವಾ ಬೇರೆ ಕಾರಣಗಳಿಂದ disconnect ಆಗಿ ಎರಡು ಮೂರು ವರ್ಷವಾದರೂ ಕೂಡ re-connect ಮಾಡಿಲ್ಲ. ಶ್ರೀರಾಮಪುರದ ಸ್ಮಶಾನದಲ್ಲಿ ಒಂದು ಪಂಪ್ ಸೆಟ್ ಹಾಕಿ ಮೂರು ವರ್ಷವಾಯಿತು. ಈಗ ಎರಡು ವರ್ಷದಿಂದ ಅದು ಕೆಲಸ ಮಾಡುತ್ತಿಲ್ಲ. ಮಂತ್ರಿಗಳ ಬಳಿ ಓಡಾಡಿದರೂ ಕೂಡ ಅದು ಕಾರ್ಯಗತವಾಗಿಲ್ಲ. ಇಂಥದ್ದಕ್ಕೆ ಅವಕಾಶ ಕೊಡಬೇಡಿ. ಜನತೆಗೆ ಸೌಕರ್ಯಗಳನ್ನು ಕಲ್ಪಿಸುವುದಕ್ಕೋಸ್ಕರ ಕಾರ್ಪೊರೇಷನವರು ಪಂಪ್ ಸೆಟ್‌ಗಳನ್ನು ಹಾಕಿದ್ದಾರೆ. ಇದರ ಬಗ್ಗೆ ತಾವು ಸೂಚನೆಯನ್ನು ಕೊಟ್ಟು, ಇಂಥದ್ದಕ್ಕೆ ಅವಕಾಶ ಕೊಡಬಾರದೆಂದು ಹೇಳಬೇಕು ಎಂದು ಸರ್ಕಾರದವರನ್ನು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ಈಗ ನಮ್ಮ ಮುಂದೆ ಮಂಡಿಸಿರತಕ್ಕ ವಿದ್ಯುಚ್ಛಕ್ತಿ ಮಂಡಲಿಯ 1962-63 ರ revised budget ವಿಷಯದಲ್ಲಿ ಮತ್ತು 1963-64ನೇ ಇಸವಿಯ ಬಡ್ಜೆಟ್ ಎಸ್ಟಿಮೇಟುಗಳ ವಿಷಯದಲ್ಲಿ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ತಮ್ಮನ್ನು ವಂದಿಸುತ್ತೇನೆ. ಈ ಅಂದಾಜುಗಳನ್ನು ಪರಿಶೀಲಿಸಿದರೆ, ಕ್ರಮ ಕ್ರಮವಾಗಿ ವರ್ಷ ವರ್ಷಕ್ಕೂ ವೆಚ್ಚ ಹೆಚ್ಚುತ್ತ ಬಂದಿದೆ ; ಸಿಬ್ಬಂದಿಯೂ ಹೆಚ್ಚುತ್ತ ಬಂದಿದೆ; ಕೆಲಸದಲ್ಲಿ ಸಹ ವಿಸ್ತಾರವಾಗುತ್ತ ಬಂದಿದೆ. ಕೆಲವು ಮೈಲಿ ಹೆಚ್ಚಾಗಿ ತಂತಿಯನ್ನು ಎಳೆದಿದ್ದೇವೆ, ಇಷ್ಟು ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದೇವೆ ಎಂದು ಜನಗಳಿಗೆ ಸಮಾಧಾನ ಹೇಳುವುದಕ್ಕೆ ತೃಪ್ತಿಯಾಗಿ ಕೆಲಸ ನಡೆದಿದೆ ಎನ್ನುವುದಕ್ಕೆ ಧೈರ್ಯ ಸಾಲದು, ಕಾರಣವೇನೆಂದರೆ ಬಹಳ ದಿವಸಗಳಿಂದ, ಪ್ರಾರಂಭದಿಂದಲೂ ಮೈಸೂರು ದೇಶದಲ್ಲಿ ಸರ್ಕಾರದ ಅಧೀನದಲ್ಲಿ ಜಲಶಕ್ತಿಯಿಂದ ವಿದ್ಯುತ್ತನ್ನು ಉತ್ಪಾದನೆ ಮಾಡಿ ಜನಗಳಿಗೆ ವ್ಯವಸಾಯಕ್ಕಾಗಿ, ಕೈಗಾರಿಕಾ ಕೆಲಸಗಳಿಗಾಗಿ ಮತ್ತು ಸಂಸಾರಿಕ ಕಾರ್ಯಗಳಿಗಾಗಿ ಒದಗಿಸುತ್ತಿದ್ದರು. ಆ ಕಾಲದಲ್ಲಿ ವಿದ್ಯುಚ್ಛಕ್ತಿಯನ್ನು ಬಳಕೆ ಮಾಡತಕ್ಕವರೇ ಕಡಮೆ ಇದ್ದರು. ಮನೆಗಳಿಗೆ ದೀಪಗಳನ್ನು ಹಾಕಿಕೊಳ್ಳುವುದಕ್ಕಾಗಲೀ, ವ್ಯವಸಾಯದ ಕೆಲಸಕ್ಕಾಗಲೀ, ವಿದ್ಯುಚ್ಛಕ್ತಿಯನ್ನು ಬಳಸಿಕೊಳ್ಳಿ ಎಂದು ಸ್ವಲ್ಪಮಟ್ಟಿಗೆ ಸರ್ಕಾರದ ಕಡೆಯಿಂದ ಮತ್ತು ತಿಳಿದಂಥ ಜನಗಳ ಕಡೆಯಿಂದ ಒತ್ತಡವನ್ನು ಕೊಡಬೇಕಾಗಿತ್ತು. ವಿದ್ಯುಚ್ಛಕ್ತಿಯ ಬಳಕೆ ಜನಗಳಿಗೆ ಹೆಚ್ಚು ಹೆಚ್ಚು ತಿಳಿದು ಬಂದಷ್ಟೂ, ವಿದ್ಯುಚ್ಛಕ್ತಿಯನ್ನು ಬಳಸಿಕೊಳ್ಳುವುದಕ್ಕೋಸ್ಕರವಾಗಿ ಬೇಡಿಕೆಗಳು ಹೆಚ್ಚಾಗಿ ಬಂದು ಈಗ ವಿದ್ಯುಚ್ಛಕ್ತಿಯ ಅಭಾವ ಅಪಾರವಾಗಿ ಕಾಣುತ್ತದೆ.

ಹಳೇ ಮೈಸೂರು ಭಾಗದಲ್ಲಿ ಕೂಡ ವಿದ್ಯುಚ್ಛಕ್ತಿ ಯಾಕೆ ಒದಗಿಸಿಲ್ಲ ಎಂದು ಕಳವಳವಾಗಿದೆ. ಆದರೆ ಹಳೇ ಮೈಸೂರು ಭಾಗದಲ್ಲಿಯೇ ಎಲ್ಲಾ ಉಪಯೋಗಿಸುತ್ತಿದ್ದಾರೋ ಏನೋ ತಾವು ವಿದ್ಯುಚ್ಛಕ್ತಿ ಪಡೆಯುವ ಭಾಗ್ಯ ಇಲ್ಲವೇನೋ ಎಂದು ಹೊಸ ಮೈಸೂರು ಭಾಗದಲ್ಲಿ ಜನ ಭಯಪಟ್ಟುಕೊಂಡಿದ್ದಾರೆ. ಈ ವಿದ್ಯುತ್‌ಚ್ಛಕ್ತಿ ಮಂಡಲಿಯವರು ಏನು ಮಾಡುತ್ತಾರೆ ಎಂಬುದಕ್ಕೆ ತಿಳುವಳಿಕೆ ಕೊಡಬೇಕಾದುದು ಕರ್ತವ್ಯವಾಗಿದೆ. ಬಜೆಟ್ ನೋಡಿದರೆ ಮುಖ್ಯವಾಗಿ ವಿವರಣೆಯಲ್ಲಿ 7000 ವ್ಯವಸಾಯ ಪಂಪ್‌ಸೆಟ್ಟು ಹಾಕುತ್ತೇವೆ ಎಂದು ತಿಳಿಸಿದ್ದಾರೆ. ಈಗಿರುವ ಪಂಪುಗಳಿಗೆ ವಿದ್ಯುತ್ ಶಕ್ತಿ ಸಾಕಷ್ಟು ಪೂರೈಕೆಯಾಗದೆ ಕೆಲವು ಕಡೆ ರಾತ್ರಿ ನಿಂತು ಹೋಗುತ್ತಿದೆ. ಸರಿಯಾಗಿ ಪೂರೈಕೆಯಾಗುತ್ತಿಲ್ಲ. ಕೆಲವು ಕಡೆ ದಿವಸಕ್ಕೆ ಎರಡು ಮೂರು ಸಲ ನಿಂತು ಹೋಗುತ್ತದೆ. ಇದರಿಂದ ವ್ಯವಸಾಯ ಕೆಲಸಕ್ಕೆ ಬಹಳ ತಡೆಯುಂಟಾಗಿದೆ. ನಮ್ಮ ಪ್ರದೇಶದಲ್ಲಿ ವಿಶೇಷವಾಗಿ ಬೆಳೆಯುವ ಆಲೂಗಡ್ಡೆ ಬೆಳೆಗೆ ತೊಂದರೆ ಉಂಟಾಗಿದೆ. ಮುಖ್ಯವಾಗಿ ವ್ಯವಸಾಯ ಪಂಪುಗಳಿಗೆ ಸಾಧ್ಯವಿದ್ದಷ್ಟು ಸಾಕಾಗುವಷ್ಟು ವಿದ್ಯುತ್ ಶಕ್ತಿ ಒದಗಿಸಲು ಮೇಲ್ವಿಚಾರಣೆ ಮಾಡಬೇಕೆಂದು ಹೇಳುತ್ತೇನೆ. 7000

ಕ್ಕಿಂತಲೂ ಹೆಚ್ಚಾಗಿ ಪಂಪುಗಳನ್ನು ಒದಗಿಸಬೇಕೆಂದು ಹೇಳುತ್ತೇನೆ. ಬೆಂಗಳೂರು ನಗರದಲ್ಲಿ ಫ್ಯಾಕ್ಟರಿಗಳನ್ನು ಸ್ಥಾಪನೆ ಮಾಡಬೇಕೆಂದು ಇರುವುದು ಬಹಳ ಸಂತೋಷದ ವಿಚಾರ. ಜಲ ವಿದ್ಯುಚ್ಛಕ್ತಿಗೆ ಯಾವ ರೇಟಿನಿಂದ ಕೊಡಲಾಗುವುದೋ ಅದೇ ರೇಟಿಗೆ ಡೀಜಿಲ್ ರೇಟ್ಸ್ ತಗ್ಗಿಸಬೇಕು. ಕಡಿಮೆ ರೇಟಿನಲ್ಲಿ ಕೊಡುವುದಕ್ಕೆ ಪರಿಶೀಲನೆ ಮಾಡಬೇಕು ಮತ್ತು ಅಗತ್ಯವೆಂದು ಕಂಡುಬಂದರೆ ಡೀಸಲ್ ಪಂಪುಗಳಿಗೆ ಸರಕಾರ ಸಬ್‌ಸೀಡಿ ಕೊಡುವ ಏರ್ಪಾಡು ಮಾಡಬೇಕು. ಅಗ್ಗ ದರದಲ್ಲಿ ಶಕ್ತಿ ಒದಗಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ವಿದ್ಯುಚ್ಛಕ್ತಿ ಇಲಾಖೆ ಬೋರ್ಡಿನ ಆಡಳಿತಕ್ಕೆ ಬಂದ ಮೇಲೆ, ಈಗ ಇರತಕ್ಕಂಥ ಹೊಸ ಛೇರ್‌ಮನ್‌ರ ಮೇಲೆ ಆರೋಪಣೆ ಏನೂ ಇಲ್ಲ. ಅವರು ಹಗಲಿರುಳು ದುಡಿಯುತ್ತಾರೆ. ಸಬ್ ಕಮಿಟಿಗಳವರು ವಿದ್ಯುತ್ ಶಕ್ತಿ ಮಂಡಲಿಯ ಅಧ್ಯಕ್ಷರಿಗೆ ಸಾಕಷ್ಟು ಸಹಕಾರ ನೀಡುತ್ತಿಲ್ಲ. ಈ ಅಸಹಕಾರ ಭಾವನೆ ಉಂಟಾಗಿರುವುದನ್ನು ತೊಡೆದು ಹಾಕಲು ಪ್ರಯತ್ನ ಪಡಬೇಕೆಂದು ನಾನು ಹೇಳುತ್ತೇನೆ. ಸಣ್ಣ ಸಣ್ಣ ಪೂರೈಕೆಗೆ ಅರ್ಜಿಗಳು ಬಂದಾಗ್ಗೆ ಮಂಡಳಿಯ ಅಧ್ಯಕ್ಷರು ಸಬ್‌ಕಮಿಟಿ ಛೇರ್‌ಮನ್‌ರ ಕಡೆಗೆ ಕಳಿಸುತ್ತಾರೆ. ಅವರು ನಾಳೆ ಇನ್ನೊಂದು ದಿವಸ ನೋಡೋಣ ಎಂದು ಅವರು ಜನರನ್ನು ಬೇಸರಪಡಿಸುತ್ತಾರೆ. ಇದರಿಂದ ಜನರಿಗೆ ತೊಂದರೆಯಾಗುತ್ತದೆ. ಇದನ್ನು ಮಂಡಲಿಯ ಅಧ್ಯಕ್ಷರು ಗಮನಿಸಬೇಕೆಂದು ಪ್ರಯಾರಿಟಿ ಮೇಲೆ ಕೊಡಬೇಕೆಂದು, ದಾಕ್ಷಿಣ್ಯಕ್ಕೆ ಒಳಗಾಗಿ ಪ್ರಯಾರಿಟಿ ತಪ್ಪಿಸಬಾರದು ಎಂದು ಹೇಳುತ್ತೇನೆ. ಈ ವಿಷಯ ಕೂಲಂಕಷವಾಗಿ ವಿಚಾರ ಮಾಡಿ ಆಡಳಿತ ಚೆನ್ನಾಗಿ ನಡೆಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

ಶ್ರೀ ಎಸ್. ಗೋಪಾಲ ಸಾಲೆನ್ನ (ಮೂಡಬಿದ್ರಿ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಎಲೆಕ್ಟ್ರಿಸಿಟಿ ಬೋರ್ಡು ಯಾವ ರೀತಿ ಕೆಲಸಮಾಡುತ್ತಿದೆ ಎಂಬ ವಿಷಯವನ್ನು ಕೂಲಂಕಷವಾಗಿ ಅಂಕಿ ಅಂಶಗಳ ಆಧಾರದಿಂದ ಶ್ರೀಮಾನ್ ಸುಂಠಣಕರರು ಒಂದು ಕಡೆ, ಶ್ರೀಮಾನ್ ಗೋಪಾಲಗೌಡರು ಇನ್ನೊಂದು ಕಡೆ ಹಾಗೂ ಇನ್ನಿತರ ಸದಸ್ಯರೂ ಸಹ ವಿವರವಾಗಿ ಹೇಳಿದ್ದಾರೆ. ಈ ಎಲ್ಲ ವಿವರ ಪರಿಶೀಲಿಸಿ ನೋಡಿದರೆ ಇಂಥ ಬೋರ್ಡು ಇರುವುದು ಅಗತ್ಯವೇ ಎಂದು ಅನ್ನಿಸುತ್ತದೆ. ಜನತೆಗೆ ಸೂಕ್ತವಾದ ಸೌಲಭ್ಯ ಈ ಬೋರ್ಡು ಒದಗಿಸಿಲ್ಲ ಮತ್ತು ಈ ಸಂಸ್ಥೆಯಿಂದ ಹೆಚ್ಚಿನ ಜನರಿಗೆ ಪ್ರಯೋಜನವಾಗಿಲ್ಲ ಎಂಬ ಚಿತ್ರ ಸ್ಪಷ್ಟವಾಗಿ ಸಭೆಗೆ ಕೊಟ್ಟಿದ್ದಾರೆ. ಹೀಗೆ ಕೆಲಸ ಕಾರ್ಯಗಳು ನಿರ್ಲಕ್ಷ್ಯವಾಗಿ ನಡೆಯುವಾಗ್ಗೆ ರೈತ, ಕೈಗಾರಿಕೆಯ ಮತ್ತಿತರ ಉದ್ದಿಮೆದಾರ ದಿನದಿನಕ್ಕೆ ಕೆಳಮಟ್ಟಕ್ಕೆ ಹೋಗುತ್ತಿದ್ದಾನೆ. ಜನತೆಯಲ್ಲಿ ಬಡತನ, ಕಷ್ಟ ಜಾಸ್ತಿಯಾಗುತ್ತಾ ಇದೆ. ಜನತೆಯ ನಿತ್ಯ ಬಳಕೆಗೆ ಬೇಕಾಗುವ ವಸ್ತುಗಳ ಉತ್ಪಾದನೆ ಮಾಡಲು ಇದರಿಂದ ಏಕೆ ಕಷ್ಟವಾಗಿದೆ ಎನ್ನುವುದನ್ನು ವಿಮರ್ಶೆಮಾಡಿ ನೋಡಬೇಕು. ಇಂಥ ಮಂಡಲಿಯಿಂದ ಜನ ಜೀವನಕ್ಕೆ ಕಷ್ಟವಾಗಲು ಕಾರಣವಾಗಿದೆ ಎಂಬುದು ಸ್ಪಷ್ಟವಾಗಿದೆ. ಒಂದು ಕಡೆ ಕೈಗಾರಿಕೆ ಉತ್ಪತ್ತಿ ಜಾಸ್ತಿ ಮಾಡಲು ಸರಕಾರ ಯಥೇಚ್ಛವಾಗಿ ಹಣ ಖರ್ಚು ಮಾಡುತ್ತಿದೆ. ಸಣ್ಣ ಪ್ರಮಾಣದಲ್ಲಿಯ ಕೈಗಾರಿಕಾ ಸಹಕಾರ ಸಂಘಗಳಿಗೆ, ಇನ್ನಿತರ ದೊಡ್ಡ ಕೈಗಾರಿಕಾ ಉದ್ಯಮಗಳಿಗೆ ಉತ್ತೇಜನ ಕೊಡಬೇಕೆಂದು ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿವೆ. ಗ್ರಾಂಟ್ ರೂಪದಲ್ಲಿ, ಸಾಲ, ಬೇರೆ ಸಾಮಗ್ರಿ ಮೂಲಕ ಹಣ ವಿನಿಯೋಗಿಸುತ್ತಿದೆ. ಅತ್ಯಗತ್ಯವಾಗಿ ಬೇಕಾದಂಥ ವಿದ್ಯುಚ್ಛಕ್ತಿ ಪೂರೈಕೆ ಸರಿಯಾಗಿ ಆಗದೇ ಕೈಗಾರಿಕೆಗಳು ಉದ್ಧಾರವಾಗುವುದು ಹೇಗೆ? ಕೃಷಿ ಉದ್ಧಾರವಾಗುವುದು ಹೇಗೆ?. ಉದ್ಯಮ ಹೇಗೆ ಬೆಳೆಸುವುದು ಎಂಬ ಸಮಸ್ಯೆ ಜನತೆಯ ಮುಂದೆ ಇದೆ. ಇದಕ್ಕೆ ಪರಿಹಾರ ಹುಡುಕ ಬೇಕಾದರೆ ಏನಾದರೂ ಒಂದು ಸರಿಯಾದ ರೀತಿಯಲ್ಲಿ ಬದಲಾವಣೆಯಾಗಬೇಕಾದುದು ಅತ್ಯಗತ್ಯ. ವಿದ್ಯುತ್ ಶಕ್ತಿ ಮಂಡಲ ಒಂದು ಉನ್ನತ ಮಟ್ಟದ ಬೋರ್ಡು ಆಗಿದೆ. ಇದರಲ್ಲಿ ಛೇರ್‌ಮನ್ ಸದಸ್ಯರು ಹೊಂದಿಕೊಂಡು ಒಂದು ವಿಧದಲ್ಲಿ ಕೋಟ್ಯಾಂತರ ರೂಪಾಯಿ ಸೊತ್ತನ್ನು ದುಂದು ಮಾಡಿದಂತಾಗಿದೆ. ಕೋಟ್ಯಾಂತರ ರೂಪಾಯಿ ಪಡೆದಿರುವುದನ್ನು ಹಂಚಿ ಕೊಳ್ಳಲು ಪಾಲು ಇಟ್ಟುಕೊಂಡ ಹಾಗೆ ಇದೆ. ಈ ರೀತಿ ದುಂದು ವೆಚ್ಚದಿಂದ ರಾಷ್ಟ್ರದ ಉನ್ನತವನ್ನು ನಷ್ಟ ಮಾಡುತ್ತಿದ್ದಾರೆ. ಇಂಥ ಬೋರ್ಡು ಇರುವುದರ ಬದಲು ಆದಷ್ಟು ಬೇಗ ಒಂದು ತಿದ್ದುಪಡಿ ಮಸೂದೆ ತಂದು ರಾಜ್ಯದಲ್ಲಿ ಇರತಕ್ಕಂಥ ಎಲ್ಲಾ ಬೋರ್ಡುಗಳನ್ನು ಕಿತ್ತು ಹಾಕಬೇಕು. ಸರಕಾರ ಮೂಲಧನ ಆಗಿರುವುದರಿಂದ ಸರಕಾರದ ಅಧಿಕಾರ ಮಾತ್ರ ಬಹಳ ಕಡಿಮೆ ಇವೆ. ಬೋರ್ಡು ಸ್ಥಾಪನೆ ಕಾರ್ಯ ಆಡಳಿತ ಜವಾಬ್ದಾರಿ ಸರಕಾರದ ಮುಂದೆ ಇದೆ. ಇಂಥ ಅವ್ಯವಸ್ಥೆಯ ಬೋರ್ಡು ಇರುವುದನ್ನು ಅವಸಾನ ಮಾಡದೇ ಇದ್ದರೆ, ನಮ್ಮ ಜನತೆಯಿಂದಲೇ ಸರಕಾರಕ್ಕೂ ಅವಸಾನವಾಗಲೇಬೇಕು. ಇದಕ್ಕಾಗಿ ಜನತೆ ಎಲ್ಲ ರೀತಿಯಿಂದ ಹೋರಾಟ ಮಾಡಬೇಕಾಗಿದೆ.

(ಶ್ರೀ ಎಸ್. ಗೋಪಾಲ ಸಾಲೆನ್ನ)

ಸ್ವಾಮಿ, ಒಂದು ಕಡೆಯಲ್ಲಿ ಹಣ ಉಪಯೋಗವಾಗದೇ ಇದೆ, ಇನ್ನೊಂದೆಡೆ ಅದು ಯಾವುದರಲ್ಲಿ ದುರುಪಯೋಗವಾಗಿದೆ ಎಂಬ ದು ಗೊತ್ತಾಗುವುದಿಲ್ಲ, ಮತ್ತೊಂದು ಕಡೆಯಲ್ಲಿ ಸುಮಾರು 2 ಕೋಟಿ ರೂಪಾಯಿಗಳಷ್ಟು ಸಾಮಾನುಗಳು ಇದರ ಲೆಕ್ಕದಲ್ಲಿ ಉಂಟೋ ಇಲ್ಲವೋ ಗೊತ್ತಾಗಲಿಲ್ಲ. ಎಷ್ಟೋ ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳುವಂತಹ ಸಾಮಾನುಗಳನ್ನು ಪಡೆದುಕೊಳ್ಳುತ್ತೇವೆ ಆದರೆ ಅವನ್ನು ಉಪಯೋಗಕ್ಕೆ ತರುವಾಗ ಒಂದು ವಿಧದ ವೈರ್ ಇರುವುದಿಲ್ಲ, ಒಂದು ಪೋಲ್ ಇರುವುದಿಲ್ಲ ಅಂತ ಹೇಳಿ ಅಡ್ಡಿ ಆತಂಕಗಳು ಬಂದು ಹಲವು ವರ್ಷಕಾಲ ಜನರಿಗೆ ವಿದ್ಯುಚ್ಛಕ್ತಿ ಸರಬರಾಯಿ ಆಗುವುದಿಲ್ಲ. ಈ ರೀತಿಯಲ್ಲಿ ನಡೆಯುವಂತಹ ಒಂದು ಬೋರ್ಡ್ ಈ ರೀತಿಯ ಬೇಜವಾಬ್ದಾರಿಯ ಆಡಳಿತ ಇರುವುದಕ್ಕಿಂತಲೂ ಇಲ್ಲದೇ ಇರುವುದು ಒಳ್ಳೆಯದೆಂದು ಕಾಣುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಈ ವಿದ್ಯುಚ್ಛಕ್ತಿಯ ವಿತರಣೆ ಸರ್ಕಾರದವರ ಕೈಯಲ್ಲಿರುವಾಗ ಜನತೆಗೆ ದೊರೆಯುತ್ತಾ ಇದ್ದ ಸೌಲತ್ತು ಈಗ ದೊರೆಯುವುದಿಲ್ಲ. ಹೀಗಿರುವಾಗ ಇಂತಹ ಮಂಡಲಿಗಳನ್ನು ಮುಂದುವರಿಸುವುದು ಸರಿಯೇ ಎಂಬುದನ್ನು ಸರ್ಕಾರದವರು ಶೀಘ್ರವಾಗಿ ತೀರ್ಮಾನ ಮಾಡಲೇ ಬೇಕಾಗಿದೆ. ಇನ್ನು ಹಳ್ಳಿಗಳ ಕಡೆ ನೋಡಿದರೆ ಅನೇಕ ಗ್ರಾಮಗಳಿಗೆ ಮುಖ್ಯವಾಗಿ ನನಗೆ ತಿಳಿದ ಮಟ್ಟಿಗೆ ನನ್ನ ಸ್ವಂತ ಮತದಾರ ಕ್ಷೇತ್ರದಲ್ಲಿ ವೇಣೂರು, ಪುತ್ತಿಗೆ ಮತ್ತು ಮುಂಡುತ್ತೂರು ಇನ್ನೂ ಇತರ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸುತ್ತೇವೆ ಎಂಬ ಭರವಸೆ ಹಲವು ವರ್ಷ ಹೀಗೆಯೇ ಕೊಟ್ಟಿದ್ದರೂ ಇದುವರೆಗೂ ಒದಗಿಸಿಕೊಟ್ಟಿಲ್ಲ, ಅವರು ಹಣವನ್ನು ಸಂಗ್ರಹಿಸಿ ಸರ್ಕಾರದ ಖಜಾನೆಗೆ ಕಟ್ಟಿ ನಾಲ್ಕು ವರ್ಷಗಳಾಗಿವೆ. ಇವತ್ತಿಗೂ ಕೂಡ ಆ ಗ್ರಾಮಗಳಿಗೆ ಈ ಸೌಲತ್ತು ಬಂದಿಲ್ಲ. ಜನರು ಮಾತ್ರ ಹಣವನ್ನು ಕೇಳಿದಾಗಲೇ ಕ್ರಮವಾಗಿ ಮುಂದಾಗಿ ಡಿಪಾಸಿಟ್ ಮಾಡಿದ್ದಾರೆ. ಕೆಲವು ಕಡೆಗಳಲ್ಲಿ ಪಂಪ್ ಸೆಟ್ಟುಗಳನ್ನೇನೋ ಒದಗಿಸಿದ್ದಾರೆ ಆದರೆ ಅವಕ್ಕೆ ಪವರ್ ಇಲ್ಲ. ಪಂಪ್ ಸೆಟ್ಟುಗಳ ವಿಚಾರ ತೆಗೆದುಕೊಂಡರೆ ಒಂದು ಕಡೆಯಿಂದ ಎಲೆಕ್ಟ್ರಿಸಿಟಿ ಬೋರ್ಡಿನವರು, ಇನ್ನೊಂದು ಕಡೆಯಿಂದ ತಾಲ್ಲೂಕು ಬೋರ್ಡಿನವರು ಮತ್ತೊಂದು ಕಡೆಯಿಂದ ಕೋ-ಅಪರೇಟಿವ್ ಸೊಸೈಟಿಯವರು ಹೀಗೆ ಮೂರು ಏಜೆನ್ಸಿಯಿಂದ ಕೊಡುವಂತಹ ಒಂದು ಏರ್ಪಾಡಿನಿಂದಾಗಿ ಜನರಿಗೆ ತುಂಬಾ ತಕರಾರುಗಳಾಗುತ್ತವೆ ಎಂಬ ವಿಚಾರವನ್ನು ಈಗತಾನೆ ಮಾತನಾಡಿದ ಅನೇಕ ಮಂದಿ ಸದಸ್ಯರು ವ್ಯಕ್ತಪಡಿಸಿದ್ದಾರೆ. ಇದು ನಿಜವಾಗಿಯೂ ಬಹಳ ಅನ್ಯಾಯ. ಮೂರು ಏಜೆನ್ಸಿ ಏಕೆ ಸ್ವಾಮಿ ? ಸರ್ಕಾರದವರು ಒಂದೇ ಏಜೆನ್ಸಿ ಮುಖಾಂತರ ಇದನ್ನು ಏಕೆ ಹಂಚಿಕೊಡಬಾರದು ? ಕೋ-ಅಪರೇಟೀವ್ ಸೊಸೈಟಿ ಮುಖಾಂತರ ಯೋಗ್ಯ ರೀತಿಯಲ್ಲಿ ಕೊಟ್ಟುಬಿಡಿ, ಇಲ್ಲದೇ ಇದ್ದರೆ ಸರ್ಕಾರದವರು ತಮ್ಮ ಇಲಾಖೆಯ ಅಧಿಕಾರಿಗಳ ಮುಖಾಂತರವಾದರೂ ಕೊಟ್ಟುಬಿಡಿ, ಹೀಗೇಕೆ ಮಾಡಬಾರದು ಎಂದು ತಮ್ಮನ್ನು ಈ ಸಂದರ್ಭದಲ್ಲಿ ಕೇಳುತ್ತೇನೆ. ಪಂಪ್‌ಸೆಟ್ಟುಗಳನ್ನು ಕೊಡಲು ಒಂದು ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ ಎಂದು ಹೇಳುತ್ತೀರಿ, ಸಕಾಲಕ್ಕೆ ಅದನ್ನು ಜನರಿಗೆ ಕೊಡದೆ ಹಣವನ್ನು ಉಳಿಸಿಕೊಂಡು ಅದರಲ್ಲಿ ಫಾಯ್ದೆ ಮಾಡಿಕೊಳ್ಳುವುದಕ್ಕೆ ಏಕೆ ಅವಕಾಶ ಕೊಡಬೇಕು ಎಂದು ಸ್ಪಷ್ಟವಾಗಿ ಕೇಳುತ್ತೇನೆ. ನಮ್ಮ ಪಂಚಾಯ್ತಿ ಬೋರ್ಡ್ ಇದೆ, ತಾಲ್ಲೂಕು ಬೋರ್ಡ್ ಇದೆ, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಇದೆ, ಅಧಿಕಾರ ವಿಕೇಂದ್ರೀಕರಣ ಮಾಡಬೇಕು, ಜನರ ಕೈಯಲ್ಲಿ ಅಧಿಕಾರವಿರಬೇಕು ಎಂದು ಹೇಳುತ್ತಿರುವಾಗ ಸರ್ಕಾರದವರು ತಮ್ಮ ಸ್ವತ್ತನ್ನು ಬೇರೆಯವರ ಮೂಲಕ ಹಂಚಲಿಕ್ಕೆ ಯಾಕೆ ಕೊಡಬೇಕು ಎಂದು ಕೇಳುತ್ತೇನೆ. ತಮ್ಮ ತಮ್ಮ ಅನುಕೂಲಕ್ಕೆ ಸರಿಯಾಗಿ ಇವತ್ತಿನ ದಿವಸ ಸರ್ಕಾರದ ಆಡಳಿತದಲ್ಲಿರತಕ್ಕ ಪಕ್ಷದ ಜನರು ತಮ್ಮ ಪಟ್ಟ ಭದ್ರತೆಯನ್ನು ಮಾಡಿಕೊಳ್ಳುವುದಕ್ಕೆ ಇರತಕ್ಕ ಒಂದು ಯೋಜನೆ ಇದು ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಇದನ್ನು ಆದಷ್ಟು ಬೇಗ ಯಾವುದಾದರೂ ಒಂದೇ ಏಜನ್ಸಿಗೆ ವಹಿಸಿ ಜನರಿಗೆ ಸಕಾಲದಲ್ಲಿ ಸುಲಭ ರೀತಿಯಲ್ಲಿ ಪಂಪ್ ಸೆಟ್ಟುಗಳು ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾವು ಕಾಯಿದೆ ಮೂಲಕ ಅಧಿಕಾರವನ್ನು ಕೊಟ್ಟು ಇಂತಹ ಒಂದು ಸಂಸ್ಥೆಯನ್ನು ಮಾಡಿದ್ದೇವೆ ಈಗ ನೋಡಿದರೆ ಅಲ್ಲಿ ಅವರದೇ ಕಾಯಿದೆ, ಅವರದೇ ಅಧಿಕಾರವಾಗಿದೆ ಈ ರೀತಿಯ ಅಧಿಕಾರ ನಡೆಸಿದಲ್ಲಿ ಕೋಟ್ಯಾಂತರ ರೂಪಾಯಿಗಳು ಅವ್ಯವಸ್ಥೆಗಳು ನಡೆದು ಕೋಟ್ಯಾಂತರ ರೂಪಾಯಿಗಳು ನಷ್ಟವಾಗುವುದಲ್ಲದೆ ಕೋಟ್ಯಾಂತರ ರೂಪಾಯಿಗಳ ಹಣ ದುರ್ವ್ಯಯವಾಗುವುದಲ್ಲದೆ ಜನರಿಗೆ ಸಕಾಲದಲ್ಲಿ ಸಿಕ್ಕಬೇಕಾದ ಸೌಲತ್ತು ಸಿಕ್ಕದೇ ಹೋಗತಕ್ಕ ಪರಿಸ್ಥಿತಿ ಇರುವಾಗ ನಮ್ಮ ಜನರಲ್ಲಿರತಕ್ಕ ಲಂಚಕೋರತನ ಅಥವಾ ಸ್ವಜನಪಕ್ಷಪಾತ ನಡೆಸುತ್ತಿರುವ ಈ ದುರಾಡಳಿತವನ್ನು ಹೇಗೆ ಹೋಗಲಾಡಿಸಲಿಕ್ಕೆ ಸಾಧ್ಯವುಂಟು ? ಎಲ್ಲಿಯತನಕ ಇದನ್ನು ಸುಧಾರಿಸಲಿಕ್ಕೆ ನಮ್ಮಲ್ಲಿ ಯೋಗ್ಯತೆ ಇಲ್ಲವೋ ಅಲ್ಲಿಯತನಕ ಸಾಮಾನ್ಯ ಒಬ್ಬ ಬಡ ಗುಮಾಸ್ತನನ್ನು ಅಥವಾ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್‌ನ್ನು

ಅಥವಾ ಒಬ್ಬ ಬಡ ನೌಕರನನ್ನು ಹಿಡದು ಅವನ ಮೇಲೆ ಲಂಚಕೋರತನ ಅಥವಾ ದುರಾಡಳಿತ ಅಪಾದನೆಯನ್ನು ಹೊರಿಸುತ್ತೇವೆ ಎಂದರೆ ನಾವು ಎಷ್ಟುಮಟ್ಟಿಗೆ ಯೋಗ್ಯರಿದ್ದೇವೆ, ಎಷ್ಟುಮಟ್ಟಿಗೆ ಮುಂದೆ ಬಂದಿದ್ದೇವೆ ಎಂಬುದು ವ್ಯಕ್ತಪಡುತ್ತದೆ. ಚೆಕ್ ಡ್ರಾ ಮಾಡುತ್ತೇವೆ, ಹಣ ಡ್ರಾ ಮಾಡುತ್ತೇವೆ, ಯಾರು ಹಣ ತೆಗೆದುಕೊಂಡು ವಿನಿಯೋಗ ಮಾಡಿಕೊಂಡರು ಎಂಬುದನ್ನು ಕಂಡುಹಿಡಿಯಲಿಕ್ಕೆ ಆಗುವುದಿಲ್ಲ. ಸ ಮಾನುಗಳನ್ನು ತೆಗೆದುಕೊಂಡಿದ್ದೇವೆ : ಆದರೆ ಅವು ಎಲ್ಲಿ ಹೋಗಿವೆ ಎಂಬುದು ಗೊತ್ತಿಲ್ಲ, ಅವು ಉಂಟೋ ಇಲ್ಲವೋ ಎಂಬುದು ಗೊತ್ತಿಲ್ಲ. ಈ ರೀತಿಯ ಆಡಳಿತೆಯನ್ನು ನಾವು ಸುಧಾರಿಸಿಕೊಳ್ಳಲಿಕ್ಕೆ ಸರ್ಕಾರದವರು ಒಂದು ಹೊಸ ವಿಧಾನವನ್ನು ಕಂಡುಹಿಡಿದುಕೊಳ್ಳಬೇಕು. ಸ್ವಾಮಿ, ಸಣ್ಣ ಕೈಗಾರಿಕೆಗಳಿಗೆ ಬೇಕಾದಷ್ಟು ವಿದ್ಯುಚ್ಛಕ್ತಿ ಅವಕಾಶವನ್ನು ಕೊಟ್ಟು ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳುತ್ತೀರಿ, ನನಗೆ ತಿಳಿದಮಟ್ಟಿಗೆ ಮಂಗಳೂರಿನ ಷೆಡ್ಯೂಲ್ಡ್ ಕ್ಯಾಸ್ಟ್ ಇಂಡಸ್ಟ್ರಿಯಲ್ ಕೋ ಅಪರೇಟೀವ್ ಸೊಸೈಟಿಯ ವಿಷಯ ಹಲವು ಸಾರಿ ಹೇಳಿದ್ದೇನೆ. 40-50 ಸಾವಿರ ರೂಪಾಯಿನ ಮೆಷಿನರಿಯನ್ನು ಒಂದು ವರ್ಷದ ಮೊದಲೇ ಕೊಂಡುಕೊಂಡು ಸರ್ಕಾರದ ಸಾಲದಿಂದ ಒಂದು ಕೈಗಾರಿಕೆಯನ್ನು ನಡೆಸಬೇಕೆಂದು ಹೇಳಿ ಅರ್ಜಿ ಹಾಕಿ ಒಂದು ವರ್ಷ ಆಯಿತು ಇನ್ನೂ ಈವರೆಗೂ ಪವರ್ ಕೊಟ್ಟಿಲ್ಲ. ಈ ಕೋ ಅಪರೇಟೀವ್ ಕೈಗಾರಿಕಾ ಸಂಘಕ್ಕೆ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡತಕ್ಕ ಮನಸ್ಸು ಈ ಬೋರ್ಡಿಗೆ ಇನ್ನು ಬರಲಿಲ್ಲ. ಇದು ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟಿನವರಿಗೆ ಕೊಡತಕ್ಕ ಚಿಕ್ಕ ಅಂಶ ಕೋಟಾ. ಹೀಗಿರುವಾಗ ಕೈಗಾರಿಕೆಯನ್ನು ಹೇಗೆ ಪ್ರಾರಂಭಮಾಡಬೇಕು, ಮೆಷಿನರಿ ಕೊಂಡುಕೊಳ್ಳಲಿಕ್ಕೆ ತೆಗೆದುಕೊಂಡ ಸಾಲವ ಹಣ ಹೇಗೆ ವಾಪಸು ಕೊಡಬೇಕು, ಎಂದು ಕೇಳುತ್ತೇನೆ ; ವೈಯಕ್ತಿಕವಾಗಿ ನಡೆಸತಕ್ಕವರಿಗಿಂತಲೂ ಸಂಸ್ಥೆಗಳಿಗೆ ಹೆಚ್ಚು ಪ್ರೋತ್ಸಾಹ ಕೊಡುತ್ತೇವೆ ಎಂದು ಒಂದು ಕಡೆ ಹೇಳುತ್ತೀರಿ ಮತ್ತೊಂದು ಕಡೆ ಅವಕ್ಕೆ ಸಿಕ್ಕಬೇಕಾದಂಥ ಕನಿಷ್ಠ ಸೌಲತ್ತುಗಳನ್ನು ಕೊಡುತ್ತಿಲ್ಲ. ವೈಯಕ್ತಿಕ ಸಂಸ್ಥೆಗಳಿಗೆ ಸಿಕ್ಕುತ್ತಿರುವ ಸೌಲತ್ತಿಗೂ ಸಾರ್ವಜನಿಕ ಸಂಸ್ಥೆಗಳಿಗೆ ಸಿಕ್ಕುತ್ತಿರುವ ಸೌವಲತ್ತಿಗೂ ತುಲನೆ ಮಾಡಿ ನೋಡುವಾಗ ಸಾರ್ವಜನಿಕ ಸಂಸ್ಥೆಗಳಿಗೆ ಸಿಕ್ಕುವಂತಹ ಅವಕಾಶ ಬಹಳ ಕಡಿಮೆಯಾಗುತ್ತಿದೆ, ಇದರಿಂದ ಜನತೆಯಲ್ಲಿ ಬಹಳ ಮಟ್ಟಿನ ಬೇಸರ ಮತ್ತು ಜಾಡ್ಯವುಂಟಾಗಿ ಬಹಳ ಕಷ್ಟಕ್ಕೆ ಕಾರಣವಾಗುತ್ತಿದೆ.

ಈ ಬೋರ್ಡಿನ ವಿಚಾರದಲ್ಲಿ ಇಷ್ಟು ಮಾತ್ರವಲ್ಲದೆ ಸದಸ್ಯರು ಇನ್ನೂ ಅನೇಕ ವಿಚಾರಗಳನ್ನಿಟ್ಟಿದ್ದಾರೆ. ಸದಸ್ಯರನ್ನು ನೇಮಕಮಾಡುವ ವಿಚಾರದಲ್ಲಿ ಈ ಬೋರ್ಡಿನಿಂದ ತಮ್ಮ ಸ್ವಂತಕ್ಕೆ ಪ್ರಯೋಜನ ಪಡೆಯಲು ಅವಕಾಶವಿರುವಂಥ ಜನರನ್ನು ಈ ಬೋರ್ಡಿನಲ್ಲಿ ಸದಸ್ಯರಾಗಿರಲು ಅವಕಾಶವಿರಬಾರದೆಂದು ಕಾಯಿದೆಯಾಧಾರದಿಂದ ಹೇಳಿದ್ದಾರೆ. ಆದರೆ ಅವರು ಯಾರು ಎಂಬುದರ ಬಗ್ಗೆ ಅವರ ಹೆಸರನ್ನು ಹೇಳಬಾರದೆಂದು ಇದೆ. ಆದುದರಿಂದ ಅಂಥವರು ಈ ಬೋರ್ಡಿನಲ್ಲಿ ಸದಸ್ಯರಾಗಿದ್ದರೆ ಅವರನ್ನು ಕೂಡಲೆ ದೂರ ಇಡುವುದು ಒಳ್ಳೆಯದೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಈ ಸಂಸ್ಥೆಯಲ್ಲಿಯ ಮರಿಮುಂದ್ರ ಮತ್ತು ಡಾಲ್ಮಿಯ ಹೆಸರೂ ಕೂಡ ಬಂದಿದೆ. ಹೀಗೆಲ್ಲ ಇರುವಾಗ ಸರ್ಕಾರದವರು ಏಕೆ ಒಂದು ನ್ಯಾಯ ಸಮಿತಿಯನ್ನು ನೇಮಕ ಮಾಡಬಾರದು ? ಈ ಬಗ್ಗೆ ಸರ್ಕಾರ ಏಕೆ ಕಾಯಿದೆಬದ್ಧ ಕಾರ್ಯಕ್ರಮ ಕೈಗೊಳ್ಳಬಾರದು ? ಆದರೆ ಈಗ ತಾನೆ ಸ್ವಲ್ಪ ಹಿಂದೆ ನಮ್ಮ ಮಿತ್ರರೊಬ್ಬರು ಹರಿಜನರ ವಿಚಾರ ಮಾತನಾಡುತ್ತ ಸಮಾಜ ಕಲ್ಯಾಣ ಇಲಾಖೆಯಲ್ಲಿ ಹಣವನ್ನು ಸ್ವಂತಕ್ಕಾಗಿ ದುರುಪಯೋಗ ಮಾಡಲಾಗಿದೆ ಎಂದು ಹೇಳಿದರು. ಕೆಲವು ಆ ಪಂಗಡದಲ್ಲಿ ಮುಂದಾಳುಗಳಾಗಿರತಕ್ಕ ತುಂಡು ಜನ ಆ ಅನುಕೂಲವನ್ನೆಲ್ಲ ಬಡ ಹರಿಜನರ ಹೆಸರಲ್ಲಿ ತಮಗೇ ಉಪಯೋಗ ಮಾಡಿಕೊಂಡು ಆ ಬಡಬಗ್ಗರಿಗೆ ಮೋಸ ಮಾಡಿ ಹಣವನ್ನೇ ಕೊಡುತ್ತಿಲ್ಲ ಎಂದು ಆಕ್ಷೇಪಣೆ ಮಾಡಿದ್ದಾರೆ. ಆದರೆ ಮೊನ್ನೆ ತಾನೆ ಆ ಖಾದೀ ಬೋರ್ಡಿನ ವಿಚಾರದಲ್ಲಿ 60 ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು ದುರುಪಯೋಗವಾಗಿದೆ ಅಥವ ಲೆಕ್ಕಾಚಾರವಿಲ್ಲ ಎಂಬುದಾಗಿ ಪತ್ರಿಕೆಗಳಲ್ಲೆಲ್ಲಾ ಬಂದಿತ್ತು. ಅದೇ ರೀತಿ ಶರಾವತಿಯಲ್ಲಿ ಕೋಟಿಗಟ್ಟಲೆ ಹಣ ದುರುಪಯೋಗವಾಗಿದೆ, ಕಬ್ಬಿಣ, ಸಿಮೆಂಟು ಕಳವಾಗುತ್ತಿದೆ ಎಂದು ಜನ ಆಡಿಕೊಳ್ಳುತ್ತಿದ್ದಾರೆ. ಹೀಗೆಲ್ಲ ಹಗಲು ದರೋಡೆ ನಡೆಯುತ್ತಿದ್ದರೂ ಇದನ್ನೆಲ್ಲ ಕೇಳುವವರೇ ಇಲ್ಲ. ಆದರೆ ಕೆಲವು ಹರಿಜನರು ಮಾತ್ರ ಹಣ ದುರುಪಯೋಗ ಮಾಡಿದರು ಎಂದು ಸುಲಭವಾಗಿ ಹೇಳುತ್ತಿರುವುದು ಯಾವ ನೀತಿ ? ಅಂಥವರನ್ನೂ ಶಿಕ್ಷಿಸದೆ ಬಿಡಬೇಡಿ ಆದರೆ ನಾನು ಹೇಳುತ್ತೇನೆ ಹರಿಜನರಾಗಲೀ ಬೇರೆ ಯಾರೇ ಆಗಲಿ ಅವರೆಷ್ಟು ದೊಡ್ಡವರೇ ಆಗಿರಲೀ ಚಿಕ್ಕವರೇ ಆಗಲಿ ಕಳ್ಳತನ ಮಾಡತಕ್ಕವರ ಬಗ್ಗೆ ಸರಕಾರಿ ಸ್ವತ್ತು, ಹಣ, ಹಾಗೂ ಅಧಿಕಾರ ದುರುಪಯೋಗ ಮಾಡಿದರೆ ಗದಾಪ್ರಹಾರ ಆಗಲೇ ಬೇಕೆಂದು ಹೇಳುತ್ತೇನೆ. ಹಾಗೆ ಒಂದು ನ್ಯಾಯ ನೀತಿಯಲ್ಲಿ ನಡೆಯುವುದಾಗದಿದ್ದರೆ ಅಂಥ ದುಷ್ಟರನ್ನು ಶಿಕ್ಷಿಸಲು ಸರ್ಕಾರದವರೇಕೆ ಅಂಜಬೇಕು ? ಹೀಗೆ ಸರ್ಕಾರ ಸುಮ್ಮನಿರಬೇಕಾಗಿದ್ದರೆ ಅವರಮೇಲೆ ಈ ಅಲ್ಪ ಜನರ ಪ್ರಭಾವ ಇರಲೇಬೇಕೆಂದು ಕಾಣುತ್ತದೆ. ಹೀಗೆ ಈ ತುಂಟ ಸಮಾಜ ವಿರೋಧಿ ಜನರ ಪ್ರಭಾವಕ್ಕೆ ಒಳಗಾಗತಕ್ಕ ಸರ್ಕಾರ

(ಶ್ರೀ ಎಸ್. ಗೋಪಾಲ ಸಾಲೆನ್ನ)

ವಿದ್ದರೆ ಅವರಿಗೆ ಜನರ ನೈತಿಕ ಮಟ್ಟವನ್ನು ತಿದ್ದಲು ಹೇಗೆ ಸಾಧ್ಯವಾಗುತ್ತದೆ? ಇಂಥ ಅನಾಚಾರಗಳನ್ನು ಮಾಡತಕ್ಕ ಅಥವ ಅವುಗಳಿಗೆ ಅವಕಾಶಕೊಡತಕ್ಕ ಜನರು ಆಡಳಿತದಲ್ಲಿರುವುದಕ್ಕೆ ಅರ್ಹರಲ್ಲ. ಅವರು ಸ್ವಲ್ಪ ದಿವಸದ ಮಟ್ಟಿಗಾದರೂ ವಿರೋಧಪಕ್ಷವಿರುವ ಈ ಕಡೆ ಬೆಂಚುಗಳಿಗೆ ಬಂದು ಕುಳಿತು ಕೊಂಡು ಇಲ್ಲಿರತಕ್ಕ ಪ್ರತಿಪಕ್ಷದವರಿಗೆ ಆ ಅಧಿಕಾರ ತಾವಾಗಿ ಬಿಟ್ಟುಕೊಡುವುದು ಒಳ್ಳೆಯದೆಂದು ಹೇಳುತ್ತೇನೆ. ಈ ಕಡೆಯವರಾದರೂ ಹೇಗೆ ವಿಚಕ್ಷಣೆಯಿಂದ ಆಡಳಿತ ನಡೆಸುತ್ತಾರೆಂಬುದುದನ್ನು ತಾವು ನೋಡಿ ಆದರೂ ಕಲಿತುಕೊಂಡು ಸಂತೋಷಪಡಿ. ಇದನ್ನು ಹೀಗೆ ಬಿಟ್ಟು ಬಿಟ್ಟರೆ ದೇಶಕ್ಕೆ ಇನ್ನೂ ದೊಡ್ಡ ಗಂಡಾಂತರ ಆಗಬಹುದು. ಈ ವಿಚಾರವನ್ನು ಅಗತ್ಯವಾಗಿ ಸರ್ಕಾರದವರು ತಿಳಿದುಕೊಳ್ಳಬೇಕು. ಈ ವಿದ್ಯುಚ್ಛಕ್ತಿ ಮಂಡಳಿಯಾದರೋ ಬಹಳ ಉಪಯುಕ್ತವಾದಂಥ ಒಂದು ಸಂಸ್ಥೆ. ಹಾಗೂ ಬಹಳ ದೊಡ್ಡ ಜವಾಬ್ದಾರಿಯನ್ನು ಹೊತ್ತಿರುವಂಥ ಸಂಸ್ಥೆ. ಈ ದಿವಸ ನಮ್ಮ ಇಡೀ ರಾಜ್ಯದ ಆರ್ಥಿಕ ಆಗುಹೋಗುಗಳು ಈ ಬೋರ್ಡಿನ ಜವಾಬ್ದಾರಿಯಮೇಲೆ ನಿಂತಿವೆ. ಅದುದರಿಂದ ಈಗ ಇದು ಇರುವ ರೀತಿಯಲ್ಲೇ ಬೆಳೆಯುವುದಕ್ಕೆ ಬಿಟ್ಟರೆ ಇದರಿಂದ ಸರ್ಕಾರಕ್ಕೂ ಸುಖವಿಲ್ಲ, ಜನರಿಗೂ ಸುಖವಿಲ್ಲ. ರಾಷ್ಟ್ರದ ಉನ್ನತಿಗೂ ಕಷ್ಟ, ಆದುದರಿಂದ ಇದನ್ನು ಕೂಡಲೆ ನಮ್ಮ ಸರ್ಕಾರ ಪೂರ್ತಿಯಾಗಿ ವಶಪಡಿಸಿಕೊಳ್ಳಬೇಕು. ಸರ್ಕಾರವೇ ಇದನ್ನು ನಡೆಸುವುದು ಉತ್ತಮ ಎಂದು ಹೇಳುತ್ತೇನೆ. ಆದರೆ ನಾನು ಇದರಲ್ಲಿ ಯಾರನ್ನೂ ದುರ್ಜನರೆಂದು ಹೇಳುತ್ತಿಲ್ಲ. ಶ್ರೀ ನಿಜಲಿಂಗಪ್ಪನವರ ಬಗ್ಗೆ ನನಗೆ ಬಹಳ ಅಭಿಮಾನವಿದೆ; ಅವರು ಬಹಳ ಒಳ್ಳೇ ಮನುಷ್ಯರು; ಆದರೆ ಈ ದಿವಸ ಜನರು ಅವರ ಒಳ್ಳೇತನವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಅವರು ಈ ಜನತೆಯನ್ನು ಹಾಳುಮಾಡತಕ್ಕ ಶಕ್ತಿಯನ್ನು ಕೂಡಲೆ ತಡೆಗಟ್ಟಬೇಕು. ಇಲ್ಲದಿದ್ದರೆ ಅವರ ಕೀರ್ತಿ ಹಾಳಾಗುತ್ತದೆ, ದೇಶಕ್ಕೆ ಮುಂದೆ ದೊಡ್ಡ ಗಂಡಾಂತರ, ಕಷ್ಟಕಾಲ ಬರುತ್ತದೆ ಎಂದು ನಾನೀಗ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟು, ನನ್ನ ಮಾತುಗಳನ್ನು ಮುಗಿಸುತ್ತೇನೆ.

† **Sri D. PARAMESHWARAPPA** (Honnali).—Mr. Speaker, Sir, we are to day discussing the Budget Estimates of the Board of Electricity and the pamphlet-cum-report submitted by the Board of Electricity.

Mr. DEPUTY SPEAKER.—I extend the time by one hour.

Sri D. PARAMESHWARAPPA.—Now Sir, electricity has been playing a very important role in the progress of the country and now-a-days it has become a *sine quo non* in the progress of a nation, specially in the field of agriculture and industry.

Now, Sir, Mysore was the pioneer in the field of generating electricity and on this occasion I may be failing in my duty if I did not recollect the name of Sir Mirza Ismail, who as head of the administration in old Mysore, always put forth his efforts to electrify the rural areas and to achieve the progress of the erstwhile Mysore State.

The Board was constituted in 1957 and it has been functioning since then. Before coming to the constitution of the Board, I would like to analyse the activities of the Board in three aspects.

Mr. DEPUTY SPEAKER.—We shall continue to-morrow. The House now adjourns and will meet to-morrow at 8-30 A.M.

The House adjourned at Six of the Clock to meet again at Thirty Minutes past Eight of the Clock on Tuesday, the 1st October 1963.